ಶ್ರೀಃ

ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯಃ

ಸರ್ವವಿಘ್ನಹರ್ತೃ ಶ್ರೀಗಜಾನನಾಂತರ್ಗತ ಶ್ರೀಪಾರ್ವತೀಪತಿ-ರುದ್ರಾಂತರ್ಗತ ಶ್ರೀಭಾರತೀ ರಮಣ ಮುಖ್ಯಪ್ರಾಣಾಂತರ್ಗತ ಶ್ರೀ ಲಕ್ಷ್ಮೀನರಸಿಂಹಾಯ ನಮಃ॥

ಓಂ ಸಸೀತಾಲಕ್ಷ್ಮಣೋ ರಾಮಃಕೃಷ್ಣೌ ಶ್ರೀ ಪಾರ್ಥಮಧ್ವಪೌ
ಪಯಾಸೋ ನೃಹರಿರ್ವಾಣೇಚೋದಯಂತು ಧಿಯಃ ಸದಾ ॥೧॥
ವ್ಯಾಸ ಹಾರ್ದಾವಗಂತಾ ಕಃಪೂರ್ಣಪ್ರಜ್ಞಾತ್ ಋತೇsಪರಃ ।
ವ್ಯಾಸಸ್ಯ ಸವಿಧೇ ಮಧ್ವಃಭಾತ್ಯವೃತ್ತಿ ಮಾಪೇಯಿವಾನ್ ॥೨॥
ಶಂಕರಃ ಕಲಹಂ ಕುರ್ವನ್ ಕಥಂ ತತ್ತ್ವ ಬೋಧಕಃ ।
ಉದಾಸೀನಃ ಪರೋ ಯಸ್ಮಾತ್ ನ ಪ್ರಬುಧ್ಯೇದ್ಧಿ ತನ್ಮನಃ ॥೩॥
~~ಮಧ್ವಮಾದಿಗುರುಂ ನೌಮಿ ಹೃಷೀಕೇಶಂ ಪರಂ ಗುರುಮ್ ।~~
ರಾಜರಾಜೇಶ್ವರಂ ಶ್ರೌಮಿ ಮಂಗಳಾಪ್ಪಕ ತಾರಕಮ್ ।
ಟೀಕಾ ಪರಿಮಳಾಲ್ಲಬ್ಧ ವಿದ್ಯಾಮೋದಂ ಸಮಸ್ತದಮ್ ॥
ಫಲಿಮಾರು ಮಠೀಯೋsಯಂ ವಿದ್ಯಾಧೀಶಾಖ್ಯಭಿಕ್ಷುಕಃ ।
ಶ್ರೀಮದಾಚಾರ್ಯ ತಾತ್ಪರ್ಯ ನಿರ್ಣಯಾರ್ಥ ಪ್ರಕಾಶನೇ ।
ಚಾಪಲಂ ಕರ್ಮ ಕುರ್ವಾಣೋ ಹಾಸ್ಯಪಾತ್ರಂ ಭವಿಷ್ಯತಿ ॥
ತಥಾ ಪೀಯಂ ಮಹಾಪೂಜಾ ವಿಷ್ಣುಧರ್ಮೇಣ ನಿಷ್ಫಲಾ ।

ಮಂಗಲಮಯ: ಪದ್ಮಕದಂಬಕವಾಗಿರುವ ಶ್ರೀಮನ್ಮಹಾಭಾರತತಾತ್ಪರ್ಯನಿರ್ಣಯವು ಶ್ರೀಮದಾಚಾರ್ಯರ ಅಮೂಲ್ಯವಾದಕೃತಿರತ್ನ. ಶ್ರೀಮದಾಚಾರ್ಯರ ಅನುಭವದ ಒರೆಗಲ್ಲಿನಿಂದ ಸಂಘೃಷ್ಟವಾಗಿ ಕಂಗೊಳಿಸುವ ಸುವರ್ಣಾಕ್ಷರಮಾಲಿಕೆ. ಆಚಾರ್ಯರ ಅಂತರಾಳದಿಂದ ಹೊರಹೊಮ್ಮಿ ಚಿಮ್ಮಿದಭಕ್ತಿಯಬಿಲುಮೆ. ಸಂಸಾರಸಾಗರದ ತರಣಿಕ್ಕೆ ಇದುವೇ ತಾರಕ ಮಂತ್ರ. ಸಮಸ್ತಪಾಪಗಳಪ್ರಣಾಶಕಹಾಗೂ ಪುರುಷಾಭಿಲಷಿತಸರ್ವಸಿದ್ಧಿಪ್ರದಾಯಕ. ಈ ನಿರ್ಣಯಗ್ರಂಥಪ್ರತಿಪಾದ್ಯ ಪ್ರಮೇಯೋಪಾಸನೆಯೇ ಭವಪಾಶಕೆ ಮೋಚಕ. ಈವಚನ ಸುಧೆಯೇಮೃತ್ಯುವಿನ ದವಡೆಯಿಂದ ತಪ್ಪಿಸುವ ದಿವ್ಯೌಷಧ. ಈ ದಿವ್ಯಮಂದಾಕಿನಿಯ ಅವಗಾಹನೆಗಾಗಿ ಸಂಕಲ್ಪಿಸೋಣ ॥

ಓಂ ನಾರಾಯಣಾಯ ಪರಿಪೂರ್ಣಗುಣಾರ್ಣವಾಯ
ವಿಶ್ವೋದಯಸ್ಥಿತಿಲಯೋನ್ಮಿಯತಿಪ್ರದಾಯ ॥
ಜ್ಞಾನಪ್ರದಾಯ ವಿಬುಧಾಸುರ ಸೌಖ್ಯದುಃಖ
ಸತ್ಕಾರಣಾಯ ವಿತತಾಯ ನಮೋ ನಮಸ್ತೇ ॥೦॥

ಅನ್ವಯಾರ್ಥ—ಪರಿಪೂರ್ಣಗುಣಾರ್ಣವಾಯ– (ಪರಿಪೂರ್ಣ)–ನಿರವಧಿಕವಾದ (ಗುಣ)–ಗುಣಗಳಿಂದ (ಅರ್ಣವಾಯ)-ಸಹಸುದ್ರದಂತಿರುವ ವಿಶ್ವೋದಯಸ್ಥಿತಿಲಯೋ ನ್ನಿಯಮನಪ್ರದಾಯ–(ವಿಶ್ವ)-ಸಮಸ್ತ ಪ್ರಪಂಚಕ್ಕೆ (ಉದಯ)-ಸೃಷ್ಟಿಯನ್ನು (ಸ್ಥಿತಿ)-ಅಸ್ತಿತ್ವವನ್ನು (ಲಯ)-ಸಂಹಾರವನ್ನು (ಉನ್ನಿಯಮನ)-ಪ್ರೇರಣೆಗಳನ್ನು (ಪ್ರದಾಯ)–ಕೊಡುವ, ಜ್ಞಾನಪ್ರದಾಯ–ಜ್ಞಾನವನ್ನು ನೀಡುವ, ವಿಬುಧಾಸುರ ಸೌಖ್ಯದುಃಖಸತ್ಕಾರಣಾಯ– (ವಿಬುಧ)–ದೇವತೆಗಳ ಹಾಗೂ ದೇವತೆಯಂತಹ ಉತ್ತಮ ಜೀವರ, (ಸೌಖ್ಯ)-ಉತ್ತಮ ಆನಂದಕ್ಕೆ (ಮೋಕ್ಷ), (ಅಸುರ)-ದೈತ್ಯರ ಹಾಗೂ ಅಧಮ ಜೀವರ, (ದುಃಖ)–ದುಃಖರೂಪವಾದ ಅಂಧತಮಸ್ಸಿಗೆ (ವಿಬುಧಾ ಸುರ)-ಮಧ್ಯಮ ಜೀವರ, (ಸೌಖ್ಯದುಃಖ)–ಸುಖ ದುಃಖ ಮಿಶ್ರವಾದ ನಿತ್ಯ ಸಂಸಾ ರಕ್ಕೂ, ಸತ್ಕಾರಣಾಯ–ಸ್ವತಂತ್ರ ನಿಮಿತ್ತನಾದ, ವಿತತಾಯ-ವಿಶಿಷ್ಟನಾಗಿಯೇ ದೇ ಶದ ಎಲ್ಲೆಡೆಯಲ್ಲೂ ವ್ಯಾಪಿಸಿರತಕ್ಕ, ನಾರಾಯಣಾಯ–ನಾರಾಯಣನೆಂಬ ಹೆಸರುಳ್ಳ ತೇ-ಪ್ರತ್ಯಕ್ಷವಾಗಿಕಾಣಿಸತಕ್ಕ ನಿನಗೆ, ನಮೋ ನಮಃ–ಅನಂತಾನಂತ ಪ್ರಣಾಮಗಳು.

ತಾತ್ಪರ್ಯಾರ್ಥ—ಶ್ರೀಮನ್ನಾರಾಯಣನು ಶ್ರೀ ರಾಮನಾಗಿ, ಶ್ರೀ ಕೃಷ್ಣನಾಗಿ, ಶ್ರೀ ವ್ಯಾಸನಾಗಿಯೂ ಈ ಗ್ರಂಥ ಪ್ರತಿಪಾದ್ಯ. ಆದುದರಿಂದ ಈತ ಅಧಿಕೃತ ದೇವತೆ. ಶ್ರೀ ಮನ್ನಾರಾಯಣನ ಗುಣಗಳಿಗೆ ಇತಿಮಿತಿಯಿಲ್ಲ. ಇವನ ಗುಣಗಳನ್ನು ಅಂಕೆ ಸಂಖ್ಯೆ ಗಳಿಂದ ಎಣಿಸಿ ಗುರುತಿಸಿದವರಿಲ್ಲ. ಭಗವಂತನ ಅನಂತಾನಂತ ಗುಣಗಳಿಗೆ ಯಾವ ದೇಶವೂ ಸೀಮೆಯಾಗಲಾರದು. ಅದರೆ ಸರ್ವತ್ರವ್ಯಾಪ್ತಗಳು. ಭಗವದ್ಗುಣ ಗಳಿಗೆ ಕಾಲದ ಅವಧಿಯೂ ಇಲ್ಲ. ಗುಣಗಳು ಸಾರ್ವಕಾಲಿಕ ನಿತ್ಯ.ಆದುದರಿಂದಲೇ ಈ ಗುಣಗಳು ಪರಿತಃಪೂರ್ಣಗಳು. ಸಮಸ್ತ ಪ್ರಪಂಚಕ್ಕೂ ಸೃಷ್ಟಿ, ಸ್ಥಿತಿ, ಸಂಹಾರ ನಿಯಮನೆಗಳೂ ಭಗವಂತನಿಂದಲೇ. ಚೇತನಗಳ ಅಜ್ಞಾನ, ಜ್ಞಾನಗಳೂ, ಬಂಧ ಮೋಕ್ಷಗಳೂ ಶ್ರೀಹರಿಯಧೀನ. ಭಕ್ತರಾದ ಉತ್ತಮ ಜೀವರಿಗೆ ಆನಂದಮಯ ಮುಕ್ತಿಯನ್ನೂ, ದುಷ್ಟರಾದ ಅಧಮಜೀವರಾಶಿಗೆ ನಿತ್ಯ ದುಃಖ ಸ್ವರೂಪವಾದ ಅಂಧಂತಮಸ್ಸನ್ನೂ, ಮಧ್ಯಮಜೀವರಾಶಿಗೆ ಸುಖ ದುಃಖ ಮಿಶ್ರವಾದ ನಿತ್ಯ ಸಂಸಾರ ವನ್ನೂ ವಿತರಣೆ ಮಾಡುವುದರಲ್ಲಿ ಶ್ರೀಹರಿಯದೇ ಸಂಪೂರ್ಣ ಅಧಿಕಾರ. ದಶದಿಶೆ ಯಲ್ಲೂ ವಿಶಿಷ್ಟನಾಗಿಯೇ ವ್ಯಾಪಿಸಿದ್ದಾನೆ. ಆದುದರಿಂದ ವಿಶಿಷ್ಟ ದೇವತೆಯೂ ಹೌದು. ಶ್ರೀಮದಾಚಾರ್ಯರಿಗೆ ಸದಾ ಪ್ರತ್ಯಕ್ಷನಾಗಿರುವ ಸರ್ವೋತ್ತಮ ನಾದ ಶ್ರೀ ಮನ್ನಾರಾಯಣನೇ ಅವರ ಪರಮೇಷ್ಟದೇವತೆ. ಭಗವದ್ಭಕ್ತಾಗ್ರೇಸರ

ರಾದ ಶ್ರೀಮದಾಚಾರ್ಯರು ಪ್ರತಿಕ್ಷಣಕ್ಕೆ ಪರಮಾತ್ಮನಿಗೆ ಪ್ರಣಾಮ ಪರಂಪರೆಯನ್ನು ಸಮರ್ಪಿಸುತ್ತಾರೆ. ಆದರೂ ಸಂಪ್ರದಾಯದಂತೆ ಶಿಷ್ಯರಿಗೆ ಶಿಕ್ಷಣವನ್ನು ಈಯುವುದಕ್ಕಾಗಿಯೇ ಭಕ್ತಾದಿಗಳ ಪೂರ್ವಕವಾದ ನಮನ ಮಾಲಿಕೆಯನ್ನೇ ಮಾಡಿ ಗ್ರಂಥದಲ್ಲಿ ಸೇರಿಸಿದ್ದಾರೆ.

ವಿಶೇಷಾರ್ಥ—ಇಲ್ಲಿ ಅನ್ವರ್ಥಕವಾದ ನಾರಾಯಣ ಶಬ್ದವನ್ನು ಪ್ರಯೋಗ ಮಾಡಿ ಗುಣಪರಿಪೂರ್ಣತ್ವವೆಂಬ ಪರಬ್ರಹ್ಮಲಕ್ಷಣವನ್ನು ತಿಳಿಸಿದ್ದಾರೆ. "ಅಥಕಸ್ಮಾದುಚ್ಯತೇ ಬೃಂಹತಿ ಬೃಂಹಯತಿ ಚ" ಯೆಂಬ ಶ್ರುತಿಗನುಗುಣವಾಗಿ "ಓಂ ಅಥಾತೋ ಬ್ರಹ್ಮ ಜಿಜ್ಞಾಸಾ" ಎಂಬ ಪ್ರಥಮ ಬ್ರಹ್ಮ ಸೂತ್ರದಲ್ಲಿ ಸೂಚಿಸಿ, ಸಮಗ್ರ ಪ್ರಥಮಾರ್ಥಾಯದಲ್ಲಿ ಸಮರ್ಥಿಸಿದ ಗುಣಪರಿಪೂರ್ಣತ್ವವೇ ಭಗವಂತನ ಲಕ್ಷಣ. ಇದು ನಾರಾಯಣ ಶಬ್ದದ ಅರ್ಥವೂ ಹೌದು. ನಾರಾಣಾಂ—ಸಕಲಗುಣಗಳಿಗೂ, ಅಯನಂ—ಆಶ್ರಯನು.

(2) "ಜನ್ಮಾದ್ಯಸ್ಯಯತಃ" ಎಂಬ ಎರಡನೆಯ ಸೂತ್ರದಲ್ಲಿ "ಯತೋವಾ ಇಮಾನಿ ಭೂತಾನಿ ಜಾಯಂತೇ ,ಯೇನ ಜಾತಾನಿ ಜೀವಂತಿ, ಯತ್ ಪ್ರಯಂತಿ, ಅಭಿಸಂವಿಶಂತಿ ತದ್ ವಿಜಿಜ್ಞಾಸಸ್ವ, ತದ್ಬ್ರಹ್ಮೇತಿ" ಯೆಂಬ ಶ್ರುತ್ಯರ್ಥವನ್ನೂ, "ಉತ್ಪತ್ತಿ ಸ್ಥಿತಿಸಂಹಾರಃ ನಿಯತಿಜ್ಞಾನ ಮಾವೃತಿ:। ಬಂಧ ಮೋಕ್ಷೌಚ ಪುರುಷಾತ್ ಯಸ್ಮಾತ್ ಸಹರಿರೇಕರಾಟ್" ಎಂಬ ಸ್ಮೃತ್ಯರ್ಥವನ್ನೂ ಸಮರ್ಥಿಸುತ್ತಾ ಜಗಜ್ಜನ್ಮಾದಿಕಾರಣತ್ವವೆಂಬ ಪರಮಾತ್ಮನಲಕ್ಷಣವನ್ನು ಸಮರ್ಥಿಸಿದ್ದಾರೆ. ಶ್ರೀಮದಾಚಾರ್ಯರು ಈ ಲಕ್ಷಣವನ್ನು ಈ ಪದ್ಯದಲ್ಲಿ "ವಿಶ್ವೋದಯ ಸ್ಥಿತಿಲಯೋನ್ನೇತ ಪ್ರದಾಯ" ಎಂಬುದಾಗಿ ನಾರಾಯಣನಿಗೆ ವಿಶೇಷಣ ಕೊಟ್ಟು ತಿಳಿಸಿದ್ದಾರೆ.

(3) ಜ್ಞಾನದಾನಕ್ಕೆ ಚೇತನರು ಮಾತ್ರ ಪಾತ್ರರು. ಜಡಕ್ಕೆ ಈ ಸಂಯೋಗವಿಲ್ಲ. ಆದರೆ ಉದಯ, ಸ್ಥಿತಿ, ಲಯ, ಉನ್ನಿಯತಿಗಳು ಎಲ್ಲ ವಸ್ತುಗಳಲ್ಲಿ ಸಾಧಾರಣ. ಈ ವೈಲಕ್ಷಣ್ಯವನ್ನು ತಿಳಿಸಲು "ವಿಶ್ವೋದಯ ಸ್ಥಿತಿಲಯೋನ್ನಿಯತಿಪ್ರದಾಯ" ಎಂಬುದನ್ನು ಮಾತ್ರ ಗುಂಪಾಗಿ ಹೇಳಿ "ಜ್ಞಾನಪ್ರದಾಯ" ಎಂಬುದನ್ನು ಪ್ರತ್ಯೇಕವಾಗಿ ತಿಳಿಸಿದ್ದಾರೆ.

(4) ಸಜ್ಜನರಿಗೆ ಮಾತ್ರ ಮುಕ್ತಿ. ದುಷ್ಟರಿಗೆ ವಿಶ್ವಾವಸ್ಥೆ. ಅಧಮರಿಗೆ ಅಂಧತಮಸ್ಸು ಎಂಬ ಪ್ರಮೇಯ ಶ್ರುತಿಸಮ್ಮತ ಎಂದು ಆಚಾರ್ಯರು ಈ ಗ್ರಂಥದ

ಪ್ರಥಮಾಧ್ಯಾಯದಲ್ಲಿಯೇ ತಿಳಿಸಲಿದ್ದಾರೆ. "ಶ್ವಶ್ವೇ ವೀರ: ಉಗ್ರಮುಗ್ರಂ ದಮಾಯನ್" ಇತ್ಯಾದಿ ಶ್ರುತಿಗೆ ವ್ಯಾಖ್ಯಾನ ಮಾಡಿದಾಗ ಈ ಅರ್ಥ ಮನದಟ್ಟಾಗುವುದು. ॥೧॥

॥ ೨ ॥

ಆಸೀದುದಾರಗುಣವಾರಿಧಿರಪ್ರಮೇಯೋ,

ನಾರಾಯಣ: ಪರತಮ: ಪರಮಾತ್ಮ ಏಕ: ।

ಸಂಶಾಂತಸಂವಿದಖಿಲಂ ಜಠರೇ ನಿಧಾಯ

ಲಕ್ಷ್ಮೀಭುಜಾಂತರಗತಃ ಸ್ವರತೋಽಪಿಚಾಗ್ರೇ ॥೨॥

ಅನ್ವಯಾರ್ಥ—ಉದಾರಗುಣವಾರಿಧಿಃ-[ಉದಾರ[-ಉತ್ಕೃಷ್ಟವಾದ, [ಗುಣ]-ಗುಣಗಳಿಂದ,[ವಾರಿಧಿಃ]-ಸಮುದ್ರದಂತಿರುವ,(ಅಪ್ರಮೇಯಃ)-ಸರ್ವಾತ್ಮನಾ (ಸಾಕಲ್ಯೇನ) ತಿಳಿಯಲಶಕ್ಯನಾದ, (ಪರಮಾತ್)-ಶ್ರೇಷ್ಠರಾದ ರಮಾ ಬ್ರಹ್ಮಾದಿಗಳಿಗಿಂತಲೂ, (ಪರತಮಃ)-ಅತ್ಯಂತ ಉತ್ಕೃಷ್ಟನಾದ ಸಂಶಾಂತಸಂವಿತ್-[ಸಂಶಾಂತ]-ನಿರ್ವಿಕಾರವಾದ, [ಸಂವಿತ್]-ಜ್ಞಾನವುಳ್ಳ, (ಸ:)-ಶ್ರೀಮನ್ನಾರಾಯಣನು,ಏಕಃ—ಒಬ್ಬನೇ, ಅಗ್ರೇ-ಸೃಷ್ಟಿಯಮೊದಲು ಅಂದರೆ ಪ್ರಳಯಕಾಲದಲ್ಲಿ,ಅಖಿಲಂ-ಸಮಸ್ತವಿಶ್ವವನ್ನು, ಜಠರೇ-ಉದರದಲ್ಲಿ, ನಿಧಾಯ-ಇಟ್ಟು, ಸ್ವರತೋಽಪಿ—ಇತರರ ಅಪೇಕ್ಷೆಯಿಲ್ಲದೆ ತೃಪ್ತನಾಗಿದ್ದರೂ, ಲಕ್ಷ್ಮೀಭುಜಾಂತರಗತ:ಸನ್—ಲಕ್ಷ್ಮಿದೇವಿಯರತೋಳುಗಳ ಮಧ್ಯಭಾಗವನ್ನು ಸೇರಿದವನಾಗಿ, ಆಸೀತ್—ಸ್ವತಂತ್ರನಾಗಿಯೇ ಇದ್ದನು.

ತಾತ್ಪರ್ಯ—ಶ್ರೀಮನ್ನಾರಾಯಣನು ಸಕಲಕಲ್ಯಾಣಗುಣಗಳಿಗೂಆಕರ. ಶ್ರೀ ಬ್ರಹ್ಮರುದ್ರರೂ ಪರಿಪೂರ್ಣವಾಗಿ ಇವನನ್ನು ತಿಳಿಯಲಾರರು. ಪ್ರಳಯಕಾಲದಲ್ಲಿ ಸಮಸ್ತ ಪ್ರಪಂಚಕ್ಕೂ ಇವನ ಉದರದಲ್ಲಿಯೇ ವಾಸವು. ಈ ಕಾಲದಲ್ಲಿ ಭಗವಂತನ ಹೊರತು ಪ್ರತಿಯೊಬ್ಬ ಚೇತನನ ಜ್ಞಾನಕ್ಕೂ ವಿಕಾರವಿದೆ. ಇವನ ಚೈತನ್ಯಕ್ಕೆ ಚ್ಯುತಿಯಿಲ್ಲ. ಆದುದರಿಂದಲೇ "ಪ್ರಳಯಕಾಲದಲ್ಲಿ ನಾರಾಯಣನೊಬ್ಬನೇ ಇದ್ದಾನೆ" ಎಂದು ಶ್ರುತಿಗಳು ಸಾರುತ್ತಿವೆ. ಸ್ವತಂತ್ರನಾಗಿ ಇರುವುದು. ಇವನೊಬ್ಬನೇ ತಾನೆ? ಈ ಎಲ್ಲಾ ಕಾರಣದಿಂದ ಇವನು ಸರ್ವರನ್ನೂ ಮೀರಿ ನಿಂತು ಪುರುಷೋತ್ತಮನೆನಿಸಿದ್ದಾನೆ. ಈ ಪರಮಾತ್ಮನು ನಿತ್ಯ ತೃಪ್ತ, ನಿತ್ಯಾನಂದ ಸ್ವರೂಪ. ಇತರಾಪೇಕ್ಷೆಯಿಲ್ಲದೇ ಸದಾತೃಪ್ತನಾದ ಈಪರಮಾತ್ಮನಿಗೆ ಲಕ್ಷ್ಮಿದೇವಿಯರ ಆಲಿಂಗನೆ ತೃಪ್ತಿಗಾಗಿಯೆನ್ನುವುದು ಸರಿಯಾದೀತೆ? ಲಕ್ಷ್ಮಿದೇವಿಯರ ಸಂತೋಷಕ್ಕಾಗಿಯೇ ಈ ಕ್ರೀಡೆ.

ವಿಶೇಷಾಂಶ—ಶ್ರೀ ವಾದಿರಾಜರು 'ಸಂಶಾಂತಸಂವಿತ್' ಎಂಬ ಪದಕ್ಕೆ ತನ್ನ ಹೃದಯದಲ್ಲೇ ಹುದುಗಿದ. (ಸಂವಿತ್) ಜ್ಞಾನವುಳ್ಳವನು ಭಗವಂತ ಎಂದು ವ್ಯಾಖ್ಯಾನ ಮಾಡಿದ್ದಾರೆ. ಪ್ರಳಯ ಕಾಲದಲ್ಲಿ ಭಗವಂತನ ಜ್ಞಾನಕ್ಕೆ ಅಭಿವ್ಯಕ್ತಿ ಇಲ್ಲ. ಜ್ಞಾನದ ಕಾರ್ಯವಾವ ಉಪದೇಶಾದಿಗಳಿಗಾಗಿ ತಾನೇ ಜ್ಞಾನದ ಅಭವ್ಯಕ್ತಿಯ ಅಪೇಕ್ಷೆ. ಪ್ರಳಯದಲ್ಲಿ ಉಪದೇಶ್ಯರಾದ ದೇವತೆಗಳೇ ಇಲ್ಲವೆಂದಮೇಲೆ ಉಪದೇಶದಮಾತೆಲ್ಲಿಂದ ಬುತು. ತತ್ತ್ವೋಪದೇಶಕ್ಕಾಗಿ ಜ್ಞಾನದ ಅಭಿವ್ಯಕ್ತಿಯ ಅವಶ್ಯಕತೆ ಸೃಷ್ಟಿ ಕಾಲದಲ್ಲಿ ತಾನೆ? ಪ್ರಳಯದಲ್ಲಿ ತತ್ತ್ವೋಪದೇಶ ನಡೆಯೊದೀಲ್ಲವೆಂದೇ ಇದರ ಭಾವ॥೨॥

॥ ೩ ॥

ತಸ್ಯೋದರಸ್ಥಜಗತಃ ಸದಮಂದಸಾಂದ್ರ
ಸ್ವಾನಂದತುಷ್ಟವಪುಷೋಽಪಿರಮಾರಮಸ್ಯ ।
ಭೂತ್ಯೈ ನಿಜಾಶ್ರಿತಜನಸ್ಯ ಹಿ ಸೃಜ್ಯಸೃಷ್ಟಾ
ವೀಕ್ಷಾ ಬಭೂವ ಪರನಾಮನಿಮೇಷಕಾಂತೇ ॥೩॥

ಅನ್ವಯಾರ್ಥ—ಪರನಾಮನಿಮೇಷಕಾಂತೇ-(ಪರನಾಮ)-'ಪರ' ಎಂಬ ಹೆಸರುಳ್ಳ ಚತುರ್ಮುಖನ ನೂರು ಸಂವತ್ಸರ ಪರಿಮಿತವಾದ, (ನಿಮೇಷಕ)-ಭಗವಂತನ ಕಣ್ಣುಮುಚ್ಚಾಲೆಯ ಕಾಲವಾದ ಪ್ರಳಯದ, (ಅಂತೇ)-ಕೊನೆಯಲ್ಲಿ ಉದರಸ್ಥಜಗತಃ-(ಉದರ)-ಹೊಟ್ಟೆಯಲ್ಲಿ, (ಸ್ಥ)-ಇರತಕ್ಕ, (ಜಗತ್)-ಪ್ರಪಂಚವುಳ್ಳ, ಸದಮಂದ ಸಾಂದ್ರಸ್ವಾನಂದತುಷ್ಟವಪುಷಃಅಪಿ-(ಸತ್)-ದೋಷ ಶೂನ್ಯವಾದ, (ಅಮಂದ)-ಪೂರ್ಣವಾದ, [ಸಾಂದ್ರ[-ನಿರಂತರವಾದ, [ಸ್ವ]-ಸ್ವರೂಪಭೂತವಾದ, ಆನಂದ-ಸುಖದಿಂದ, (ತುಷ್ಟ)-ಇತರ ಫಲಾಪೇಕ್ಷಾರಹಿತವಾದ, (ವಪುಷಃಅಪಿ)-ದೇಹವುಳ್ಳವನಾದರೂ, ರಮಾರಮಸ್ಯ-ಲಕ್ಷ್ಮಿದೇವಿಗೂ ಸಂತೋಷವನ್ನೀಯುವ, ತಸ್ಯ-ಶ್ರೀ ನಾರಾಯಣನಿಗೆ, ನಿಜಾಶ್ರಿತಜನಸ್ಯ-(ನಿಜ)-ತನ್ನವರೂ, (ಆಶ್ರಿತ)-ತನ್ನ ಆಶ್ರಯದಲ್ಲೂ ಇರತಕ್ಕ, (ಜನಸ್ಯ)-ಬ್ರಹ್ಮಾದಿ ಚೇತನರಿಗೆ, ಭೂತ್ಯೈ-ಐಶ್ವರ್ಯವನ್ನೀಯಲು, ಸೃಜ್ಯಸೃಷ್ಟೌ-(ಸೃಜ್ಯ)-ಇದೇ ಕಲ್ಪದಲ್ಲಿ ಸೃಷ್ಟಿಸಲು ಯೋಗ್ಯರಾದ ಜನರಿಗೆ, (ಸೃಷ್ಟೌ)-ಸೃಷ್ಟಿಯ ವಿಷಯಕವಾದ, ಈಕ್ಷಾ-ಜ್ಞಾನವು, ಬಭೂವ-ಅಭಿವ್ಯಕ್ತವಾಯಿತು.

ತಾತ್ಪರ್ಯ—ಚತುರ್ಮುಖನ ಶತಸಂವತ್ಸರಗಳು ಸೃಷ್ಟಿಯ ಕಾಲ. ಅಂತೆಯೇ ಶತ ಸಂವತ್ಸರಗಳು ಪ್ರಳಯಕಾಲ. ಈ ಪ್ರಳಯಕಾಲವು ಭಗವಂತನಿಗೆ ಕಣ್ಣು ಮುಚ್ಚಿ ತೆಲೆಯುಂತಿದೆ, ಇದನ್ನೇ "ಪರ" ಎಂದು ಕರೆಯುತ್ತಾರೆ. ಪ್ರಳಯ ಕಾಲ ಸಂದಿತು. ಭಗವಂತನು ಜಗತ್ ಸೃಷ್ಟಿಯ ವಿಚಾರ ಮಾಡ ತೊಡಗಿದ. ಜೀವರಾಶಿಗಳು ಅನಂತಾನಂತ. ಇವೆಲ್ಲರಿಗೂ ಇದೇ ಕಲ್ಪದಲ್ಲಿ ಸೃಷ್ಟಿಯಿಲ್ಲ. ಈ ಸೃಷ್ಟಿಕಾಲ ದಲ್ಲಿ ಸೃಜ್ಯರಾದ ಜೀವರ ವ್ಯವಸ್ಥೆ ವಿಚಾರವೂ ನಡೆಯಿತು. ಆದರೆ ಒಂದು ಸಮಸ್ಯೆ ಇಲ್ಲಿದೆ "ದೇವರು ಗುಣಪರಿಪೂರ್ಣ. ಆದುದರಿಂದಲೇ ನಿತ್ಯತೃಪ್ತನೂ ಹೌದು. ಇಂತಹ ಮಹಾತ್ಮನಿಗೆ ಜಗತ್ಸೃಷ್ಟಿಯ ವಿಚಾರವೇಕೆ?"ಎಂದು. ಇದಕ್ಕಿಷ್ಟೇ ಸಮಾಧಾನ, ಸುಖೋದ್ರೇಕದಿಂದ ಲೋಕದಲ್ಲಿ ಪ್ರವೃತ್ತಿ ಕಂಡಿದೆ ಇಲ್ಲಿ ಯಾವ ಪ್ರಯೋಜನವೂ ಕಂಡುಬರುವುದಿಲ್ಲ. ನಿರತಿಶಯ ಸುಖಾಶ್ರಯನಾದ ದೇವರಲ್ಲೂ

ಇದು ಸಮಾನವಷ್ಟೇ. ಇಷ್ಟೇ ಅಲ್ಲ. ವರಪ್ರಯೋಜನವೂ ಇದೆ. "ನಾನು ಎಂತಹ ಧನ್ಯ. ಅಖಿಲಾಂಡಕೋಟಿ ಬ್ರಹ್ಮಾಂಡನಾಯಕನಾದ ಗಂಡ ಇನ್ಯಾರಿಗೆ ಇದ್ದಾರೆ. ನಾನೇ ಭಾಗ್ಯದೇವತೆ" ಇವು ಸೃಷ್ಟಿಯ ನಂತರ ಲಕ್ಷ್ಮೀದೇವಿಯು ಹರ್ಷೋದ್ಗಾರ. ಸತ್ಯ ಲೋಕಾಧಿಪತ್ಯಪ್ರಭೃತಿ ಮಹದೈಶ್ವರ್ಯವು ಸೃಷ್ಟಿಯ ಸಮನಂತರ ಚತುರ್ಮುಖ ಬ್ರಹ್ಮ ದೇವರಿಗೆ ಪ್ರಾಪ್ತವಾಗುತ್ತದೆ. ಹೀಗೆ ಭಗವಂತನನ್ನು ಶರಣು ಹೊಂದಿದ ಭಾಗ್ಯ ಗ್ರೇಸರರಿಗೆ ಒಂದೊಂದು ತರನಾದ ಸಂಪತ್ ಸೃಷ್ಟವಾಗುತ್ತದೆ. ಈ ವಿಭೂತಿಯ ವಿತರಣೆಯೇ ಭಗವಂತನ ಸೃಷ್ಟಿಗೆ ಮತ್ತೊಂದು ಪ್ರಯೋಜನ. ॥೩॥

॥ ೪ ॥

ಜೀವರು "ಮುಕ್ತರು" ಮತ್ತು "ಸಂಸಾರಿ"ಗಳು ಎಂದು ಎರಡು ಪ್ರಕಾರೋಪೇತರು. ಮುಕ್ತರನ್ನು ಮೂರು ವರ್ಗದಿಂದ ವಿಭಾಗಿಸಬಹುದು. [1] ಕ್ಲೇಶಲೇಶ ರಹಿತರಾಗಿ ಆನಂದವನ್ನು ಮಾತ್ರ ಅನುಭವಿಸುವವರು. [2] ಸುಖ ವಿಶ್ರಿತ ದುಃಖಾನುಭವಿಗಳಾಗಿ ನಿತ್ಯ ಸಂಸಾರಿಗಳೆನಿಸಿದವರು. [3] ದುಃಖ ಮಾತ್ರ ಭೋಕ್ತೃಗಳಾಗಿ ತಮೋನಿವಾಸಿಗಳು ಹೀಗೆ ಇವರವರ ಸ್ವರೂಪಕ್ಕೆ ಅವರಕವಾದ ಲಿಂಗದೇಹಕ್ಕೆ ಮೋಕ್ಷ[ಭಂಗ, ನಾಶ]ವಿದೆಯೆನ್ನುವ ನಿಮಿತ್ತದಿಂದ ಎಲ್ಲರನು ಮುಕ್ತರೆಂದೇ ಕರೆಯುತ್ತಾರೆ.

ಎರಡನೆಯ ಗುಂಪಿಗೆ ಸೇರಿದ ಅಮುಕ್ತರು ಅಥವಾ ಸಂಸಾರಿಗಳೂ ಮೂರು ತೆರನಾಗಿದ್ದಾರೆ. [1] ನಿರ್ದುಃಖರಾಗಿ ನಿತ್ಯತೃಪ್ತರಾಗಲರ್ಹರಾದ ಮೋಕ್ಷಯೋಗ್ಯರು

[2] ಸುಖ ದುಃಖ ಮಿಶ್ರ ಸ್ವರೂಪವಾದ ನಿತ್ಯ ಸಂಸಾರ ಯೋಗ್ಯರು. [3] ದುಃಖ ಮಾತ್ರಕ್ಕೆ ಆಶ್ರಯರಾದ ತಮೋಯೋಗ್ಯರು.

ಬ್ರಹ್ಮಾದಿ ದೇವತೆಗಳು ಮುನಿಗಳು, ಗಂಧರ್ವರು, ಮನುಜೋತ್ತಮರು, ಭೂಮಲ್ಲೋಕಪ್ರಾಪ್ತಿರೂಪ ಮುಕ್ತಿಯೋಗ್ಯರು. ಮನುಷ್ಯ ಮಧ್ಯಮರೇ ಮೊದಲಾದ ಮಧ್ಯಮ ಜೀವರು ತತ್ತ್ವಸಂಶಯವುಳ್ಳವರಾಗಿ ಸ್ವರ್ಗ ನರಕ ಭೂಮಿಗಳಲ್ಲಿ ಆಟ ಆಡುತ್ತಾ ಸುಖ ದುಃಖ ಮಿಶ್ರ ಭೋಕ್ತೃಗಳಾಗಲರ್ಹರು. ಮನುಷ್ಯಾಧಮರು ದೈತ್ಯರು ಅಂಧತಮಸ್ಸಿನಲ್ಲಿ ನಿತ್ಯದಲ್ಲೂ ದುಃಖೈಕ ಶರಣರಾಗಿ ವಾಸಿಸುತ್ತಾರೆ. ಪ್ರಳಯಕಾಲದಲ್ಲಿ ಎಲ್ಲಾ ಜೀವರೂ ಭಗವದುದರದೊಳು ವಾಸಿಸುತ್ತಾರೆ. ಮುಕ್ತರು ಧ್ಯಾನದಲ್ಲಾಸಕ್ತರಾಗಿದ್ದರೆ, ಸಂಸಾರಿಗಳು ನಿದ್ರಾವಸ್ಥೆಯಲ್ಲಿರುತ್ತಾರೆ. ಪ್ರಳಯ ಕಾಲದ ಕೊನೆಯ ಕ್ಷಣದಲ್ಲಿ ಶ್ರೀಮನ್ನಾರಾಯಣನು ದೇವ ಮಾನವ ದೈತ್ಯರ

ಕಡೆ ಕಣ್ಣನ್ನು ಹೊರಳಿಸಿ ಬೀರಿದ ದೃಷ್ಟಿಯ ಚಿತ್ರಣ ಇದೆ ಈ ಪದ್ಯದಲ್ಲಿ.

ದೃಷ್ಟ್ವಾ ಸ ಚೇತನಗಣಾನ್ ಜಠರೇ ಶಯಾನಾನ್
ಆನಂದ ಮಾತ್ರವಪುಷಃ ಸೃತಿವಿಪ್ರಮುಕ್ತಾನ್ ॥
ಧ್ಯಾನಂ ಗತಾನ್ ಸ್ವಗತಾಂಶ್ಚ ಸುಪ್ತಾನ್ ಸಂಪ್ರಾಪ್ತಾನ್
ಬ್ರಹ್ಮಾದಿಕಾನ್ ಕಲಿಪರಾನ್ ಮನುಜಾನ್ ತಥೈಕ್ಷತ್ ॥೪॥

ಅನ್ವಯಮುಖ :—ಸಃ— ಪರಮಾತ್ಮನು, ಜಠರೇ—ಉದರದಲ್ಲಿ, ಶಯಾನಾನ್-ವಾಸಿಸುತಕ್ಕ, ಚೇತನಗಣಾನ್-[ಚೇತನ]-ಜೀವರ, [ಗಣಾನ್]-ಸಮುದಾಯವನ್ನು ದೃಷ್ಟ್ವಾ-ಸಾಮಾನ್ಯವಾಗಿ ನೋಡಿ, ಆನಂತರ ಸೃತಿವಿಪ್ರಮುಕ್ತಾನ್-[ಸೃತಿ]-ಸಂಸಾರದಿಂದ, [ವಿಪ್ರಮುಕ್ತಾನ್]-ಉತ್ತಮ ರೀತಿಯಲ್ಲಿ ಮುಕ್ತರಾದ, ಯೋಗ್ಯ ಜೀವರನ್ನು, ಆನಂದಮಾತ್ರವಪುಷಃ-[ಆನಂದಮಾತ್ರ]-ಕೇವಲ ಆನಂದವೇ, [ವಪುಷಃ]-ಶರೀರವುಳ್ಳವರನ್ನಾಗಿ, ಧ್ಯಾನಂಗತಾನ್—ಭಗವಂತನ ಧ್ಯಾನದಲ್ಲಿ ತತ್ಪರರಾದವರನ್ನಾಗಿ ಐಕ್ಷತ್—ನೋಡಿದ, ಆ ಬಳಿಕ, ಸೃತಿಗತಾನ್—ಸಂಸಾರಾವಸ್ಥೆಯಲ್ಲಿರತಕ್ಕ, ಬ್ರಹ್ಮಾದಿಕಾನ್-ರುದ್ರನೇ ಮೊದಲಾದ ಸಜ್ಜೀವರನ್ನು, ಕಲಿಪರಾನ್—'ಕಲಿ'ಯು ತನಕ ಇರತಕ್ಕ ಅಧಮ ಜೀವರನ್ನು, ಮನುಜಾನ್-ಮಧ್ಯಮ ಜೀವರನ್ನು, ಸುಪ್ತಾಪ್ತಿಸಂಸ್ಥಾನ್-ನಿದ್ರಾವಸ್ಥೆಯಲ್ಲಿರತಕ್ಕವರನ್ನಾಗಿ. ಐಕ್ಷತ್-ಅವಲೋಕಿಸಿದ. ಮಿಕ್ಕಿ ಉಳಿದ ಮುಕ್ತರಾದ ಉತ್ತಮ ಜೀವರನ್ನು, ಮುಕ್ತರಾದ (ಲಿಂಗ-ದೇಹ ಭಗ್ನರಾದ) ಅಧಮ-ಜೀವರನ್ನು, "ತಥಾ"-ಅವರು ಹೇಗೆ ಇದ್ದಾರೋ, ಹಾಗೆ ಐಕ್ಷತ್—ನಿರೀಕ್ಷಿಸಿದ

ತಾತ್ಪರ್ಯ—ಮಹಾ ಪ್ರಳಯಕಾಲ ಮುಗಿಯುತ್ತಿದೆ, ಸಕಲ ಜೀವರಿಗೂ ಭಗವಂತನ ಉದರವೇ ಆಸರೆ. ಸರ್ವಜೀವರ ಕಡೆಗೂ ದೇವ ಒಂದು ಸಲ ದೃಷ್ಟಿ ಹಾಯಿಸಿದ. ಸಾಮಾನ್ಯವಾಗಿ ಪ್ರತಿಯೊಬ್ಬ ಜೀವಿಯನ್ನು ವೀಕ್ಷಿಸಿದ. ಅನಂತರ ಭಕ್ತರೂ, ಮುಕ್ತರೂ ಆದ ಉತ್ತಮ ಜೀವರ ಕಡೆಗೆ ತನ್ನ ಕಣ್ಣನ್ನು ಹೊರಳಿಸಿದ. ಅವರೆಲ್ಲ ಧ್ಯಾನ ತತ್ಪರರಾಗಿದ್ದರು. ದುಃಖದ ಲವಲೇಶದ ಭೋಗವೂ ಇವರ ಪಾಲಿಗ ಇದ್ದಿಲ್ಲ. ದುಃಖಕ್ಕೆ ನಿಮಿತ್ತವಾದ ಪ್ರಾಕೃತಶರೀರವೂ ಇವರಿಗಿಲ್ಲ. ಆನಂದ ಪೂರ್ಣ ಶರೀರ ಇವರದ್ದು. ಇವರ ಮೇಲೆ ಅನುಗ್ರಹದ ದೃಷ್ಟಿ ಬೀರಿದನು. ಉಳಿದ ಮುಕ್ತರಾದ ವಿಶ್ರಜೀವರನ್ನು ಹಾಗೂ ತಪೋಜೀವಿಗಳನ್ನು ಉಪೇಕ್ಷಾಮಯಚಕ್ಷುಃಷ್ಟಿನಿಂದ ವೀಕ್ಷಿಸಿದ. ಮುಂದಿನ ಸೃಷ್ಟಿ ಯೋಗ್ಯರಾದ ರುದ್ರಾದಿ ಉತ್ತಮ ಜೀವರನ್ನು ವಿಶ್ರ ಜಿಜ್ಞಾಸಿಗಳಾದ ಮಧ್ಯಮರನ್ನು ಅಧಮ ಜೀವರಾದ ಕಲಿಪ್ರಭೃತಿಗಳನ್ನು ನೋಡಿದ. ಸಂಸಾರಿಗಳಾದ ಈ ಮೂರು ವರ್ಗದ ಜೀವರೂ ಅತನ ಉದರದೊಳು ನಿದ್ರಾ ವಸ್ಥೆಯಲ್ಲಿದ್ದರು.

ವಿಶೇಷಾಂಶ —"ಬ್ರಹ್ಮಾದಿಕಾನ್ ಸುಷುಪ್ತಿಸಂಸ್ಥಾನ್"ಯೆಂಬಲ್ಲಿ ಬ್ರಹ್ಮಾದಿಯೆಂಬು ದಕ್ಕೆ ರುದ್ರನೇ ಮೊದಲಾದ ದೇವತೆಗಳು ಎಂದೇ ಅರ್ಥ ಮಾಡಬೇಕು. ಹೊರತು ಬ್ರಹ್ಮವಾಯು ಮೊದಲಾದವರು ಎಂಬ ಅರ್ಥ ಇಟ್ಟುಕೊಳ್ಳಬಾರದು. ಕಾರಣ ಮಹಾಪ್ರಳಯಕಾಲದಲ್ಲಿ ಸಂಸಾರಿಯಾದ ಯಾವ ಬ್ರಹ್ಮನೂ ಇಲ್ಲ. ಯಾಕೆಂದರೆ ಪೂರ್ವಕಲ್ಪದ ಬ್ರಹ್ಮನು ಈ ಸಮಯದಲ್ಲಿ ಮುಕ್ತನಾಗಿದ್ದಾನೆ. ಮುಂದಿನ ಕಲ್ಪ ದಲ್ಲಿ ಬ್ರಹ್ಮ ಪಟ್ಟಕ್ಕೆ ಏರತಕ್ಕವರು ವಾಯುದೇವರು. ಅವರಿನ್ನೂ ಬ್ರಹ್ಮನಾಗಿ ಸೃಷ್ಟವಾಗಿಲ್ಲ. ಮುಂದಿನ ಸೃಷ್ಟಿಯ ಸಮನಂತರ ಅವರು ಬ್ರಹ್ಮರೆಂದು ಪರಿಗಣಿಸ ಲ್ಪಡುತ್ತಾರೆ. ಹೀಗಾಗಿ ಸಂಸಾರಿಯಾದ ಯಾವನೇ ಬ್ರಹ್ಮ ಪದವೀ ಆರೂಢವಾಗಿರ ತಕ್ಕ ದೇವತೆಯೂ ಈ ಪ್ರಳಯ ಕಾಲದಲ್ಲಿಲ್ಲ. ಹೀಗಿರುವಾಗ ಬ್ರಹ್ಮ ಪದದಿಂದ ಚತುರ್ಮುಖ ಬ್ರಹ್ಮನನ್ನು ಹೇಗೆ ತಾನೇ ಇಟ್ಟು ಕೊಳ್ಳುವುದು?

ಬ್ರಹ್ಮ ಪದದಿಂದ ವಾಯುದೇವರನ್ನು ಇಟ್ಟು ಕೊಳ್ಳೋಣವೆಂದರೆ ಅದು ಅಸಾಧ್ಯವಾದ ಮಾತು. ವಾಯುದೇವರ ಜ್ಞಾನಕ್ಕೆ ಪ್ರಳಯ ಕಾಲದಲ್ಲೂ ನಾಶ ವಿಲ್ಲವೆಂದು ಶಾಸ್ತ್ರಸಿದ್ಧ. ವಾಯುದೇವರಿಗೆ ಸುಪ್ತಿಯು ಅಥವಾ ನಿದ್ದೆಯು ಸಂಬಂಧ ಕೂಡುವುದಿಲ್ಲವಾದುದರಿಂದ ವಾಯುದೇವರು ಎಂಬ ಅರ್ಥವನ್ನು ಇಟ್ಟುಕೊಳ್ಳ

ಬಾರದೆಂದಾಯಿತು. ಆದುದರಿಂದಲೇ ಬ್ರಹ್ಮಾದಿಯೆಂಬುದಕ್ಕೆ "ಅತದ್ಗುಣಸಂವಿಜ್ಞಾನ ಬಹುವ್ರೀಹಿಸವಾಸ"ವನ್ನು ಮಾಡಿ ರುದ್ರ ಪ್ರಭೃತಿಗಳೆಂದರ್ಥ ಮಾಡಬೇಕು ॥೪॥

॥ ೫ ॥

ದೇವರಿಗೆ ಸೃಷ್ಟಿ ಮಾಡುವಾಗ ಪ್ರಯೋಜನಾಪೇಕ್ಷೆ ಇದೆಯೋ ಇಲ್ಲವೋ ಎನ್ನುವುದು ದೊಡ್ಡ ಪ್ರಶ್ನೆ. ಪ್ರಯೋಜನದ ಇಚ್ಛೆ ಇದ್ದರೆ ಈಗ ಆ ಪ್ರಯೋಜನ ಸಿಕ್ಕಿಲ್ಲವೆಂದಾಯಿತು. ದೇವರಿಗೆ ನ್ಯೂನತೆಯಿದೆ. ದೇವರು ಪರಿಪೂರ್ಣನಲ್ಲ ಎಂದು ಹೇಳ ಬೇಕಾಗುತ್ತದೆ. ಪ್ರಯೋಜನಾಪೇಕ್ಷೆ ಇಲ್ಲದೆಯೇ ದೇವರು ಸೃಷ್ಟಿ ಗೈಯುತ್ತಾರೆನ್ನುವ 2ನೆಯ ವಾದವೂ ಸರಿಯಲ್ಲ. ಅಪ್ರಯೋಜನವಾದ ಕೆಲಸವನ್ನು ಮೂರ್ಖರೂ ಮಾಡೋದಿಲ್ಲ. ಮಹಾಮೇಧಾವಿಯಾದ ದೇವರುಪ್ರಯೋಜನವಿಲ್ಲದ ಕಾರ್ಯವೆನ್ನು ಹೇಗೆ ತಾನೆ ಮಾಡಿಯಾರು? ಆದುದರಿಂದ ದೇವರು ಈ ಪ್ರಪಂಚವನ್ನು ಸೃಷ್ಟಿ ಮಾಡಿಲ್ಲ ಎಂಬಪ್ರಶ್ನೆಗೆ ಸಮರ್ಪಕವಾದ ಉತ್ತರ ಕೊಡುತ್ತಾ ಭಗವಂತ ಸೃಷ್ಟಿಯಸಂಕಲ್ಪಗೈದ ಎನ್ನುತ್ತದೆ ಈ ಪದ್ಯ.

ಸ್ರಕ್ಷ್ಯೇಹಿ ಚೇತನಗಣಾನ್ ಸುಖದುಃಖಮಧ್ಯಸಂಪ್ರಾ
ಪ್ತಯೇ ತನುಭೃತಾಂ ವಿಹೃತಿಂ ಮಮೇಚ್ಛನ್॥
ಸೋಯಂ ವಿಹಾರ ಇಹ ಮೇ ತನುಭೃತ್ಸ್ವಭಾವ
ಸಂಭೂತಯೇ ಭವತಿ ಭೂತಿಕೃದೇವಭೂತ್ಯಾಃ ॥೫॥

ಅನ್ವಯಾರ್ಥ — [ಅಹಂ]-ದೇವರಾದನಾನು, ತನುಭೃತಾಂ-ದೇಹವನ್ನುಧರಿಸಿದಜೀವಂಗೆ ಸುಖದುಃಖಮಧ್ಯಸಂಪ್ರಾಪ್ತಯೇ-(ಸುಖ)-[ಯೋಗ್ಯಜೀವರಿಗೆ]ಆನಂದ, (ದುಃಖ)-[ತಾಮಸಜೀವರಿಗೆ] ಕ್ಲೇಶಗಳ, [ಮಧ್ಯ]-[ನಿತ್ಯ ಸಂಸಾರಿಗಳಾದ ಮಧ್ಯಜೀವರಿಗೆ] ಸುಖ ದುಃಖ ವಿಶ್ರಣದ, ಸಂಪ್ರಾಪ್ತಯೇ-ಸರಿಯಾದ ಅನುಭವ ಬರುವುದಕ್ಕೋಸ್ಕರ, ಹಾಗೆ, ಮಮ-ನನಗೆ [ದೇವರಿಗೆ], ವಿಹೃತಿಂ-ವಿಹಾರವನ್ನು [ಕ್ರೀಡೆಯನ್ನು] ಇಚ್ಛನ್‌ಸನ್-ಬಯಸತಕ್ಕವನಾಗಿ, ಚೇತನಗಣಾನ್-ಜೀವಸಂಘವನ್ನು ಸ್ರಕ್ಷ್ಯೇ-ಸೃಷ್ಟಿ ಸುವೆನು, ಸೋಯಂ-ಆ, ಈ ಸೃಷ್ಟಿಯು, ಮೇ-ನನಗೆ, ವಿಹಾರಃ-ಕ್ರೀಡೆಯು, ಹಾಗೆಯೇ ತನುಭೃತ್‌ಸ್ವಭಾವಸಂಭೂತಯೇ-[ತನುಭೃತ್]-ಜೀವರಿಗೆ, [ಸ್ವಭಾವ]-ಸುಖ, ದುಃಖ, ಉಭಯ ಈ ರೀತಿಯಾಗಿ ತ್ರಿವಿಧ ಸ್ವರೂಪಗಳ, [ಸಂಭೂತಯೇ]-

ಚೆನ್ನಾಗಿ ಅನುಭವ ಉಂಟಾಗುವುದಕ್ಕೋಸ್ಕರ, ಭವತಿ-ಆಗುತ್ತದೆ, ಹಾಗೆಯೇ ಭೂತ್ಯಾಃ-ಸಂಪತ್ತಿಗೆ ಅಭಿಮಾನಿಯಾದ ಲಕ್ಷ್ಮೀದೇವಿಯು, ಭೂತ್ಯೈ-ಐಶ್ವರ್ಯಕ್ಕೋಸ್ಕರ, ಭವತಿ-ಆಗುತ್ತದೆ.

ತಾತ್ಪರ್ಯಾರ್ಥ—ಜಗತ್ ಸೃಷ್ಟಿಯಲ್ಲಿ ಪರಮಾತ್ಮನ ಪ್ರವೃತ್ತಿಯು ಸುಖೋದ್ರೇಕದಿಂದಲೇಆಗುತ್ತದೆ. ಈ ಜಗನ್ನಿರ್ಮಾಣವು ಆತನಿಗೆ ಒಂದು ರೀತಿಯ ಆಟ ಆದುದರಿಂದ ತನಗಾಗಿ ಯಾವ ಪ್ರಯೋಜನವನ್ನೂ ಭಗವಂತ ಜಗತ್‌ಸೃಷ್ಟಿಯ ಕಾಲದಲ್ಲಿ ಬಯಸಿಲ್ಲ ಆದರೆ ಪರಪ್ರಯೋಜನ ಇದೆ. ಉತ್ತಮ ಜೀವರಾಶಿಗೆ ಶರೀರವನ್ನು ಕೊಟ್ಟು, ಉತ್ಕೃಷ್ಟವಾದ ಜ್ಞಾನವನ್ನು ಕರುಣಿಸಿ, ಯೋಗ್ಯವಾದ ಕರ್ಮವನ್ನು ಮಾಡಿಸಿ, ಅವನಿಗೆ ಸ್ವರೂಪಭೂತವಾದ ಆನಂದದ ಆವಿರ್ಭಾವವನ್ನುಂಟುಮಾಡುವುದು. ಇದೇ ರೀತಿಯಾಗಿ ಮಧ್ಯಮರಿಗೂ, ಅಧಮರಿಗೂ ಶರೀರವನ್ನು ಸೃಷ್ಟಿಸಿ, ಅವರವರಿಗೆ ಯೋಗ್ಯವಾದ ಜ್ಞಾನಕೊಟ್ಟು, ಕರ್ಮ ಮಾಡಿಸಿ ಸ್ವರೂಪ ಭೂತವಾದ ದುಃಖವನ್ನು ಅಥವಾ ಸುಖದುಃಖಮಿಶ್ರಸ್ವರೂಪವನ್ನು ಆವಿರ್ಭೂತವಾದುದನ್ನಾಗಿ ಮಾಡುವುದು. ಇದೇ ಪರಪ್ರಯೋಜನ. ಮಹದಾದಿ ಪದಾರ್ಥಗಳ ಸೃಷ್ಟಿಯಾದಾಗ ಅದರ ನಿಯಮನಕ್ಕಾಗಿಶ್ರೀಲಕ್ಷ್ಮೀದೇವಿಯರು ಬಹುರೂಪವನ್ನು ಧರಿಸುತ್ತಾರೆ.ಇದು ಲಕ್ಷ್ಮೀದೇವಿಗೆಯುಂಟಾಗತಕ್ಕ ಐಶ್ವರ್ಯ. ಇದರಂತೆ ಆಯಾಜೀವರಿಗೆ ಯೋಗ್ಯವಾದ ಸಾಧನೆಯು ಆಗುವುದೇ ಈ ಸೃಷ್ಟಿಗೆ ಪ್ರಯೋಜನವು. ಈ ಕಾರಣದಿಂದಜಗತ್ತಿನ ಸೃಷ್ಟಿ ಮಾಡುತ್ತೇನೆ ಎನ್ನುವ ಸಂಕಲ್ಪಗೈದ ಪರಮಾತ್ಮ.

॥ ೬ ॥

ಸೃಷ್ಟಿಗೈಯುತ್ತೇನೆಂದು ಸಂಕಲ್ಪಿಸಿದ ಭಗವಂತನು ಮೊದಲು ಶುದ್ಧ ಸೃಷ್ಟಿ ಮಾಡಿದ. ಸೃಷ್ಟಿಯು 4 ಪ್ರಕಾರ. 1) ಶುದ್ಧ ಸೃಷ್ಟಿ 2) ಪರಾಧೀನ ವಿಶೇಷಾವಾಪ್ತಿರೂಪ ಸೃಷ್ಟಿ. 3) ಮಿಶ್ರ ಸೃಷ್ಟಿ 4) ಕೇವಲ ಸೃಷ್ಟಿ. 1] ದೇಹೇಂದ್ರಿಯಾದಿಗಳಿಗೆ ಸ್ವಲ್ಪವೂ ವಿಕಾರ ಇರದೇ ಲೀಲಾಮಾತ್ರದಿಂದ ಜನರಿಗಾಗಿ ಮೂಲಸ್ವರೂಪದಿಂದ ಹೊರಕ್ಕೆ ಬಂದು ಎಲ್ಲರಿಗೂ ಕಾಣಿಸುವುದಕ್ಕೆ ಶುದ್ಧ ಸೃಷ್ಟಿಯೆನ್ನುತ್ತಾರೆ. ಇದು ದೇವರಿಗೆ ಆಗತಕ್ಕ ಸೃಷ್ಟಿ. 2] ಪರಾಧೀನ ವಿಶೇಷಾವಾಪ್ತಿಯೆಂದರೆ ಭಗವಂತನ ಅಪ್ಪಣೆಯಿಂದಾಗಿ ವಿಶೇಷ ಬರುವುದು. ಇದು ಲಕ್ಷ್ಮೀದೇವಿಯರಿಗೆ ಸಬಂಧಿಸಿದ ಸೃಷ್ಟಿ. ಪ್ರಕೃತ್ಯಾದಿಗಳನ್ನು ಸೃಷ್ಟಿಸಿ ಅದರ ಒಡೆತನ

ವನ್ನು ಭಗವಂತನು ತನ್ನ ಮಡದಿಯಾದ ಲಕ್ಷ್ಮೀದೇವಿಗೆ ಆಜ್ಞಾಪಿಸುತ್ತಾನೆ. ಭಗವಂತನ ಆಜ್ಞೆಯಿಂದ ಬರತಕ್ಕ ಈ ಒಡೆತನವೆಂಬ ವಿಶೇಷವೇ ಲಕ್ಷ್ಮೀದೇವಿಯರಿಗೆ ಇರತಕ್ಕ ಸೃಷ್ಟಿ. ನಿತ್ಯವಾದ ವಸ್ತುವಿಗೆ ಬಾಹ್ಯಶರೀರ ಇಂದ್ರಿಯಾದಿಗಳ ನಿರ್ಮಾಣವೇ ಮಿಶ್ರ ಸೃಷ್ಟಿ. ಜೀವರೆಲ್ಲ ನಿತ್ಯರು ಇವರಿಗೆ ನೂತನವಾದ ಶರೀರಗಳ ಇಂದ್ರಿಯಗಳ ಸೃಷ್ಟಿಯಾಗುತ್ತದೆ. ಇದೇ ಮಿಶ್ರ ಸೃಷ್ಟಿಗೆ ಉದಾಹರಣೆ.4) ಕೇವಲ ಸೃಷ್ಟಿ ಮೊದಲು ಇಲ್ಲದಿರುವ ವಸ್ತುವಿಗೆ ಸ್ವರೂಪೋತ್ಪತ್ತಿ ಬಟ್ಟೆ ಬರೆಗಳ ಸೃಷ್ಟಿಯೇ ಇದಕ್ಕೆ ಉದಾಹರಣೆ. ಮಣ್ಣಿನಿಂದ ಗಡಿಗೆ ಮಾಡುತ್ತೇವೆ. ಗಡಿಗೆಯಾಗುವುದಕ್ಕಿಂತ ಮೊದಲು ಗಡಿಗೆಯಸ್ವರೂಪ ಇರಲಿಲ್ಲ. ಮೊದಲು ಇಲ್ಲದೆ ಆನಂತರ ಸ್ವರೂಪ ಬಂದರೆ ಅದಕ್ಕೆ ಕೇವಲ ಸೃಷ್ಟಿ ಎನ್ನುತ್ತಾರೆ. ಈ 4 ಸೃಷ್ಟಿಗಳ ಮಧ್ಯೆ ಪ್ರಾಥಮಿಕವಾದ ಶುದ್ಧ ಸೃಷ್ಟಿಯನ್ನು ವಿವರಿಸುತ್ತಾರೆ.

ಇತ್ಥಂ ವಿಚಿಂತ್ಯ ಪರಮಸ್ಸತು ವಾಸುದೇವನಾಮಾ ಬಭೂವ
ನಿಜಮುಕ್ತಿಪದಪ್ರದಾತಾ ।
ತಸ್ಯೈವ ನಿತ್ಯತಾಥರಮಾಪಿರೂಪಂಬಭ್ರೇದ್ವಿತೀಯ
ಮುಪಿಯತ್ ಪ್ರವದಂತಿವಾಯಾವತ್ ॥

ಅನ್ವಯಾರ್ಥ—ಪರಮಃ-ಸರ್ವೋತ್ತಮನಾದ, ಸಃ—ಶ್ರೀಮನ್ನಾರಾಯಣನು, ಇತ್ಥಂ-ಈ ರೀತಿಯಾಗಿ, ವಿಚಿಂತ್ಯ-ಆಲೋಚಿಸಿ, ನಿಜಮುಕ್ತಿಪದಪ್ರದಾತಾ-[ನಿಜ]-ತನ್ನ ಭಕ್ತರಿಗೆ, [ಮುಕ್ತಿಪದ]-ಮೋಕ್ಷ ಪದವಿಯನ್ನು, [ಪ್ರದಾತಾ]-ಕೊಡತಕ್ಕಂತಹ, ವಾಸುದೇವನಾಮಾ-ವಾಸುದೇವನೆಂಬ ಹೆಸರುಳ್ಳವನಾಗಿ, ಬಭೂವ-ಆವಿರ್ಭೂತನಾದನು, ತಸ್ಯೈವ-ಕೇವಲ ಪರಮಾತ್ಮನ, ಆಜ್ಞಾಯಾನಿಯುತಾ-ಆಜ್ಞಾದಿಂದನಿಯುಕ್ತಳಾದ, ರಮಾಪಿs-ಲಕ್ಷ್ಮೀದೇವಿಯೂಕೂಡ, ಯತ್-ಯಾವ ರೂಪವನ್ನು, ವಾಯಾ-ವಾಯೆ ಎಂದು, ಪ್ರವದಂತಿ-ಹೇಳುತ್ತಾರೋ, ಅಂತಹ, ದ್ವಿತೀಯಂ-ಎರಡನಯ, ರೂಪಮಪಿ-ಸ್ವರೂಪವನ್ನು, ಬಭ್ರೇ-ಸ್ವೀಕರಿಸಿದಳು.

ತಾತ್ಪರ್ಯ—ಮೋಕ್ಷ ಪ್ರದವಾದ ವಾಸುದೇವನೆಂಬ ರೂಪವನ್ನು ಶ್ರೀ ಹರಿಯು ಹೊಂದಿದನು. ಅವನ ಅಣತಿಯಂತೆ ಶ್ರೀಲಕ್ಷ್ಮೀದೇವಿಯೂ ವಾಯೇಯೆಂಬ ಸ್ವರೂಪವನ್ನು ತಳೆದಳು.

॥ ೭ ॥

ಸಂಕರ್ಷಣಶ್ಚ ಸಬಭೂವ ಪುನಃ ಸುನಿತ್ಯಃ ಸಂಹಾರ
ಕಾರಣವಪುಸ್ತದನುಜ್ಞಯೈವ ।
ದೇವೀಜಯೇತ್ಯನುಬಭೂವ ಸಸೃಷ್ಟಿಹೇತೋಃ
ಪ್ರದ್ಯುಮ್ನತಾಮುಪಗತಃ ಕೃತಿತಾಂಚ ದೇವೀ ॥

ಅನ್ವಯಾರ್ಥ—ಪುನಃ-ಮತ್ತೂ, ಸುನಿತ್ಯಃ-ಯಾವ ವಿಧದ ವಿಕಾರವೂ ಇಲ್ಲದಂತಹ ಸಃ-ಪರಮಾತ್ಮನು, ಸಂಹಾರಕಾರಣವಪುಃ-ಸಂಹಾರಕ್ಕೆ ಕಾರಣವಾದ ದೇಹವುಳ್ಳ ಸಂಕರ್ಷಣಶ್ಚ-ಸಂಕರ್ಷಣರೂಪವುಳ್ಳವನಾಗಿ, ಬಭೂವ-ಆವಿರ್ಭೂತನಾದನು, ದೇವೀ-ಶ್ರೀಲಕ್ಷ್ಮಿದೇವಿಯವರು, ಜಯೇತಿ-ಜಯಾಎಂಬಸ್ವರೂಪವುಳ್ಳವರಾಗಿ, ಅನುಬಭೂವ-ಸಂಕರ್ಷಣನನ್ನು ಅನುಸರಿಸಿ ಅವತರಿಸಿದರು, ಸಃ-ಆ ನಾರಾಯಣನು, ಸೃಷ್ಟಿ ಹೇತೋಃ-ಜಗತ್ತಿನ ಸೃಷ್ಟಿಗಾಗಿ, ಪ್ರದ್ಯುಮ್ನತಾಂ-ಪ್ರದ್ಯುಮ್ನ ಎಂಬ ಅವತಾರವನ್ನು ಉಪಗತಃ-ಹೊಂದಿದನು, ದೇವೀಚ-ಲಕ್ಷ್ಮೀದೇವಿಯರೂ ಕೃತಿತಾಂ-ಕೃತಿಯೆಂಬ ಅವತಾರವನ್ನು ಉಪಗತಾ-ಹೊಂದಿದಳು.

ತಾತ್ಪರ್ಯ—ಸೃಷ್ಟವಾದ ಜಗತ್ತಿನ ಸಂಹಾರಕ್ಕೆ ಕಾರಣೀಭೂತವಾದ ದೇಹವತೆಯಾಗಿ ಸಂಕರ್ಷಣನು ಅವತಾರವೆತ್ತಿದರೆ, ಲಕ್ಷ್ಮಿಯು ಜಯಾ ಎನ್ನುವ ರೂಪದಿಂದ ಆವಿರ್ಭೂತಳಾದಳು. ನಾರಾಯಣನು ಸೃಷ್ಟಿಗಾಗಿ ಪ್ರದ್ಯುಮ್ನನಾದರೆ, ಲಕ್ಷ್ಮೀದೇವಿಯರು ಕೃತಿಯಾಗಿ ಸಹಕರಿಸಿದರು.

॥ ೮ ॥

ಸ್ಥಿತ್ಯೈ ಪುನಃ ಸಭಗವಾನ್ ಅನಿರುದ್ಧನಾಮಾ ದೇವೀಚ
ಶಾಂತಿರಭವಚ್ಚರದಾಂಸಹಸ್ರಮ್ ।
ಸ್ಥಿತ್ಯಾಸ್ವಮೂರ್ತಿಭಿರಮೂಭಿರಚಿಂತ್ಯಶಕ್ತಿಃ ಪ್ರದ್ಯುಮ್ನ
ರೂಪಕಇವಾಂಶ್ಚರಮಾತ್ಮನೇದಾತ್ ॥

ಅನ್ವಯಾರ್ಥ—ಪುನಃ-ಮತ್ತು, ಸಃ-ಆದಾವ, ಭಗವಾನ್-ಸದ್ಗುಣೈಶ್ವರ್ಯಸಂಪನ್ನನಾದ ಶ್ರೀನಾರಾಯಣನು, ಸ್ಥಿತ್ಯೈ-ಜಗತ್ತಿನ ರಕ್ಷಣೆಗಾಗಿ, ಅನಿರುದ್ಧನಾಮಾ- ಅನಿರುದ್ಧನೆಂಬ ಹೆಸರಿನ ಅವತಾರವುಳ್ಳವನು, ಅಭವತ್-ಆದನು, ದೇವೀಚ-ಲಕ್ಷ್ಮೀ

ದೇವಿಯಾದರೂ, ಶಾಂತಿ:-ಶಾಂತಿಯೆನ್ನುವ ರೂಪವನ್ನು ತಳೆದವಳು, ಅಭವತ್-ಆದಳು, ಅಚಿಂತ್ಯಶಕ್ತಿ:-ನಮ್ಮಿಂದ ತಿಳಿಯಲಶಕ್ಯವಾದ ಸಾವ-ರ್ಥ್ಯವುಳ್ಳ ನಾರಾಯಣನು ಶರದಾಂ-ಶರದ್ಋತುಗಳ ಸಹಸ್ರಂ-ಸಾವಿರಗಳ ತನಕ, (ಸಹಸ್ರ ವರ್ಷಗಳ ತನಕ,) ಸ್ವಮೂರ್ತಿಭಿ:-ತನ್ನ ೀವತಾರಗಳಾದ, ವಾಸುದೇವ, ಸಂಕರ್ಷಣಂ ಪ್ರದುಮ್ನ, ಅನಿರುದ್ಧರಿಂದ ಕೂಡಿಕೊಂಡು, ಸ್ಥಿತ್ವಾ-ಇದ್ದು, ಅನಂತರ ಪ್ರದ್ಯುಮ್ನ ರೂಪಕ:-ಪ್ರದ್ಯುಮ್ನ ಸ್ವರೂಪಿಯಾದ ನಾರಾಯಣನು, ಇಮಾನ್-ಈ ಜೀವಚಯವನ್ನು ಚತುರಾತ್ಮನೇ-ಕೊನೆಗೆ ಅವತಾರವೆತ್ತಿದ ಅನಿರುದ್ಧನಿಗೆ, ಅದಾತ್-ಕೊಟ್ಟನು.

ತಾತ್ಪರ್ಯ—ಜಗತ್ತಿನ ಸಂರಕ್ಷಣೆಗಾಗಿ ನಾರಾಯಣನು ಅನಿರುದ್ಧನಾಗಿಯೂ, ಲಕ್ಷ್ಮಿ ದೇವಿಯು ಶಾಂತಿಯಾಗಿಯೂ ಅವತಾರ ಮಾಡಿದರು. ಮಾನುಷ್ಯರ ಮಾನದಂತೆ 1000 ಸಂವತ್ಸರಗಳ ತನಕ ನಾರಾಯಣನು ಈ ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧರೆಂಬ 4 ಸ್ವರೂಪಗಳಿಂದ ಕೂಡಿಕೊಂಡು ಕಾಲಕಳೆದ, ನಂತರ ಪ್ರದ್ಯುಮ್ನನು ಉದರದಲ್ಲಿತಕ್ಕ ಎಲ್ಲಾ ಸೃಷ್ಟಿ ಯೋಗ್ಯ ಜೀವರನ್ನು ಸೃಷ್ಟಿಗಾಗಿ ಅನಿರುದ್ಧನಿಗೆ ಅರ್ಪಿಸಿದ.

॥ ೯ ॥

ನಿರ್ದೇಹಕಾನ್ ಸಭಗವಾನ್ ಅನಿರುದ್ಧನಾಮಾಜೀವಾನ್
ಸ್ವಕರ್ಮಸಹಿತಾನುದರೇನಿವೇಶ್ಯ ।
ಚಕ್ರೇ ಽಥದೇಹಸಹಿತಾನ್ ಕ್ರಮಶ:ಸ್ವಯಂಭೂ ಪ್ರಾಣಾತ್ಮ
ಶೇಷಗರುಡೇಶಮುಖಾನ್ ಸಮಗ್ರಾನ್ ॥

ಅನ್ವಯಾರ್ಥ—ಭಗವಾನ್-ಈಶ್ವರನಾದ, ಅನಿರುದ್ಧನಾಮಾ-ಅನಿರುದ್ಧನೆಂಬ ಹೆಸರುಳ್ಳ, ಸ:-ಪರಮಾತ್ಮನು, ನಿರ್ದೇಹಕಾನ್-(ಲಿಂಗದೇಹಾದಿರಿಕ್ತ) ಶರೀರ ಶೂನ್ಯವಾದ, ಸ್ವಕರ್ಮಸಹಿತಾನ್-ತಮ್ಮ ಕರ್ಮಾಚರಣೆಯಿಂದುಂಟಾದ ಪಾಪ ಪುಣ್ಯದಿಂದ ಕೂಡಿದಂತಹ, ಜೀವಾನ್-ಎಲ್ಲಾ ಜೀವರನ್ನು, ಉದರೇ-ತನ್ನ ಜಠರದಲ್ಲಿ, ನಿವೇಶ್ಯ-ಪ್ರವೇಶ ಮಾಡಿಸಿ, ಅಥ-ಆ ಒಳಿಕ, ಸ್ವಯಂಭೂ...ಮುಖಾನ್-(ಸ್ವಯಂಭೂ)-ಬ್ರಹ್ಮ ದೇವರು,(ಪ್ರಾಣಾತ್ಮ)-ಮುಖ್ಯ ಪ್ರಾಣ ದೇವರು, (ಶೇಷ)-ಶೇಷ ದೇವರು, (ಗರುಡ)-ಗರುಡ ದೇವರು, (ಈಶ)-ರುದ್ರ ದೇವರು, (ಮುಖಾನ್)-ಇವರೇ ಮೊದಲಾಗಿ ಉಳ್ಳ, (ಸಮಗ್ರಾನ್)-ಎಲ್ಲಾ ಜೀವರನ್ನು

ಕ್ರಮಶಃ-ಕ್ರಮದಿಂದ, ದೇಹಸಹಿತಾನ್-ದೇಹದಿಂದ ಕೂಡಿದವರನ್ನಾಗಿ, ಚಕ್ರೇ-ಮಾಡಿದನು.

ತಾತ್ಪರ್ಯ—ಜೀವರಸಂಖ್ಯೆ ಅನಂತ. ಇವರೆಲ್ಲರೂ ಈ ಪ್ರಳಯಕಾಲದಲ್ಲಿ ಲಿಂಗಾದೇಹರಿದಿ ಶರೀರಶೂನ್ಯರು. ಆವರೂ ಪೂರ್ವ ಪೂರ್ವ ಕರ್ಮದಿಂದ ಸಂಪಾದಿತ ಪಾಪ ಅಥವ ಪುಣ್ಯ ಸಂಪನ್ನರು. ಪ್ರದ್ಯುಮ್ನ ಒಪ್ಪಿಸಿದ ಈ ಎಲ್ಲಾ ಜೀವರಿಗೂ ಅನಿರುದ್ಧ ತನ್ನ ಉದರದಲ್ಲಿ ಅವಕಾಶವಿತ್ತ. ಆ ಬಳಿಕ ಬ್ರಹ್ಮಾದಿ ಸಮಸ್ತ ಜೀವರಿಗೂ ದೇಹವನ್ನು ಕರುಣಿಸಿದ. ಅನಿರುದ್ಧ ನೀಡಿದ ಶರೀರ ನಮ್ಮ ಶರೀರದಂತೆ ಪಂಚಭೂತದಿಂದುಂಟಾದ ಸ್ಥೂಲವಲ್ಲ. ಇದು ಸೂಕ್ಷ್ಮದೇಹ. ಇದು ಕೇವಲ ಮೂಲಪ್ರಕೃತಿಯ ಅಂಶದಿಂದ ನಿರ್ಮಿತವಾದದ್ದು.

ವಿಶೇಷಾಂಶ—ಬ್ರಹ್ಮಾಂಡಾಂತಃಸೃಷ್ಟಿ. ಬ್ರಹ್ಮಾಂಡ ಬಾಹ್ಯ ಸೃಷ್ಟಿ ಎಂಬುದಾಗಿ ಸೃಷ್ಟಿ 2 ವಿಧ. ಪರಮಾತ್ಮನು ದೇವತೆಗಳ ಪ್ರಾರ್ಥನೆಯಂತೆ ಬ್ರಹ್ಮಾಂಡದ ಸೃಷ್ಟಿ ಮಾಡಿದ. ಅದರೊಳಗೆ ಪ್ರದ್ಯುಮ್ನನು ಸ್ತ್ರೀ ಪುರುಷರ ದ್ವಾರಾ ಜಗತ್ ಸೃಷ್ಟಿ ಮಾಡುತ್ತಾನೆ, ಕಾಮಾಂತರ್ಯಾಮಿಯಾದ ಪ್ರದ್ಯುಮ್ನನು ದಂಪತಿಗಳಲ್ಲಿ ರಾಗ ವನ್ನುಂಟು ಮಾಡಿ ಪುರುಷನಿಂದ ಸ್ತ್ರೀಯಲ್ಲಿ ಸಂತಾನ ಪರಂಪರೆಯನ್ನು ಉಂಟು ಮಾಡುತ್ತಾನೆ. ಇವನಿಂದ ಸೃಷ್ಟವಾದ ಜೀವರಿಗೆ ಪಂಚಭೂತವಿಕಾರವಾದ ಸ್ಥೂಲ ದೇಹ ಬರುತ್ತದೆ. ಈ ರೀತಿಯಾಗಿ ಸೃಷ್ಟರಾದ ಜೀವರ ಪಾಲಕ ಅನಿರುದ್ಧ. ಸೃಷ್ಟಿಯ ಕೊನೆಕಾಲ ಬಂದಾಗ ಸಂಕರ್ಷಣನು ತನ್ನ ಮುಖದ ಬೆಂಕಿಯಿಂದ ಎಲ್ಲರನ್ನು ಸಂಹರಿಸುತ್ತಾನೆ. ಈ ರೀತಿಯಾಗಿ ಬ್ರಹ್ಮಾಂಡಾಂತರ್ಗತವಾದ ಸೃಷ್ಟಿಯನ್ನಿಟ್ಟುಕೊಂಡು ಪ್ರದ್ಯುಮ್ನ ಸೃಷ್ಟಿಕರ್ತ, ಅನಿರುದ್ಧ ಪಾಲಕ, ಸಂಕರ್ಷಣ ಸಂಹಾರಕನೆಂದು ವ್ಯವಸ್ಥೆ ಮಾಡಿದ್ದು. ಅನಿರುದ್ಧನು ಬ್ರಹ್ಮಾಂಡದ ಸೃಷ್ಟಿಯಾಗುವುದಕ್ಕಿಂತ ಮೊದಲೇ ಜೀವರಿಗೆ ಸೂಕ್ಷ್ಮದೇಹವನ್ನು ಸೃಷ್ಟಿ ಮಾಡಿದ್ದಾನೆ. ಇದು ಬ್ರಹ್ಮಾಂಡಬಾಹ್ಯಸೃಷ್ಟಿ. ಹೀಗೆ ಸೃಷ್ಟಿಯ ದ್ವೈವಿಧ್ಯವನ್ನರಿತರೆ ಸೃಷ್ಟಿಗಾಗಿ ಅವತಾರತೆತ್ತ ಪ್ರದ್ಯುಮ್ನ ಸೂಕ್ಷ್ಮದೇಹ ಸೃಷ್ಟಿ ಮಾಡದೆ ಜೀವರನ್ನು ಸೃಷ್ಟಿಗಾಗಿ ಅನಿರುದ್ಧನಿಗೇಕೆ ಅರ್ಪಿಸಿದ? ಎನ್ನುವ ಪ್ರಶ್ನೆಗೆ ಸಮಾರ್ಪಕ ಉತ್ತರ ದೊರೆಯುತ್ತದೆ.

॥ ೧೦ ॥

ಪಂಚಾತ್ಮಕಃ ಸಭಗವಾನ್ ದ್ವಿಷಡಾತ್ಮಕೋಭೂತ್
ಪಂಚದ್ವಯೀಶತಸಹಸ್ರಪರೋಮಿತಶ್ಚ ।

ಏಕಃ ಸಮೋಽಪ್ಯಖಿಲದೋಷಸಮುಜ್ಝಿತೋಽಪಿ ಸರ್ವತ್ರ
ಪೂರ್ಣಗುಣಕೋಽಪಿ ಬಹುರೂಪವಿಭೂತ್ ॥

ಅನ್ವಯಾರ್ಥ—ಭಗವಾನ್-ಈಶ್ವರನಾದ, ಪಂಚಾತ್ಮಕಃ-ನಾರಾಯಣನು, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ ಅನಿರುದ್ಧ ಎಂಬ 5 ರೂಪ ತಳೆದ. ಸಃ—ಆ ಪರಮಾತ್ಮನು ದ್ವಿಪಞ್ಚಾತ್ಮಕಃ—ಕೇಶವಾದಿ 12 ರೂಪವುಳ್ಳವನು, ಪಂಚದ್ವಯೀ-ಮತ್ಸ್ಯಾದಿ 10 ರೂಪವುಳ್ಳವನು, ಶತಸಹಸ್ರಪರಃ—ನಾರಾಯಣಾದಿ 100 ರೂಪವುಳ್ಳವನು, ವಿಶ್ವಾದಿ ಸಹಸ್ರ ರೂಪವುಳ್ಳವನು, ಪರನೇ ಮೊದಲಾದ ಬಹುರೂಪವುಳ್ಳವನು, ಅನಿತಶ್ಚ—ಅಜಿತಾದಿ ಅನಂತ ರೂಪವುಳ್ಳವನು, ಅಭವತ್-ಆದನು. ಈದಾವ ಭಗವಂತನ ಎಲ್ಲಾ ಅವತಾರವೂ, ಏಕಃ—ಐಕ್ಯವುಳ್ಳದ್ದಾದರೂ, (ಪರಸ್ಪರ ಭೇದ ಶೂನ್ಯ), ಸಮೋಽಪಿ-ಸಮಾನವಾಗಿದ್ದರೂ, ಅಖಿಲದೋಷಸಮುಜ್ಝಿತೋಽಪಿ-ಸರ್ವಸ್ತ ದೋಷಗಳಿಂದ ರಹಿತನಾಗಿದ್ದರೂ, ಸರ್ವತ್ರ-ಎಲ್ಲಾ ರೂಪಗಳಲ್ಲಿಯೂ, ಪೂರ್ಣ ಗುಣಕಃಅಪಿ—ಪರಿಪೂರ್ಣವಾದ ಗುಣವುಳ್ಳವನಾದರೂ, ಬಹುರೂಪವಃ—ಬಹು ಸಂಖ್ಯಾಕರಾದ ಜೀವ ಜಡರಂತೆ ಬಹುರೂಪವುಳ್ಳವನು, ಅಭವತ್-ಆದನು.

ತಾತ್ಪರ್ಯಾರ್ಥ— ಪರಮಾತ್ಮನು ನಾರಾಯಣ, ವಾಸುದೇವ, ಸಂಕರ್ಷಣ, ಪ್ರದ್ಯುಮ್ನ, ಅನಿರುದ್ಧ ಎಂಬ 5 ರೂಪಗಳನ್ನು, ಕೇಶವಾದಿ 12 ರೂಪಗಳನ್ನೂ, ಮತ್ಸ್ಯಾದಿ ದಶಾವತಾರಗಳನ್ನೂ, ಅಜಿತಾದಿ ಅನಂತಾವತಾರಗಳನ್ನೂ ತಾಳಿದ. ಈ ಅವತಾರಗಳೂ ಅಭಿನ್ನಗಳು, ಪರಸ್ಪರ ಭೇದದ ಸೋಂಕೇ ಇಲ್ಲ. ಪ್ರತಿಯೊಂದೂ ಸಮಾನವೇ. ಯಾವ ರೂಪದಲ್ಲೂ ದೋಷದ ಸುಳಿವಿಲ್ಲ. ಪ್ರತಿಯೊಂದು ಅವತಾರವೂ ಪರಿಪೂರ್ಣಗುಣಗಳಿಂದ ತುಂಬಿವೆ. ಸರ್ವಸ್ತ ರೂಪಗಳಲ್ಲಿಯೂ ಭೇದ ರಹಿತವಾದ ಅತ್ಯಂತಾಭೇದವಿದೆ. ಹಾಗಿದ್ದರೂ ಪರಮಾತ್ಮನು ತನ್ನ ಅಚಿಂತ್ಯ ಅದ್ಭುತ ಸಾಮರ್ಥ್ಯದಿಂದ ಭೇದ ಕಾರ್ಯಕಾರಿಯಾದ ವಿಶೇಷದಿಂದಾಗಿ ಭೇದದ ಕಾರ್ಯವಾದ ತನ್ನಲ್ಲಿರತಕ್ಕ ಬಹುತ್ವಾದಿ ಸಂಖ್ಯೆಯನ್ನು ಕೂಡಿಸುತ್ತಾನೆ.

॥ ೧೧ ॥

ನಿರ್ದೋಷಪೂರ್ಣಗುಣವಿಗ್ರಹಆತ್ಮತಂತ್ರೋ
ನಿಶ್ಚೇತನಾತ್ಮಕಶರೀರಗುಣೈಶ್ಚಹೀನಃ ।

ಆನಂದಮಾತ್ರಕರಪಾದಮುಖೋದರಾದಿಃಸರ್ವತ್ರ ಚ
ಸ್ವಗತಭೇದವಿವರ್ಜಿತಾತ್ಮಾ ।

ಅನ್ವಯಾರ್ಥ—ಸಃ-ಅನಂತಾವತಾರಾತ್ಮಕನಾದ ಪರಮಾತ್ಮನು, ನಿರ್ದೋಷಪೂರ್ಣಗುಣವಿಗ್ರಹಃ-(ನಿರ್ದೋಷ)-ದೋಷಶೂನ್ಯವೂ, (ಪೂರ್ಣಗುಣ)-ಪರಿಪೂರ್ಣವಾದ ಗುಣಾತ್ಮಕವಾದ, (ವಿಗ್ರಹಃ)-ಶರೀರವುಳ್ಳವನು, (ಆತ್ಮತಂತ್ರಃ)-ಸ್ವತಂತ್ರನಾದವನು, ನಿಶ್ಚೇತನಾತ್ಮಕಶರೀರಗುಣೈಶ್ಚ-[ನಿಶ್ಚೇತನಾತ್ಮಕ]-ಜಡವಾದ, [ಶರೀರ]-ದೇಹದಿಂದಲೂ, (ಗುಣೈಃ)-ಗುಣಗಳಿಂದಲೂ, ಹೀನಃ-ರಹಿತನು, ಆನಂದಮಾತ್ರಕರಪಾದಮುಖೋದರಾದಿಃ-[ಆನಂದಮಾತ್ರ]-ಕೇವಲ ಆನಂದ ಸ್ವರೂಪವಾದ ಕೈ, ಕಾಲು, ಮುಖ ಮುಂತಾದ ಅವಯವವುಳ್ಳವನು, ಸರ್ವತ್ರ ಚ-ಎಲ್ಲಾ ಅವತಾರದಲ್ಲಿಯೂ, ಸ್ವಗತಭೇದವಿವರ್ಜಿತಾತ್ಮಾ-[ಸ್ವಗತ]-ತನ್ನಲ್ಲಿರುವ ಗುಣಕ್ರಿಯೆಗಳಿಂದ, [ಭೇದವಿವರ್ಜಿತಾತ್ಮಾ]-ಭೇದ ರಹಿತನು.

ತಾತ್ಪರ್ಯ—ಪಾದಾದಿಮೂರ್ಧಾಂತವಾದ ಪರಮಾತ್ಮನ ಪ್ರತಿಯೊಂದು ಅವಯವಗಳೂ ಜ್ಞಾನಾನಂದ ಸ್ವರೂಪಗಳು. ದೋಷದ ಲವಲೇಶಕ್ಕೂ ಇಲ್ಲಿ ಅವಕಾಶವಿಲ್ಲ, ಭಗವಂತನಿಗೆ ನಮ್ಮಂತೆ ಜಡ ಶರೀರವಿಲ್ಲ. ಜಡಗುಣಗಳು ಈತನಿಗಿಲ್ಲ. ಭಗವಂತನಿಗೂ, ಅತನ ಗುಣಕ್ರಿಯೆಗಳಿಗೂ ಭೇದವಿಲ್ಲ. ಪರಮಾತ್ಮನ ಪ್ರತಿಯೊಂದು ಅವತಾರಕ್ಕೂ ಈ ನಿಯಮ ಅನ್ವಯಿಸುತ್ತದೆ.

॥ ೧೨ ॥

ಕಾಲಾಚ್ಚದೇಶಗುಣತೋಸ್ಯನಚಾದಿರಂತೋ
ವೃದ್ಧಿಕ್ಷಯೌನತುಪರಸ್ಯಸದಾತನಸ್ಯ ।
ನೈತಾದೃಶಃಕ್ವಚಬಭೂವನಚೈವಭಾವ್ಯೋ ನಾಸ್ಯೋತ್ತರಃ
ಕಿಮುಪರಾತ್ಪರಮಸ್ಯವಿಷ್ಣೋಃ॥

ಅನ್ವಯಾರ್ಥ—ಸದಾತನಸ್ಯ-ಎಲ್ಲಾ ಕಾಲದಲ್ಲಿಯೂ, ಎಲ್ಲಾ ದೇಶದಲ್ಲಿಯೂ ಒಂದೇ ರೀತಿಯಾಗಿರತಕ್ಕ, ಪರಸ್ಯ-ಸರ್ವೋತ್ತಮವಾದ, ಅಸ್ಯ-ಪರಮಾತ್ಮನಿಗೆ, ದೇಶಗುಣತಃ-ದೇಶ ಸಂಬಂಧಿಯಾದ ಹಾಗೂ ಗುಣ ಸಂಬಂಧಿಯಾದ, ಚ-ಹಾಗೂ,

ಕಾಲಾತ್-ಕಾಲ ಸಂಬಂಧಿಯಾದ, ಆದಿಃ-ಆರಂಭವು, ಅಂತಃ-ಕೊನೆಯು. ವೃದ್ಧಿ ಕ್ಷಯೌ-ವೃದ್ಧಿಕ್ಷಯಗಳು, ನತು-ಇಲ್ಲವೇ ಇಲ್ಲ. ಏತಾದೃಶಃ-ಇವನಿಗೆ ಸಮಾನನಾದ ವನು, ಕ್ವಚ-ಎಲ್ಲಿಯೂ, ನಬಭೂವ-ಇರಲಿಲ್ಲ, ನಭಾವ್ಯಃ-ಇನ್ನು, ಮುಂದೆ ಬರು ವುದೂ ಇಲ್ಲ, ಪರಃತ್-ಶ್ರೇಷ್ಠರಾದ ರಮಾಬ್ರಹ್ಮಾದಿಗಿಂತಲೂ, ಪರಮಸ್ಮ-ಮಿಗಿ ಲಾದ, ವಿಷ್ಣೋಃ-ಶ್ರೀಮನ್ನಾರಾಯಣನಿಗೆ, ಉತ್ತರಃ-ಉತ್ತಮರಾದವರು, ನಾಸ್ತಿ-ಇಲ್ಲವೆಂದು, ಕಿಮು-ಏನು ಹೇಳತಕ್ಕದ್ದು?

ತಾತ್ಪರ್ಯ—ಪರಮಾತ್ಮನು ಪ್ರತಿಯೊಂದು ಕಾಲವಲ್ಲಿಯೂ ಪ್ರತಿಯೊಂದು ದೇಶ ದಲ್ಲಿಯೂ ಒಂದೇ ರೀತಿಯಾಗಿರತಕ್ಕವ ಕಾಲ ನಿಮಿತ್ತಿಕವಾದ ಉತ್ಪತ್ತಿ ನಾಶ ಗಳೂ, ವೃದ್ಧಿಕ್ಷಯಗಳೂ ಇವನಿಗಿಲ್ಲ. ಅನಾದಿ ನಿತ್ಯನು, ಸರ್ವತ್ರವ್ಯಾಪ್ತನು. ಈತನ ಗುಣಗಳಿಗೂ ಅದ್ಯಂತಗಳಿಲ್ಲ. ಅನಂತಾನಂತ ಗುಣಗಳಿಂದ ಪರಿಪೂರ್ಣನು. ಎಂದೆಂದೂ ಈತನಿಗೆ ಸಮಾನನಾದವನು ಇಲ್ಲ. ಉತ್ತಮನಂತೂ ಖಾತರಾಂ ಇಲ್ಲ,

॥ ೧೩ ॥

ಸರ್ವಜ್ಞ ಈಶ್ವರತಮಃ ಸಚ ಸರ್ವಶಕ್ತಿಃ ಪೂರ್ಣಾದ್ವಯ
-ಯಾತ್ಮಬಲಚಿತ್ಸುಖವೀರ್ಯಸಾರಃ ।
ಯಸ್ಯಾಽಜ್ಞಯಾರಹಿತಮಿಂದಿರಯಾಸಮೇತಂ
ಬ್ರಹ್ಮೇಶಪೂರ್ವಕಮಿದಂನತುಕಸ್ಯಚೇಶವತ್ ॥

ಅನ್ವಯಾರ್ಥ—ಸಚ-ಆ ಪರಮಾತ್ಮನು, ಸರ್ವಜ್ಞಃ-ಎಲ್ಲವನ್ನೂ ಬಲ್ಲವನು, ಈಶ್ವರ ತಮಃ-ಅತ್ಯುತ್ತಮ ನಿಯಾಮಕನು, ಸರ್ವಶಕ್ತಿಃ-ಸರ್ವವಿಷಯಕ ಶಕ್ತಿವುಳ್ಳವನು, ಪೂರ್ಣಾದ್ವಯಾತ್ಮಬಲಚಿತ್ಸುಖವೀರ್ಯಸಾರಃ-(ಪೂರ್ಣ)-ಪರಿ ಪೂರ್ಣನಾದ, (ಅದ್ವಯ)-ನಾಶ ರಹಿತನಾದ, (ಆತ್ಮ)-ಸ್ವರೂಪವಾದ, (ಬಲ)-ಸಾಮರ್ಥ್ಯ, [ಚಿತ್]-ಜ್ಞಾನ, [ಸುಖ]-ಆನಂದ, [ವೀರ್ಯ]-ವೀರತ್ವ ಇವುಗಳಿಂದ, (ಸಾರಃಚ)-ಶ್ರೇಷ್ಠನೂ ಕೂಡ ಆಗಿದ್ದಾನೆ. ಯಸ್ಯ-ಯಾವ ಪರಮಾತ್ಮನ, ಆಜ್ಞಯಾ-ಅಪ್ಪಣೆಯಿಂದ, ರಹಿ ತಂ-ಹೊರತಾಗಿ, ಇಂದಿರಯಾ-ಲಕ್ಷ್ಮಿಯಿಂದ, ಸಮೇತಂ-ಕೂಡಿರತಕ್ಕ, ಬ್ರಹ್ಮೇಶ ಪೂರ್ವಕಂ-ಬ್ರಹ್ಮ ರುದ್ರರೇ ಮೊದಲಾದ, ಇದಂ-ಈ ಸಮಾಗ್ರ ಪ್ರಪಂಚವು, ಕಸ್ಯ ಚ-ಯಾವ ಕಾರ್ಯ ಮಾಡಲೂ, ನತುಈಶಂ-ಸಮರ್ಥವಲ್ಲ.

ತಾತ್ಪರ್ಯ—ಪರಮಾತ್ಮನು ಪ್ರತಿಯೊಂದನ್ನೂ ಅರಿತವ. ಸಕಲರಿಗೂ ಪರಮ ಪ್ರೇರಕ. ಅತ್ಯುತ್ತಮ ನಿಯಾಮಕ ಮನಬಂದರೆ ಏನು ಬೇಕಾದರೂ ಮಾಡಬಲ್ಲ. ಆತ ಸರ್ವಶಕ್ತ. ಅವನ ಬಲ, ಜ್ಞಾನ, ಆನಂದ, ವೀರ್ಯ ಎಲ್ಲವೂ ಪರಿಪೂರ್ಣ ಯಾವ ಕೊರತೆಯೂಗಲಿ ವೃದ್ಧಿಕ್ಷಯವಾಗಲಿ ಇಲ್ಲ. ಇವೆಲ್ಲವೂ ಆತನ ಸ್ವರೂಪ ಭೂತ ಧರ್ಮಗಳು. ನಾವೆಲ್ಲ ಪರಮಾತ್ಮನ ಕೈ ಗೊಂಬೆಗಳು. ಆವನ ಚಿತ್ತಕ್ಕೆ ಬಾರದೆ ಹೋದರೆ ಯಾರೂ ಏನೂ ಮಾಡಲಾರರು. ನಾವೇಕೆ ಬ್ರಹ್ಮ ರುದ್ರಾದಿ ದೇವಾದಿದೇವತೆಗಳೂ ಪರಮಾತ್ಮನ ಒಪ್ಪಿಗೆಯಿಲ್ಲದೆ ಅತ್ಯಿತ್ತ ಚಲಿಲೂ ಅಸಪಾರ್ಥರು. ಹೆಚ್ಚೇಕೆ ಪರಮ ಪ್ರೀತಿ ಪಾತ್ರಳಾದ ಮಾಪಾಲಕ್ಷ್ಮಿಯೂ ಪರಮಾತ್ಮನ ಸಮ್ಮತಿ ಇಲ್ಲದೆ ಹೋದರೆ ಅಲ್ಲಾಡಲೂ ಅಶಕ್ತಳು.

॥ ೧೪ ॥

ಆಭಾಸಕೋऽಸ್ಯಪವನ:ಪವನಸ್ಯರುದ್ರ: ಶೇಷಾತ್ಮಕೋ
ಗರುಡಏವಚಶಕ್ರಕಾವರೌ ।
ವೀಂದ್ರೇಶಯೋಸ್ತದಪರೇತ್ವನಯೋಶ್ಚತೇಷಾ
ಮೃಷ್ಯಾದಯ:ಕ್ರಮಶಊನಗುಣಾ:ಶತಾಂಶಾ: ॥

ಅನ್ವಯಾರ್ಥ—ಅಸ್ಯ-ಈ ಪರಮಾತ್ಮನಿಗೆ, ಪವನ:-ವಾಯುದೇವರು, ಆಭಾಸಕ:—ಪ್ರತಿಬಿಂಬರು, ಪವನಸ್ಯ—ವಾಯು ದೇವರಿಗೆ, ಶೇಷಾತ್ಮಕೋರುದ್ರ:—ಶೇಷನಾಗುವ ರುದ್ರನು, ಚ-ಮತ್ತು, ಗರುಡಏವ—ಗರುಡನು ಈ ಮೂವರೂ, ಆಭಾಸಕಾ:-ಪ್ರತಿ ಬಿಂಬರು, ವೀಂದ್ರೇಶಯೋ:—ಗರುಡ ರುದ್ರರಿಗೆ, ಶಕ್ರಕಾವರೌ—ಇಂದ್ರ ಕಾಮರು, ಆಭಾಶಕಾ:-ಪ್ರತಿಬಿಂಬರು, ಅನಯೋ:ಚ—ಇಂದ್ರ ಮನ್ಮಥರಿಗೆ, ತದಪರೇ-ಅವರಿಗಿಂತ ಇತರರಾದ ಅಹಂಕಾರಿಕ ವ್ಯಾಣಾದಿಗಳು, ತೇ:ಷಾಂ-ಇತರ ದೇವತೆಗಳಿಗೆ, ಋಷ್ಯಾ ದಯ:-ಋಷಿ ಮೊದಲಾದವರು, ಆಭಾಸಕಾ:—ಪ್ರತಿಬಿಂಬರು, ಕ್ರಮಶ:-ಕ್ರಮದಿಂದ ಶತಾಂಶವತ್—ನೂರಂಶದಿಂದ, ಊನಗುಣಾ:—ಪ್ರತಿಬಿಂಬರು ಬಿಂಬಕ್ಕಿಂತ ಕಡಿಮೆ ಗುಣಉಳ್ಳವರು.

ತಾತ್ಪರ್ಯ—ಬಿಂಬಕ್ಕೆ ಸದೃಶವಾಗಿರುತ್ತಾ, ಬಿಂಬದ ಆಧೀನವಾಗಿದ್ದರೆ ಅದು ಪ್ರತಿ ಬಿಂಬವೆನಿಸುತ್ತದೆ. ಕನ್ನಡಿಯಲ್ಲಿ ಕಾಣಿಸುವ ಪ್ರತಿಮುಖವು ಬಿಂಬವಾದ ಮುಖಕ್ಕೆ

ಸಮಾನವಾಗಿದೆ. ಮುಖದ ಚಲನವಲನೆಯನ್ನನುಸರಿಸಿ ತಾನೆ ಪ್ರತಿ ಮುಖದಲ್ಲಿ ಕ್ರಿಯಾ ನಿಷ್ಪತ್ತಿ? ಆದ್ದರಿಂದ ಮುಖದ ಆಧೀನವೂ ಆಗಿದೆ. ಪರಮಾತ್ಮನ ಪ್ರತಿ ಬಿಂಬ ಶ್ರೀವಾಯು ದೇವರು ಇವರಿಗೆಗರುಡ, ಶೇಷ, ರುದ್ರರು. ಈ ಮೂವರ ಪ್ರತಿಬಿಂಬ ಇಂದ್ರ ಮತ್ತು ಕಾಮರು. ಇಂದ್ರ ಕಾಮರ ಪ್ರತಿಬಿಂಬರು ಇತರ ದೇವತೆಗಳು. ದೇವತೆಗಳ ಪ್ರತಿಬಿಂಬರು ಋಷಿ ಪ್ರಭೃತಿಗಳು. ಪ್ರತಿಬಿಂಬ ರಾದವರು ಬಿಂಬಕ್ಕಿಂತ ನೂರು ಪಾಲು ಕಡಿಮೆ ಗುಣವುಳ್ಳವರು.

॥ ೮೫ ॥

ಆಭಾಸಕಾತ್ಪರಮಾಸ್ಯಮರುತ್ಸ್ವರೂಪಾ
ಚ್ಛ್ರೇಷ್ಠಾಪ್ಯಜಾತ್ತದನುಗೀಃಶಿವತೋವರಿಷ್ಠಾ ।
ತಸ್ಯಾಉಮಾವಿಪತಿನೀಚ ಗಿರಸ್ತಯೋಸ್ತುಶಚ್ಯಾದಿಕಾಃ
ಕ್ರಮಶಏವಯಥಾಪುರುಷಾಂಸಃ ॥

ಅನ್ವಯಾರ್ಥ—ಆಭಾ-ಲಕ್ಷ್ಮಿ ಬಳಿಕ, ರಮಾ-ಲಕ್ಷ್ಮಿದೇವಿಯು, ಅಸ್ಯ-ಈ ಭಗವಂತನ, ಆಭಾಸಕಾಃ-ಪ್ರತಿಬಿಂಬಳು, ಮರುತ್ಸ್ವರೂಪಾತ್-ವಾಯುದೇವರ ಸ್ವರೂಪರಾದ, ಅಜಾತ್-ಬ್ರಹ್ಮದೇವರಿಗಿಂತ, ಶ್ರೇಷ್ಠಾಅಪಿ-ಶ್ರೇಷ್ಠಳು ಕೂಡಾ ಆಗಿದ್ದಾಳೆ, ತದನು-ಲಕ್ಷ್ಮಿಯನ್ನನುಸರಿಸಿ, ಗೀಃ-ಭಾರತೀದೇವಿಯು ಪ್ರತಿಬಿಂಬಳು, ಹಾಗೂ ಶಿವತಃ-ರುದ್ರನ ದಸೆಯಿಂದ, ವರಿಷ್ಠಾ-ಉತ್ಕೃಷ್ಟಳು, ಉಮಾ-ಪಾರ್ವತಿಯು, ಚ-ಮತ್ತು, ವಿಪತಿನೀ-ಗರುಡನ ಪತ್ನಿ ಸೌಪರ್ಣಿಯು, ತಸ್ಯಾಃ-ಆ, ಗಿರಃ-ಭಾರತೀದೇವಿಯು, ಆಭಾಸಕಾಃ-ಪ್ರತಿಬಿಂಬರು, ತಯೋಃತು-ಪಾರ್ವತೀ-ಸೌಪರ್ಣೀಯರ ಆಭಾಸಕಾಃ-ಪ್ರತಿಬಿಂಬರು, ಶಚ್ಯಾದಿಕಾಃ-ಶಚಿಯೇ ಮೊದಲಾಗಿ ಉಳ್ಳವರು, ಯಥಾ-ಹೇಗೆ, ಪುರುಷಾಂಸಃ-ಪುರುಷರು ಮೇಲಿನ ಕ್ರಮದಿಂದ ಬಿಂಬ ಪ್ರತಿ ಬಿಂಬ ಭಾವ ಸಂಪನ್ನರೋ ಹಾಗೆಯೇ ಸ್ತ್ರೀಯರೂ ಕೂಡಾ ಹಿಂದೆ ಹೇಳಿದಂತೆ ಒಬ್ಬರಿಗೆ ಇನ್ನೊಬ್ಬರು ಪ್ರತಿಬಿಂಬರು.

ತಾತ್ಪರ್ಯ— ಗಂಡಸರಂತೆ ಹೆಂಗಳೆಯರಲ್ಲೂ ಬಿಂಬ ಪ್ರತಿಬಿಂಬಗಳ ವ್ಯವಸ್ಥೆಯಿದೆ. ಲಕ್ಷ್ಮಿದೇವಿಯು ಪರಮಾತ್ಮನ ಪ್ರತಿಬಿಂಬಳು. ಭಾರತೀ, ಸರಸ್ವತೀಯರು ಲಕ್ಷ್ಮೀ ದೇವಿಯ ಪ್ರತಿಬಿಂಬರು. ಪಾರ್ವತಿಯು ಭಾರತೀ ಸರಸ್ವತಿಯ ಪ್ರತಿಬಿಂಬರು.

ಶಚಿಯೇ ಮೊದಲಾದವರು ಪಾರ್ವತಿ ಸೌಪರ್ಣಿಯರ ಪ್ರತಿಬಿಂಬರು, ವಾಯು ದೇವರು ಹಾಗೂ ಲಕ್ಷ್ಮೀದೇವಿ ಇವರೀರ್ವರೂ ಪರಮಾತ್ಮನ ಪ್ರತಿಬಿಂಬರಾಗಿ ದ್ದರೂ ಅವರನ್ನು ಸರಿಸಮಾನರೆಂದು ಪರಿಗಣಿಸಬಾರದು. ಬ್ರಹ್ಮ ವಾಯುಗಳಿ ಗಿಂತ ಲಕ್ಷ್ಮೀದೇವಿಯು ಕೋಟಿ ಗುಣಗಳಿಗಿಂತ ಉತ್ಕೃಷ್ಟಳು. ಹಾಗೆಯೇ ಶಿವಾದಿ ಗಳಿಗಿಂತ ಭಾರತೀ ಸರಸ್ವತಿಯರು ಶ್ರೇಷ್ಠರು.

॥ ೧೬ ॥

ಬಿಂಬ ಭೂತರಾದವರಿಗೆ ಪ್ರತಿಬಿಂಬಕ್ಕಿಂತ ನೂರು ಗುಣ ಅಧಿಕ್ಯವನ್ನು ತಿಳಿಸಿದರು, ಯಥಾ ಪುರುಷಾಂಸಃ ಎನ್ನುವಾಗ ಪುರುಷರಂತೆ ಹೆಂಗಸರಲ್ಲೂ ಈ ಕ್ರಮವಿದೆ. ಪೂರ್ವೋಕ್ತವಾದ ದೇವಾದಿಗಳಲ್ಲಿ ಹೆಂಡತಿಗೂ ಗಂಡನಿಗೂ ಶತಗುಣ ಗಳಅಂತರವಿದೆ. ಅನ್ನುವ ಅರ್ಥ ಬರುತ್ತದೆ. ಇದು ಸರಿಯೇ ಎನ್ನುವುದು ಒಂದು ಪಶ್ನೆ. (2) ತೈತ್ತಿರಿಯೋಪನಿಷತ್ತಿನಲ್ಲಿ ರುದ್ರನಿಗಿಂತ ಬ್ರಹ್ಮನಿಗೆ ನೂರು ಗುಣ ಗಳಂತರವನ್ನು ವಿವರಿಸಿದರು. ಛಾಂದೋಗದಲ್ಲಿ ರುದ್ರನಿಗಿಂತ ನೂರು ಗುಣ ಅಧಿಕವುಳ್ಳ ಸರಸ್ವತಿಗಿಂತ ನೂರು ಗುಣ ಅಧಿಕವುಳ್ಳವನನ್ನಾಗಿ ಬ್ರಹ್ಮನನ್ನು ತಿಳಿಸಿ ದ್ದಾರೆ. ಹೀಗೆ 2 ಶ್ರುತಿಗಳಲ್ಲಿ ಪರಸ್ಪರ ವಿರೋಧ ಇದೆ. ಈ ವಿರೋಧ ಪರಿಹಾರ ಕ್ರಮ ಹೇಗೆ? ಈ 2 ಪ್ರಶ್ನೆಗಳಿಗೂ ಉತ್ತರವನ್ನು ಕೊಡುತ್ತಿದ್ದಾರೆ ಶ್ರೀವಾದಾ ಚಾರ್ಯರು.

ತಾಭ್ಯಶ್ಚ ತೇಶತಗುಣೈರ್ದಶತೋವರಿಷ್ಠಾಃ
ಪಂಚೋತ್ತರೈರಪಿಯಥಾಕ್ರಮಮುಶಃಶ್ರುತಿಸ್ಥಾಃ ।
ಶಬ್ದೋಬಹುತ್ವವಚನಃಶತಮಿತ್ಯತಶ್ಚಶ್ರುತ್ಯಂತರೇಷು
ಬಹುಧೋಕ್ತಿವಿರುದ್ಧತಾನ್ತ ॥

ಅನ್ವಯಾರ್ಥ—ತೇ-ಪುರುಷರು, ತಾಭ್ಯಃ-ತಮ್ಮ ಹೆಂಗಸರಿಗಿಂತ, ಶತಗುಣೈಃ—ಕೆಲ ವರು ನೂರು ಗುಣಗಳಿಂದ, ಹಲವರು, ದಶಗುಣೈಃ-ಹತ್ತು ಗುಣಗಳಿಂದ ಇನ್ನು ಕೆಲವರು, ಪಂಚೋತ್ತರೈಃದಶತಃ:—ಹದಿನೈದು ಗುಣಗಳಿಂದ ವರಿಷ್ಠರು, ಯಥಾ ಕ್ರಮತಃ-ಯಾವ ಕ್ರಮದಿಂದ, ಶ್ರುತಿಸ್ಥಾಃ-ವೇದಗಳಲ್ಲಿ ಪ್ರತಿಪಾದ್ಯವಾಗಿದೆಯೋ, ತೇನೈವಕ್ರಮೇಣಜ್ಞೇಯಾ-ಆದೇ ರೀತಿಯಲ್ಲಿ ತಿಳಿಯ ತಕ್ಕದ್ದು, ಶತಂಇತಿಶಬ್ದಃ-

ಶತ ಎಂಬ ಶಬ್ದವು, ಬಹುತ್ವವಚನಃ ನೂರು, ಸಾವಿರ, ಹತ್ತು ಸಾವಿರ ಇತ್ಯಾದಿ ಬಹು ಸಂಖ್ಯೆಯನ್ನು ಹೇಳುತ್ತದೆ. ಅತಃಚ-ಈ ಕಾರಣದಿಂದ, ಶ್ರುತ್ಯಂತರೇಷು-ಬೇರೆ ಬೇರೆ ಶ್ರುತಿಗಳಲ್ಲಿ, ಬಹುಧೋಕ್ತಿವಿರುದ್ಧತಾ-(ಬಹುಧಾ)—ನಾನಾ ವಿಧದ, (ಉಕ್ತಿ)-ಹೇಳಿಕೆಯಲ್ಲಿ, (ವಿರುದ್ಧತಾ)-ವಿರೋಧವು, ನ-ಇಲ್ಲ.

ತಾತ್ಪರ್ಯ— ಬಿಂಬ ಪ್ರತಿಬಿಂಬಗಳಲ್ಲಿ ನೂರು ಗುಣಗಳ ಅಂತರವೆನ್ನುವ ನಿಯಮ ಪುರುಷರಿಗೆ ಮಾತ್ರ ಸೀಮಿತ. ಹೆಂಗಸರಿಗಿಂತ ಗಂಡಸರು 100 ಗುಣಗಳಿಗಿಂತ ಅಧಿಕರು ಎನ್ನುವ ನಿಯಮವಿಲ್ಲ. ಕೆಲವರು ತಮ್ಮ ಹೆಂಡತಿಯಿಂದ ನೂರು ಗುಣಗಳಿಗಿಂತ ಅಧಿಕರು, ಇನ್ನು ಕೆಲವರು ಹತ್ತು ಗುಣಗಳಿಗಿಂತ, ಮತ್ತೆ ಕೆಲವರು 15 ಗುಣಗಳಿಗಿಂತ ಏರಿಲು. ಈ ಅಂತರಗಳ ನಿರ್ಣಯಕ್ಕೆ ವೇದವೊಂದೇ ಆಧಾರ' ಶ್ರುತಿಯಿಂದಲೇ ಯಾರು ಯಾರಿಗಿಂತ ಎಷ್ಟು ಗುಣಗಳಿಗಿಂತ ಶ್ರೇಷ್ಠರು ಎಂದು ತಿಳಿಯಲು ಸಾಧ್ಯ. ಇದೇ ಮೊದಲನೇ ಪ್ರಶ್ನೆ ಉತ್ತರ. ಎರಡನೆಯ ಪ್ರಶ್ನೆಗೆ ಸುಲಭವಾಗಿ ಉತ್ತರಿಸಿದ್ದಾರೆ. ಶತ ಎನ್ನುವ ಶಬ್ದಕ್ಕೆ ನೂರು ಎನ್ನುವುದು ಮಾತ್ರ ಅರ್ಥವಲ್ಲ. ವೈದಿಕ ಸಾಹಿತ್ಯದಲ್ಲಿ ಈ ಶತಶಬ್ದವು ಬಹುಸಂಖ್ಯೆಯನ್ನು ಹೇಳುತ್ತದೆ. ಶತ ಶಬ್ದಕ್ಕೆ 100 ಎನ್ನುವ ಅರ್ಥವಿದ್ದಂತೆ ಸಾವಿರ, ಹತ್ತು ಸಾವಿರ, ಲಕ್ಷ ಇತ್ಯಾದಿ ನಾನಾ ಸಂಖ್ಯೆಗಳೂ ಅರ್ಥಗಳು. ಹೀಗಿರುವಾಗ ಪರಸ್ಪರ ಶ್ರುತಿಗಳಲ್ಲಿ ವಿರೋಧವಿಲ್ಲ.

॥ ೧೭ ॥

ಈ ನೀಚೋಚ್ಚತೆಗಳು ಸಂಸಾರದ ದೆಸೆಯಲ್ಲಿ ಮಾತ್ರ. ಯಾವ ದೋಷಕೂ ಅವಕಾಶವಿಲ್ಲದ ಮೋಕ್ಷದಲ್ಲಿ ಎಲ್ಲರೂ ಸರಿಸಮಾನರು. ತಾರತಮ್ಯ ಎನ್ನುವ ಕಳಂಕ ಅಲ್ಲಿ ಇಲ್ಲವೇ ಇಲ್ಲ ಎನ್ನುವ ಭ್ರಾಂತಿಯ ನಿವಾರಣೆ ಈ ಶ್ಲೋಕದಲ್ಲಿ ಮಾಡಿದ್ದಾರೆ. ಶತ ಶಬ್ದವು ನಾನಾ ಸಂಖ್ಯೆಯನ್ನು ಹೇಳುತ್ತೆ ಅನ್ನುವ ವಿಷಯದಲ್ಲಿ ಪ್ರಮಾಣವನ್ನೂ ಉದಾಹರಿಸಿದ್ದಾರೆ. ಈ ಪದ್ಯದಲ್ಲಿ.

ತೇಷಾಂಸ್ವರೂಪವಿಂದವೋವಯತೋಽಥವಾಽಕ್ತಾ
ಆಪ್ಯೇವವೋವಸತತೋಚ್ಚವಿನೀಚರೂಪಾಃ।
ಶಬ್ದಃಶತಂದಶಸಹಸ್ರವಿತಿಸ್ಮಯಸ್ಮಾತ್ತಸ್ಮಾನ್ನಹೀನ

ವಚನೋಽಥತತೋಽಗ್ರ್ಯರೂಪಾಃ॥

ಅನ್ವಯಾರ್ಥ— ಯತಃ-ಯಾವ ಕಾರಣದಿಂದ, ಇದಂ-ಈ ತಾರತಮ್ಯವು, ತೇಷಾಂ-ಜೀವರ, ಸ್ವರೂಪಮೇವ-ಸ್ವಭಾವವೇ ಆಗಿದೆಯೋ, ಅಥ-ಆದ್ದರಿಂದ, ಏವಮೇವ-ಈ ಸಂಸಾರದಂತೆ,ಸತತೋಚ್ಚ ನೀಚರೂಪಾಃ-(ಸತತ-)ನಿರಂತರವಾದ, (ಉಚ್ಚ)-ಉತ್ಕೃಷ್ಟವಾದ, (ನೀಚ)-ಅಪಕೃಷ್ಟವಾದ, (ರೂಪಾಃ)-ಸ್ವರೂಪವುಳ್ಳ ವರು, ಯಸ್ಮಾತ್-ಯಾವ ಕಾರಣದಿಂದ, ಶತಂಶಬ್ದಃ-ಶತ ಎಂಬ ಪದವು, ದಶ-ಹತ್ತು ಎಂಬ ಸಂಖ್ಯಾ ಭೋದಕ. ಹಾಗೆ ಸಹಸ್ರಂ-ಸಾವಿರ ಎಂಬ ಸಂಖ್ಯಾಬೋಧಕ ಹಾಗೆ, ದಶಸಹಸ್ರಂ-ಹತ್ತು ಸಾವಿರವೆಂಬ ಅರ್ಥವಾಚಕವೋ ತಸ್ಮಾತ್-ಅಕಾರಣ ದಿಂದ, ಶತಂಶಬ್ದ-ಶತ ಎನ್ನುವ ಶಬ್ದವು, ಹೀನವಚನಃ-ಅವರವರ ಯೋಗ್ಯತೆ ಯಿಂದ ನ್ಯೂನವಾದ ಗುಣಗಳನ್ನು ಹೇಳತಕ್ಕದ್ದು, ನ-ಅಲ್ಲ, ಅಥ-ಆದುದರಿಂದ, ತೇ-ದೇವಾದಿ ಜೀವರು, ಶತಃ-ನೂರಕ್ಕಿಂತಲೂ, ಅಗ್ರ್ಯರೂಪಾಃ-ಹೆಚ್ಚು ಗುಣವುಳ್ಳ ಸ್ವರೂಪದವರು.

ತಾತ್ಪರ್ಯ—ಮುಕ್ತರೆಲ್ಲರೂ ಅವರವರ ಯೋಗ್ಯತಾನುಗುಣವಾಗಿ ಪೂರ್ಣಾನಂದರು. ಯೋಗ್ಯತಾ ತಾರತಮ್ಯ ಮುಕ್ತಿಯಲ್ಲಿದ್ದರೂ ಯೋಗ್ಯತಾನುಗುಣವಾದ, ಪೂರ್ಣಾನಂದಾವಿರ್ಭಾವಕ್ಕೆ ಪ್ರತಿಬಂಧಕವಿಲ್ಲ. ಗುಣಗಳ ನೀಚೋಚ್ಚತೆಗಳು ಜೀವರ ಸ್ವರೂಪಭೂತವಾದದ್ದು. ಅನಾದಿ ನಿತ್ಯ. ಇದಕ್ಕೆ ಚ್ಯುತಿಯೆಂಬುದು ಬರಲಾರದು. ಆದುದರಿಂದ ಮುಕ್ತಿಯಲ್ಲೂ ಈ ತಾರತಮ್ಯ ಭಾವ ಇರುತ್ತದೆ ಮುಕ್ತಿಯಲ್ಲಿ ಈ ತಾರತಮ್ಯ ಇಲ್ಲದಿದ್ದರೆ ಅದು ಜೀವನ ಸ್ವಭಾವ (ಸ್ವರೂಪ) ಹೇಗಾದೀತು?

ಐತರೇಯೋಪನಿಷತ್‌ನಲ್ಲಿ" ದಶದಶತಃ ತತ್‌ಶತಂ, ದಶಶತಾನಿ, ತತ್‌ಸಹಸ್ರಂ ಎಂಬ ವಾಕ್ಯವಿದೆ. ಶತಶಬ್ದವು ಹತ್ತು, ನೂರು, ಸಾವಿರ, ಹತ್ತುಸಾವಿರ, ಅನಂತ ಹೀಗೆ ವಿವಕ್ಷಿತವಾದ ಎಲ್ಲಾ ಸಂಖ್ಯೆಗಳನ್ನು ಹೇಳುತ್ತದೆ. ಒಂದು ಕಡೆ ಒಬ್ಬನನ್ನು ಇನ್ನೊಬ್ಬನಿಗಿಂತ ಶತಗುಣಗಳಿಗಿಂತ ಅಧಿಕವೆಂದು ಹೇಳಿದ್ದು ಇನ್ನೊಂದೆಡೆ ಅವರಿಬ್ಬರ ಅಂತರ ಸಾವಿರ ಗುಣಗಳಷ್ಟು ಉಕ್ತವಾಗಿದ್ದರೂ ಈ 2 ಮಾತುಗಳಿಗೆ ಪರಸ್ಪರ ವಿರೋಧಕ್ಕೆ ಅವಕಾಶವಿಲ್ಲ. ಏಕೆಂದರೆ ಶತ ಶಬ್ದಕ್ಕೆ ನೂರೆನ್ನುವ ಅರ್ಥ ಮಾತ್ರ ಅಲ್ಲ. ಅವನಲ್ಲಿ 10 ಗುಣ ಪ್ರಮಿತವಾಗಿದ್ದರೆ ಹತ್ತು ಗುಣವುಳ್ಳವನೆಂದ

ರ್ಥ. ಅವನಲ್ಲಿ ಸಾವಿರ ಗುಣಗಳಿವೆಯೆಂದು ಇನ್ನೊಂದು ವಾಕ್ಯದಿಂದ ಪ್ರಮಿತ ವಾದರೆ ಶತಶಬ್ದಕ್ಕೆ 1000 ಗುಣವುಳ್ಳವನೆಂದರ್ಥವಾಡಬೇಕು. ಆದುದರಿಂದ ಶತಶಬ್ದವು ಅವರವರ ಯೋಗ್ಯತೆಗಿಂತ ಕಡಿಮೆ ಗುಣಗಳನ್ನು ಹೇಳುವುದಿಲ್ಲ.

॥ ೧೮ ॥

ಏವಂನರೋತ್ತಮಪರಾಸ್ತ್ವಿಮುಕ್ತಿಯೋಗ್ಯಾ
ಅನ್ಯೇಚಸಂಸೃತಿಪರಾಅಸುರಾಸ್ತಮೋಗಾಃ।
ಏವಂಸದೈವನಿಯಮಃಕ್ವಚಿದನ್ಯಥಾನಯಾವನ್ನ
ಪೂರ್ತಿರುತಸಂಸೃತಿಗಾಃಸಮಸ್ತಾಃ॥

ಅನ್ವಯಾರ್ಥ — ಏವಂ-ಈರೀತಿಯಾಗಿ, ನರೋತ್ತಮಪರಾಃ-ಮನುಷ್ಯೋತ್ತಮರ ನ್ನಾರಂಭಿಸಿ ಚತುರ್ಮುಖಬ್ರಹ್ಮನ ಪರ್ಯಂತವಾದ ಎಲ್ಲಾ ಜೀವರೂ, ವಿಮುಕ್ತಿಯೋಗ್ಯಾಃ-ಮೋಕ್ಷ ಯೋಗ್ಯರು, ಅನ್ಯೇಚ-ಇತರರಾದ ಮನುಷ್ಯಮಧ್ಯ ಮರು, ಸಂಸೃತಿಪರಾಃ-ಸಂಸಾರದಲ್ಲೇ ಆಲೆದಾಡುವವರು, ಅಸುರಾಃ-ಮನುಷ್ಯಾಧ ಮರನ್ನಾರಂಭಿಸಿ ಕಲಿಪರ್ಯಂತರಾದ ಎಲ್ಲಾ ಆಸುರೀ ಸ್ವಭಾವದ ಜೀವರು, ತಮೋ ಗಾಃ-ಅಂಧತಮಿಸ್ರನಲ್ಲಿ ಇರತಕ್ಕವರು. ಏವಂ-ಈ ರೀತಿಯಾಗಿ, ನಿಯಮಃ-ವ್ಯವಸ್ಥೆಯು, ಸದೈವ-ಸಾರ್ವಕಾಲಿಕ, ಕ್ವಚಿತ-ಯಾವಾಗಲೂ, ಅನ್ಯಥಾ-ಬೇರೆ ರೀತಿಯಾಗಿರತಕ್ಕದ್ದು, ನ-ಅಲ್ಲ, ಯಾವತ-ಎಷ್ಟರವರೇಗೆ, ಪೂರ್ತಿಃ-ಸ್ವಯೋಗ್ಯ ವಾದ ಸಾಧನೆಯು ಸಮಾಪ್ತಿಯು, ನ-ಆಗುವುದಿಲ್ಲವೋ, ತಾವತ-ಅಷ್ಟರವರೇಗೆ, ಸಮಸ್ತಾಃ-ತ್ರಿವಿಧ ಜೀವರೂ, ಸಂಸೃತಿಗಾಃ-ಸಂಸಾರದಲ್ಲಿಯೇ ಇರುತ್ತಾರೆ.

ತಾತ್ಪರ್ಯ—ಮನುಷ್ಯೋತ್ತಮರು, ಋಷಿಗಳು, ಗಂಧರ್ವರು, ದೇವತೆಗಳು ಹೀಗೆ ಮನುಷ್ಯೋತ್ತಮರನ್ನಾರಂಭಿಸಿ ಚತುರ್ಮುಖಬ್ರಹ್ಮದೇವರಪರ್ಯಂತವಾದಎಲ್ಲಾ ಪಜ್ಜೀವರೂಮೋಕ್ಷಯೋಗ್ಯರು. ಮನುಷ್ಯಮಧ್ಯಮರು ಸುಖದುಃಖವಿಶ್ರಸ್ಥಾನದಲ್ಲಿಉರುಳ ತಕ್ಕವರು. ಉಳಿದ ಮನುಷ್ಯಾಧಮರನ್ನಾರಂಭಿಸಿ ಕಲಿಪರ್ಯಂತವಾದ ಎಲ್ಲಾ ಅಧಮ ಜೀವರೂ ನಿತ್ಯ ನರಕದಲ್ಲಿರಲು ಅರ್ಹರು. ಈ ನಿಯಮ ಸಾರ್ವಕಾಲಿಕವೆಂದೆಂದೂ ಕೊಂಚವೂ ಬದಲಾವಣೆಯಿಲ್ಲ. ರಿಯಾಯಿತಿ ಇಲ್ಲವೇ ಇಲ್ಲ. ಯೋಗ್ಯ ಸಾಧನೆಯು ಪೂರ್ತಿಯಾಗುವವರೆಗೆ ಅಂದರೆ ಯೋಗ್ಯರಿಗೆ ಭಕ್ತಿ ಪರಿಪಕ್ವಾವಸ್ಥೆ ಬಂದು ಭಗವಿ

ವಂತನ ಸಾಕ್ಷಾತ್ಕಾರವಾಗಿ ದೇವರ ಪ್ರಸಾದ ಆಗುವ ತನಕ, ಅಯೋಗ್ಯರಿಗೆ ದೈವದ ಪರಾಕಾಷ್ಟತೆಗೆ ಮುಟ್ಟುವ ತನಕ ಎಲ್ಲರೂ ಸಂಸಾರದಲ್ಲಿಯೇ ಸಾಧನವನ್ನು ಸಾಧಿಸುತ್ತಿರುತ್ತಾರೆ.

॥ ೧೯ ॥

ಪೂರ್ತಿಶ್ಚನೈವನಿಯಮಾದ್ಭವಿದ್ಭತಾಹಿಯಸ್ಮಾತ್
ತಸ್ಮಾತ್ಸಮಾಪ್ತಿವಮಿಯಾಂತಿನಜೀವಸಂಘಾಃ।
ಆನಂತ್ಯಮೇವಗಣಶೋಸ್ತಿಯತೋಹಿತೇಷಾಮಿತ್ಥಂ
ತತಃಸಕಲಕಾಲಗತಾಪ್ರವೃತ್ತಿಃ॥

ಅನ್ವಯಾರ್ಥ—ಯಸ್ಮಾತ್–ಯಾವ ಕಾರಣದಿಂದ, ನಿಯಮಾತ್-ಈಶ್ವರನ ನಿಯಮವನ್ನನುಸರಿಸಿ, ಪೂರ್ತಿಃ-ಸ್ವಯೋಗ್ಯ ಸಾಧನಾನುಷ್ಠಾನಗಳ ಪೂರ್ಣತೆಯು, ನಿಯಮಾತ್-ಪ್ರತಿಯೊಬ್ಬ ಜೀವನ ಸಾಧನ ಪೂರ್ತಿಯು ಏಕಕಾಲದಲ್ಲಿಯೇ ಆಗಬೇಕೆನ್ನುವ ನಿಯಮಕ್ಕನುಗುಣವಾಗಿ, ನೈವಭವಿತಾ-ಖಂಡಿತವಾಗಿಯೂ ಆಗುವುದಿಲ್ಲವೋ, ತಸ್ಮಾತ್–ಆ ಕಾರಣದಿಂದ ಜೀವಸಂಘಾಃ-ಚೇತನ ಸಮೂಹವು, ಸಮಾಪ್ತಿಮಪಿ-ಕೊನೆಯನ್ನು, ನಯಾಂತಿ-ಹೊಂದುವುದಿಲ್ಲ, ಯತಃ-ಯಾವ ಕಾರಣದಿಂದ, ಗಣಶಃ-ಬ್ರಹ್ಮ, ರುದ್ರ, ಇಂದ್ರಾದಿ ಪಟ್ಟಕ್ಕೆ ಬರತಕ್ಕ ಜೀವರ ಗಣದಿಂದ, ಆನಂತ್ಯಮೇವ–ಅನಂತತ್ವವು, ಅಸ್ತಿ-ಇದೆಯೋ ತತಃ-ಆಕಾರಣದಿಂದ, ಇತ್ಥಂ-ಇದೇ ಪ್ರಕಾರದಿಂದ, ತೇಷಾಂ–ಜೀವರ, ಪ್ರವೃತ್ತಿಃ-ವ್ಯಾಪಾರವು, ಸಕಲಕಾಲಗತಾ-ಸರ್ವ ಕಾಲದಲ್ಲೂ ಇರುತ್ತದೆ. ಸ್ವ ಯೋಗ್ಯವಾದ ಸಾಧನ ಪೂರ್ಣವಾಗುವವರೆಗೆ ತಾನೆ ಜೀವರು ಸಂಸಾರದಲ್ಲಿರಬೇಕು. ಈ ಕಲ್ಪದಲ್ಲಿ ಎಲ್ಲಾ ಜೀವರ ಸಾಧನೆ ಪೂರ್ಣವಾದರೆ, ಮುಂದೆ ಸೃಷ್ಟ್ಯಾದಿಗಳಿಗಾಗಿ ಯಾವ ಜೀವರೂ ಉಳಿಯದಿಲ್ಲ. ಎಲ್ಲರೂ ಮುಕ್ತರೂ ಅಥವಾ ತಪೋಗರು ಆಗಿರುತ್ತಾರೆ. ಆದುದರಿಂದ ಪ್ರತಿಕಲ್ಪದಲ್ಲೂ ಸೃಷ್ಟಿ ನಿಯಮಾನಗಳು ಇವೆಯೆನ್ನುವ ವೈದಿಕ ವಾಕ್ಯಗಳು ಕಪ್ರಮಾಣವಲ್ಲ, ಹೇಗೆಂದರೆ ಚತುರ್ಮುಖ ಬ್ರಹ್ಮನ ಪಟ್ಟಕ್ಕೆ ಬರತಕ್ಕವರು ವಾಯು ದೇವರು. ವಾಯುದೇವರ ಪಟ್ಟಕ್ಕೆ ಬರತಕ್ಕವರು ಇತರ ಮುಜುಗಳು ಅವರೆಲ್ಲರೂ ಬ್ರಹ್ಮ.

ಪಟ್ಟಕ್ಕೆ ಬಂದರೆ ಮುಂದೆ ಬ್ರಹ್ಮ ಪಟ್ಟಕ್ಕೆ ಯಾರು ಬರಬೇಕು, ಇದೇ ಸಮಸ್ಯೆ ರುದ್ರ ಇಂದ್ರಾದಿ ಪಟ್ಟದ ಬಗ್ಗೆ ಬರುತ್ತೆ. ಈ ಪ್ರಶ್ನೆಗೂ ಇದೇ ಪದ್ಯ ಉತ್ತರ ಕೊಡುತ್ತೆ.

ತಾತ್ಪರ್ಯ—ಅನಂತಾನಂತ ಜೀವರಾಶಿಗಳಿದ್ದಾರೆ. ಈ ಕಲ್ಪದಲ್ಲಿ ಇಷ್ಟೇ ಜೀವರು ಸೃಷ್ಟರಾಗಬೇಕು. ಹೀಗೆ ಯಾವ ಕಲ್ಪದಲ್ಲಿ ಯಾವ ಜೀವರು ಸೃಷ್ಟರಾಗಿ ಮುಕ್ತರಾಗಬೇಕೆಂಬ ವ್ಯವಸ್ಥೆ ಪರಮಾತ್ಮ ಮಾಡಿದ್ದಾನೆ. ಆತನ ಈ ನಿಯಮಾದಂತೆ ಏಕ ಕಾಲದಲ್ಲೇ ಎಲ್ಲ ಜೀವರ ಸಾಧನೆಗಳು ಪೂರ್ತಿ ಆಗುವುದಿಲ್ಲ. ಆದರಿಂದ ಸೃಷ್ಟಿಯೋಗ್ಯರಾದ ಜೀವರ ಸಂಖ್ಯೆ ಎಂದೆಂದೂ ಮುಗಿಯುವುದಿಲ್ಲ. ಬ್ರಹ್ಮ ರುದ್ರಾದಿಗಳ ಗಣವೂ ಅನಂತವಾಗಿದೆ. ಹಾಗೆಯೇ ಗಣದಲ್ಲಿ ಸೇರಿರ ತಕ್ಕ ಜೀವರು ಅನಂತರಾಗಿದ್ದಾರೆ.

॥ ೨೦ ॥

ಏತೈಃಸುರಾದಿಭಿರತಿಪ್ರತಿಭಾದಿಯುಕ್ತೈ
ರ್ಯುಕ್ತೈಸ್ಸಹೈವಸತತಂಪ್ರವಿಚಿಂತಯದ್ಭಿಃ।
ಪೂರ್ತೇರಚಿಂತ್ಯಮಹಿಮಃಪರಮಃಪರಾತ್ಮಾ
ನಾರಾಯಣೋಸ್ಯಗುಣವಿಸ್ಮೃತಿರನ್ಯಗಾಕ್ವ॥

ಅನ್ವಯಾರ್ಥ— ಪರಮಃ-ಸರ್ವೋತ್ತಮನಾದ, ಪರಮಾತ್ಮಾ-ಸರ್ವಸ್ವಾಮಿಯಾದ, ನಾರಾಯಣಃ-ಶ್ರೀಮನ್ನಾರಾಯಣನು, ಪೂರ್ತೇಃ-ಸಮಸ್ತ ದೇಶಕಾಲಗಳಲ್ಲಿ ಅನಂತಾನಂತ ಕಲ್ಯಾಣಗುಣ ಪರಿಪೂರ್ಣನಾದ್ದರಿಂದಲೇ, ಅತಿಪ್ರತಿಭಾದಿಯುಕ್ತೈಃ-ಅತ್ಯಧಿಕವಾದ ಮೇಧಾಶಕ್ತಿಯೇ ಮೊದಲಾದ ಗುಣಗಳಿಂದ ಕೂಡಿದಂತಹ, ಸಹೈವ ಯುಕ್ತೈಃ-ಒಂದೇ ಸ್ಥಾನದಲ್ಲಿ ವಿಲಿತರಾದಂತಹ, ಸತತಂ-ಯಾವಾಗಲೂ, ಪ್ರವಿಚಿಂತಯದ್ಭಿಃ-ಶ್ರೀ ಹರಿಯ ವಿಷಯದಲ್ಲಿ ವಿಚಾರವನ್ನು ಮಾಡುತ್ತಲೇ ಇರುವಂತಹ ಏತೈಃ-ಈ ಪ್ರಸಿದ್ಧರಾದ, ಸುರಾದಿಭಿಃ-ದೇವತೆಗಳೇ ಮೊದಲಾಗಿ ಉಳ್ಳವರಿಂದಲೂ ಅಚಿಂತ್ಯಮಹಿಮಾ-ಸಂಪೂರ್ಣ ತಿಳಿಯಲು ಅಶಕ್ಯವಾದ ಮಹಿಮಾ ಉಳ್ಳವನು, ಅಸ್ಯ-ಅಂತಹ ಈ ಶ್ರೀಹರಿಯ, ಗುಣವಿಸ್ಮೃತಿಃ-ಗುಣಪರಿಪೂರ್ಣತ್ವವು, ಅನ್ಯಗಾ-ಇನ್ನೊಬ್ಬರಲ್ಲಿ ಇರತಕ್ಕದ್ದು ಎಂಬ ವಿಷಯವು, ಕ್ವ-ಎಲ್ಲಿ?

ತಾತ್ಪರ್ಯ— ಪ್ರತಿಭಾದಿ ಗುಣ ಗಣ ಮಂಡಿತರದ ಅನಂತಾನಂತ ದೇವತೆಗಳು ಏಕತ್ರ ಮಿಲಿತರಾಗಿ ಅನಂತಾನಂತ ಕಾಲದಲ್ಲಿ ವಿಚಾರಮಾಡುತ್ತಿದ್ದರೂ ನಾರಾಯಣನ ಗುಣಗಳನ್ನು ಎಣಿಸಿ ಮುಗಿಸಲು ಅಸಮರ್ಥರಾಗಿದ್ದಾರೆ. ಗುಣಪೂರ್ಣನಾದ ನಾರಾಯಣನಿಗೆ ಈ ಅಸಾಧಾರಣೆ ಎಂದು ಈ ಗುಣಪೂರ್ಣತ್ವ ಇನ್ನೊಬ್ಬರಿಗಿದ್ದೀತೆ?

॥ ೨೧॥

ಸಾಮ್ಯಂ ನ ಚಾಸ್ಯಪರಮೇಣ ಚ ಕೇನಚಾಪ್ಯಂ
ಮುಕ್ತೇನಚ ಕ್ವಚಿದತಸ್ತ್ವಭಿಧಾಕುತೋಸ್ಯ।
ಪ್ರಾಪ್ಸ್ಯೇತ ಚೇತನಗಣೈಃ ಸತತಾಸ್ವತಂತ್ರೈಃ
ನಿತ್ಯಸ್ವತಂತ್ರವಪುಷಃ ಪರಮಾತ್ ಪರಸ್ಯ ॥

ಅರ್ಥ ಅಸ್ಯ-ಈ ಪರಮಾತ್ಮನ, ಸಾಮ್ಯಂ-ಸಾದೃಶ್ಯವು, ಪರಮೇಣ-ಶ್ರೇಷ್ಠನಾದ ಚತುರ್ಮುಖಿನಿಂದ, ಮುಕ್ತೇನ ಚ-ಮುಕ್ತರಿಂದಲೂ, ಕೇನ ಚ-ಯಾರಿಂದಲೂ ಕ್ವಚಿತ್ ಚ-ಎಂದೆಂದೂ, ನ ಆಪ್ಯಂ-ಹೊಂದಲಸಾಧ್ಯ, ಅತಃ-ಇದುದರಿಂದ, ನಿತ್ಯಸ್ವತಂತ್ರವಪುಷಃ-ಯಾವಾಗಲೂ ಇನ್ನೊಬ್ಬರ ಅಧೀನವಾಗದಿರತಕ್ಕ ಶರೀರವುಳ್ಳ, ಪರಸ್ಮಾತ್ ಪರಸ್ಯ-ಶ್ರೇಷ್ಠರಾದ ರಮಾಬ್ರಹ್ಮಾದಿಗಳಿಗಿಂತಲೂ ಶ್ರೇಷ್ಠನಾದ, ಅಸ್ಯ-ಈ ಪರಮಾತ್ಮನ, ಅಭಿಧಾ-ಅಭೇದವು, ಸತತಾಸ್ವತಂತ್ರೈಃ-ನಿರಂತರ ಪರಾಧೀನರಾದ, ಚೇತನಗಣೈಃ-ಜೀವಸಂಘದಿಂದ, ಕುತಃ-ಹೇಗೆ ಪ್ರಾಪ್ಸ್ಯೇತ-ಹೊಂದಲ್ಪಟ್ಟೀತು?

ತಾತ್ಪರ್ಯ ನಾರಾಯಣನಿಗೆ ಸರಿಸಮಾನರಾದವರು ಯಾರೂ ಇಲ್ಲ. ರಮಾಬ್ರಹ್ಮಾದಿ ದೇವತೆಗಳೂ ಮುಕ್ತರಾದ ಜೀವರೂ, ಇನ್ನಿತರ ಯಾವುದೇ ಜೀವರೂ ಕೂಡಾ ಭಗವಂತನ ಸಾದೃಶ್ಯವನ್ನೇ ಹೊಂದಲಾರರು. ಭಗವಂತನು ನಿತ್ಯಸ್ವತಂತ್ರ, ಗುಣಪರಿಪೂರ್ಣ, ಸರ್ವೋತ್ತಮ ಜೀವರು ಸದಾ ಅಸ್ವತಂತ್ರರು, ದೋಷಪೂರ್ಣರು ಹೀಗಿರುವಾಗ ಭಗವಂತನಿಗೂ ಜೀವರಿಗೂ ಅಭೇದವನ್ನು ಹೇಗೆ ತಾನೆ ಅಂಗೀಕರಿಸುವುದು?

॥ ೨೨ ॥

ಅಥೋಽಯಮೇವ ನಿಖಿಲೈರಪಿವೇದವಾಕ್ಯೈ

ರಾಮಾಯಣೈಃಸಹಿತ ಭಾರತ ಪಂಚರಾತ್ರೈಃ ।
ಅನ್ಯೈಶ್ಚ ಶಾಸ್ತ್ರವಚನೈಃ ಸಹ ತತ್ತ್ವಸೂತ್ರೈಃ
ನಿರ್ಣೀಯತೇಸಹೃದಯಂ ಹರಿಣಾ ಸದೈವ ॥

ಅರ್ಥ ಅಯಂ–ನಿದೋರ್ಷಪೂರ್ಣ ಗುಣವಿಗ್ರಹತ್ವಾದಿ ರೂಪವಾದ, ಅರ್ಥಃ–ಪ್ರಮೇಯವು, ನಿಖಿಲೈರಪಿ–ಸಮಸ್ತವಾದ, ವೇದವಾಕ್ಯೈಃ–ವೇದದ ವಾಕ್ಯಗಳಿಂದ, ಸಹಿತಭಾರತಪಂಚರಾತ್ರೈಃ–ಭಾರತ ಪಂಚರಾತ್ರಗಳಿಂದ ಕೂಡಿದ, ರಾಮಾಯಣೈಃ–ಮೂಲ ರಾಮಾಯಣ ಗ್ರಂಥಗಳಿಂದ ಸಹತತ್ವಸೂತ್ರೈಃ–ಬ್ರಹ್ಮಸೂತ್ರಗಳಿಂದ ಕೂಡಿದ ಅನ್ಯೈಃ–ಇತರ, ಶಾಸ್ತ್ರವಚನೈಃಚ–ಶಾಸ್ತ್ರದ ಮಾತಿನಿಂದಲೂ, ಸದೈವ–ಯಾವಾಗಲೂ, ಹರಿಣಾ–ಪರಮಾತ್ಮನಿಂದ, ಸಹೃದಯಂ–ತಾತ್ಪರ್ಯಪೂರ್ವಕವಾಗಿ, ನಿರ್ಣೀಯತೇ–~~ನಿಶ್ಚಯಿಸಲ್ಪಡುತ್ತದೆ.~~

ತಾತ್ಪರ್ಯ ಪರಮಾತ್ಮನು ಸಕಲಗುಣಪರಿಪೂರ್ಣ ದೋಷದೂರ. ಅವನ ಅವತಾರಗಳಲ್ಲಿ ಪರಸ್ಪರ ಭೇದವಿಲ್ಲ. ಅವನಿಗೆ ಸದೃಶವಾದವನೂ ಯಾರೂ ಇಲ್ಲ. ಇತ್ಯಾದಿ ಹೇಳಿದ ಪ್ರಮೇಯ ಕೇವಲ ಶ್ರೀಮದಾಚಾರ್ಯರ ಸ್ವಕಪೋಲಕಲ್ಪಿತವಲ್ಲ. ವೇದ, ಭಾರತ, ಪಂಚರಾತ್ರ, ಮೂಲರಾಮಾಯಣಗಳಲ್ಲಿ ಪ್ರತಿಪಾದಿತವಾಗಿದೆ. ಶ್ರೀ ವೇದವ್ಯಾಸದೇವರೇ ತಾತ್ಪರ್ಯಪೂರ್ವಕವಾಗಿ ಶ್ರುತಿಸ್ಮೃತಿಗಳಿಗೆ ಅಭಿಪ್ರೇತವಾದ ಪ್ರಮೇಯವನ್ನು ತನ್ನ ಬ್ರಹ್ಮಸೂತ್ರ ಗ್ರಂಥದಲ್ಲಿ ಸಮರ್ಥಿಸಿದ್ದಾರೆ.

॥ ೨೩ ॥

"ನಾರಾಯಣಸ್ಯನಸವಃ" "ಪುರುಷೋತ್ತಮೋಹಂ ಜೀವಾಕ್ಷರೇಹ್ಯತಿಗತೋಸ್ಮಿ" "ತತೋನ್ಯದಾರ್ತವರ್" "ಮುಕ್ತೋಪಸೃಪ್ಯ" "ಇಹನಾಸ್ತಿ ಕುತಶ್ಚ ಕಶ್ಚಿತ್" "ನಾನೇವ" "ಧರ್ಮಪೃಥಗಾತ್ಮದೃಗೇತ್ಯಧೋಹಿ"

ಶ್ರುತಿ ಪುರಾಣ ಇತಿಹಾಸಗಳ ವಾಕ್ಯದಿಂದ ಪೂರ್ವೋಕ್ತ ಪ್ರಮೇಯಗಳ ಸಮರ್ಥನೆ ಮಾಡುತ್ತಿದ್ದಾರೆ.

ಅನ್ವಯಾರ್ಥ— 1) "ನಾರಾಯಣಸ್ಯನಸವಃ" ಎಂಬುದರಿಂದ ನಾಸ್ತಿ ನಾರಾ

ಯಣ ಸವಂ ನ ಭೂತಂ ನಭವಿಷ್ಯತಿ ಏತೇನ ಸತ್ಯವಾರ್ಕ್ಯೇನ ಸರ್ವಾರ್ಥಾನ್ ಸಾಧ ಯಾಮ್ಯಹಂ ಎಂಬ ಮಹಾಭಾಷಿತವಾಕ್ಯವನ್ನು ಸೂಚಿಸಿದ್ದಾರೆ. ಶ್ರೀಮನ್ನಾರಾಯ ಣನಿಗೆ ಸದೃಶನಾದವನು ಎಂದೆಂದೂ ಇಲ್ಲ. ಇಂದಿನ ತನಕ ಹುಟ್ಟಿಲ್ಲ. ಈಗಲೂ ಇಲ್ಲ. ಮುಂದೆಯೂ ಬರುವುದಿಲ್ಲ. ಈ ಮಹಾಭಾರತದ ವಾಕ್ಯದ ಸಹಾಯದಿಂದ ಹಿಂದೆ ೧೩ನೆಯ ಶ್ಲೋಕೋಕ್ತವಾದ "ನೈತಾದೃಶಃಕ್ವಚಿದಭೂವನಚೈನಭಾವ್ಯೋನಾ ಸ್ತ್ಯುತ್ತರಃಕಿಮುಪರೋವಾತ್ವಿಷ್ಣೋ" ಎಂಬ ಪ್ರಮೇಯವನ್ನು ಸಾಧಿಸಿದ್ದಾರೆ.

2) "ಪುರುಷೋತಮೊಽಹಂ" ನಾನು ಸರ್ವೋತ್ತಮನಾಗಿದ್ದೇನೆ. ಜೀವಾಕ್ಷರ ಜೀವರನ್ನು ನಾಶರಹಿತಳಾದ ಲಕ್ಷ್ಮಿಯನ್ನು, ಅತಿಗತೋಸ್ಮಿ-ಎಲ್ಲರಿಗಿಂತಿದ್ದೇನೆ. ಈ ಶಬ್ದ ಜಾಲಗಳಿಂದ ಇತಿಹಾಸಾಂತರ್ಗತವಾದ ಭಗವದ್ಗೀತೆಯ ಯಸ್ಮಾತ್ಕ್ಷರಮತೀ ತೋಹಂ, ಅಕ್ಷರಾದಪಿಚೋತ್ತಮಃ ಅತೋಽಸ್ಮಿಲೋಕೇವೇದೇಚ ಪ್ರಥಿತಃ ಪುರು ಷೋತ್ತಮಃ ಯಾವ ಕಾರಣದಿಂದ ನಾನು (ಶ್ರೀಕೃಷ್ಣನು) ನಾಶ ಶೀಲರಾದ ಜೀವ ರನ್ನು ಎಲ್ಲರಿದ್ದೇನೊ? ನಾಶ ರಹಿತಳಾದ ಲಕ್ಷ್ಮೀದೇವಿಗಿಂತಲೂ ಉತ್ತಮನೋ, ಆದ್ದರಿಂದ ಲೋಕದಲ್ಲಿ ನಾನು ಪುರುಷೋತ್ತಮನೆಂದು ಪ್ರಸಿದ್ಧನಾಗಿದ್ದೇನೆ ಎಂಬ ವಾಕ್ಯವನ್ನು ಸೂಚಿಸಿದ್ದಾರೆ. ಈ ಭಗವದ್ಗೀತಾ ಪ್ರಮಾಣವು ಹಿಂದೆ ಹೇಳಿರತಕ್ಕ "ಪರತಮಃ ಪರಮಾತ್" "ಪರಮಾತ. ವರಸ್ಯ" "ಈಶ್ವರತಮಃ" ಎಂಬುದಾಗಿ ಮೂರು ಸ್ಥಾನಗಳಲ್ಲಿ ಹೇಳಿರತಕ್ಕ ಸರ್ವೋತ್ತಮತ್ವವನ್ನು ತಿಳಿಸುತ್ತದೆ

3) 'ತತೋನ್ಯದಾರ್ತಂ' ತತಃ-ವಿಷ್ಣುವಿಗಿಂತ, ಅನ್ಯತ್-ಬೇರೆಯಾದ ಚತುರ್ಮು ಖಾದಿ ಸಮಸ್ತ ಜಗತ್ತು. ಆರ್ತಂ-ಕ್ಲೇಶಯುಕ್ತ, ಇದೊಂದು ಶ್ರುತಿಯ ಏಕದೇಶ. ಇದರಿಂದ ಪೂರ್ವೋಕ್ತವಾದ 'ಸಂಸೃತಿಗಾಃ ಸರ್ವಾಪ್ತಾಃ' ಎಂಬ ಪ್ರಮೇಯದ ಸಮರ್ಥನೆಯಾಗಿದೆ.

4) 'ಮುಕ್ತೋಪಸೃಪ್ಯ' ಎಂಬುದರಿಂದ 'ಓಂ ಮುಕ್ತೋಪಸೃಪ್ಯವ್ಯಪದೇಶಾತ್' ಎಂಬಂತಹ ಬ್ರಹ್ಮಸೂತ್ರವನ್ನು ಸೂಚಿಸಿದ್ದಾರೆ. ಇದು ಪ್ರಥಮಾಧ್ಯಾಯದ ದ್ವಾದಶನೇ ಪಾದದ ೩ನೆಯ ಸೂತ್ರ.

'ಯಸ್ಮಿನ್ ದ್ಯೌಃ ಪ್ರಥಿವೀ ಚಾಂತರಿಕ್ಷಂ ಓತಂ' ಇತ್ಯಾದಿ ಮುಂಡಕೋಪನಿಷತ್ ನಲ್ಲಿ ದ್ಯು, ಭೂ, ಅಂತರಿಕ್ಷಾದಿ ಸರ್ವವಸ್ತುಗಳಿಗೂ ಆಶ್ರಯನಾದವನನ್ನು ಹೇಳಿ ದ್ದಾರೆ. ಆವನುವಿಷ್ಣುವಿಗಿಂತ ಇತರನಲ್ಲ. ಕಾರಣ ದ್ಯು ಭೂ ಆದಿಗಳಿಗೆ ಆಯತನಾದ ವನಿಗೆ 'ಅಮೃತಸ್ಯೈಷ ಸೇತುಃ' ಯೆಂಬ ಶ್ರುತಿಯು ಮುಕ್ತೋಪಸೃಪ್ಯತ್ವ ಅಂದರೆ

ಮುಕ್ತನಿಗೆ ಆಶ್ರಯದಾತಾ ಎಂಬುದಾಗಿ ಉಪದೇಶ ಮಾಡುತ್ತಾ ಇದೆ, ಇದು ನಿಜ ಮುಕ್ತಿ ಪ್ರದಾತಾ ಎಂಬ ಪೂರ್ವೋಕ್ತ ಪ್ರಮೇಯಕ್ಕೆ ಸಾಧಕ.

5) 'ಇಹ ನಾಸ್ತಿ ಕುತಶ್ಚ ಕಶ್ಚಿತ್' ಈ ಶಬ್ದರಾಶಿಗಳಿಂದ 'ನೇಹನಾನಾಸ್ತಿ ಕಿಂಚನ' ಎಂಬ ಶ್ರುತಿಯನ್ನು ಸೂಚಿಸಿದ್ದಾರೆ. ಇಹ–ಈ ಪರಬ್ರಹ್ಮನಲ್ಲಿ, ನಾನಾ–ವಿಭಿನ್ನವಾದ ಕಿಂಚನ-ಗುಣಾಕ್ರಿಯಾದಿಗಳು, ಅವಯವ-ಅವತಾರಗಳು, ನಾಸ್ತಿ-ಇಲ್ಲ, ಪರಮಾತ್ಮನಿಗೂ, ಅತನ ಗುಣಕ್ರಿಯಾ ಅವಯವಗಳಿಗೂ ಪರಸ್ಪರ ಭೇದ ಅಥವಾ ಭೇದಾಬೇದ ಇಲ್ಲವೇ ಇಲ್ಲ. ಆವನ ಅವತಾರಗಳಲ್ಲೂ ಪರಸ್ಪರ ಭೇದವು ಇಲ್ಲ. ಗುಣ ಗುಣಿ ಭಾವ, ಕ್ರಿಯಾ ಕ್ರಿಯಾವದ್ಭಾವ, ಆವಯವ ಅವಯವಿಭಾವಗಳನ್ನು ಭೇದ ಪ್ರತಿನಿಧಿ ವಿಶೇಷದಿಂದ ಕೂಡಿಸಬೇಕು.

6) "ನಾನೇವ" ಯೆಂಬುದರಿಂದ "ಮೃತ್ಯೋ ಸ ಮೃತ್ಯುಮಾಪ್ನೋತಿಯಇಹ ನಾನೇವ ಪಶ್ಯತಿ, "ಯಃ-ಯಾವಾತನು, ಇಹ-ಪರಬ್ರಹ್ಮನಲ್ಲಿ, ನಾನಾ-ಗುಣ ಕ್ರಿಯಾ ಅವಯವಾದಿಗಳಿಂದ ಭೇದವನ್ನು, ಇವ-ಭೇದ ಸಹಿತ ಅಭೇದವನ್ನು, ಪಶ್ಯತಿ–ತಿಳಿಯುತ್ತಾನೋ?, ಸಃ-ಅವನು, ಮೃತ್ಯೋಃ-ಮಾರಕವಾದ ನರಕಕ್ಕಿಂತಲೂ, ಮೃತ್ಯುಂ-ಮಾರಕವಾದ ಲೋಕವನ್ನು ಅಂದರೆ ನಿತ್ಯ ನರಕವನ್ನು, ಆಪ್ನೋತಿ–ಹೊಂದುತ್ತಾನೆ.

7) "ಧರ್ಮಪೃಥಗಾತ್ಮದೃಕ್ಏತಿಅಧೋಹಿ" ಈ ಪದಪುಂಜದಿಂದ "ಯಥೋದಕಂ ದುರ್ಗೇ ವೃಷ್ಟಂ ಪರ್ವತೇಷು ವಿಧಾವತೀ ಏವಂ ಧರ್ಮಾನ್ ಪ್ರಥಕ್ ಪಶ್ಯನ್ ತಾನೇವಾನುವಿಧಾವತಿ" ದುರ್ಗೇ–ದುರ್ಗಮವಾದ ಉನ್ನತ ಪ್ರದೇಶದಲ್ಲಿ, ವೃಷ್ಟಂ-ಸುರಿದ ನೀರು, ಯಥಾ-ಹೇಗೆ, ಪರ್ವತೇಷು-ಪರ್ವತದ ಕೆಳಭಾಗದಲ್ಲಿ, ವಿಧಾವತಿ–ವೇಗವಾಗಿ ಹರಿದು, ಅಧಃ-ಪಾತವನ್ನು ಹೊಂದುವದೋ, ಏವಂ–ಇದೇ ರೀತಿಯಾಗಿ, ಧರ್ಮಾನ್–ಭಗವಂತನ ಗುಣ ಕ್ರಿಯಾದಿ ಧರ್ಮಗಳನ್ನು, ಪೃಥಕ್–ಭಗವಂತನಿಗಿಂತ ಭಿನ್ನವಾಗಿ. ಪಶ್ಯನ್–ತಿಳಿದವನು, ತಾನೇವ ಅನು-ಭಗವಂತನಿಗಿಂತ ಭಿನ್ನವಾಗಿ ಗುಣಾದಿಗಳ ಅನುಭವವನ್ನು ಅನುಸರಿಸಿ, ವಿಧಾವತಿ-ಅಧಃಪಾತವನ್ನು ಅನುಭವಿಸುತ್ತಾನೆ.

ಈ 5, 6, 7 ರಲ್ಲಿ ವಿವರಿಸಿದ ಪ್ರಮಾಣಗಳು. "ಸರ್ವತ್ರೈಚ ಸ್ವಗತ ಭೇದವಿವರ್ಜಿತಾತ್ಮಾ"ಯೆಂಬ ಪ್ರಮೇಯವನ್ನು ಸಮರ್ಥಿಸುತ್ತವೆ.

॥ ೨೪ ॥

"ಆಭಾಸಏವ" "ಪೃಥಗೀಶತಪುಷಜೀವ್ರೋ"
ಮುಕ್ತಸ್ಯನಾಸ್ತಿ ಜಗತೋ ವಿಷಯೇತುಶಕ್ತಿ:।
ಮಾತ್ರಾಪರೋಸಿನತುತೇsಶ್ನವತೇಮಹಿತ್ವಂ
ಷಾಡ್ಗುಣ್ಯವಿಗ್ರಹಸುಪೂರ್ಣಗುಷ್ಕೈಕದೇಹ॥

1) "ಆಭಾಸ ಏವ" ಎಂಬುದರಿಂದ "ಓಂ ಆಭಾಸ ಏವಚ" ಎಂಬ 2ನೇ ಅಧ್ಯಾಯದ ಮೂರನೇ ಪಾಲಿನ 50ನೆಯ ಸೂತ್ರವನ್ನು ಸಂಗ್ರಹಿಸಿದ್ದಾರೆ. ಈ ಸೂತ್ರದ ಪ್ರಮೇಯ ಹೀಗಿದೆ. ಮತ್ಸ್ಯ, ಕೂರ್ಮಾದಿಗಳೂ ಭಗವಂತನ ಅಂಶಗಳು. ಬ್ರಹ್ಮಾದಿ ಜೀವರೂ ಭಗವಂತನ ಅಂಶಗಳು. ಆದರೂ ಮತ್ಸ್ಯಾದಿಗಳು ಸ್ವರೂಪಾಂಶಗಳು. ಜೀವಾದಿಗಳು ಭಿನ್ನಾಂಶಗಳು. ಕಾರಣ 'ಆಭಾಸ ಏವಚ.' ಯಾವ ಕಾರಣದಿಂದ ಜೀವಾದಿಗಳು ಆಭಾಸರೋ ಅಂದರೆ ದೇವರ ಪ್ರತಿಬಿಂಬರೋ ಆದುದರಿಂದ ಜೀವರು ಭಗವಂತನ ಭಿನ್ನಾಂಶರು. ಮತ್ಸ್ಯಾದಿಗಳು ಪರಮಾತ್ಮನ ಪ್ರತಿಬಿಂಬಗಳಲ್ಲ. ಆದುದರಿಂದ ಮತ್ಸ್ಯಾದಿಗಳು ಭಿನ್ನಾಂಶಗಳಲ್ಲ. ಸ್ವರೂಪಾಂಶಗಳು.

ಈ ಪ್ರಮಾಣದಿಂದ "ಆಭಾಸಕೋಸ್ಮ ಪವನಃ" ಇತ್ಯಾದಿ ಬ್ರಹ್ಮಾದಿಗಳಿಗೆ ಪ್ರತಿಬಿಂಬತ್ವ ನಿರ್ಧಿತವಾಗುತ್ತೆ.

2) "ಪೃಥಕ್ ಈಶತ:ಏಷಜೀವಃ" ಪೃಥಕ್ ಉಪದೇಶಾತ್ (2-7-28) ಯೆಂಬ ಬ್ರಹ್ಮ ಸೂತ್ರವನ್ನು ಇಲ್ಲಿ ಸಂಗ್ರಹಿಸಿ ಸೂತ್ರಕ್ಕೆ ಉಪಯುಕ್ತವಾದ ಈಶತಃ, ಏಷಃ ಜೀವಃ ಯೆಂಬ ಪದಗಳನ್ನು ಸೇರಿಸಿದ್ದಾರೆ. ಏಷಃ ಜೀವಃ-ಈ ಜೀವನು, ಈಶತಃ-ಪರಮಾತ್ಮನಿಂದ, ಪೃಥಕ್-ಭಿನ್ನನು. ಉಪದೇಶಾತ್-ಭಿನ್ನೋಕಚಿಂತ್ಯ: ಪರಮೋ ಜೀವ ಸಂಘಾತ್ ಎಂದು ಶ್ರುತಿಯಲ್ಲಿ ಉಪದೇಶ ಮಾಡಿಟ್ಟ ಅಂಶ. ಈ ಸೂತ್ರದ ಆಧಾರದಿಂದ "ಅಭಿದಾ ಕುತೋಸ್ಯ" ಎಂಬ ಪೂರ್ವೋಕ್ತ ಪ್ರಮೇಯ ಸಿದ್ಧವಾಗಿದೆ

3) "ಮುಕ್ತಸ್ಯ ನಾಸ್ತಿ ಜಗತೋ ವಿಷಯೇತು ಶಕ್ತಿಃ" ಸತ್ಯ ಸಂಕಲ್ಪನಾಗಿರತಕ್ಕ ಮುಕ್ತಜೀವನಿಗೂಜಗನ್ನಿರ್ಮಾಣವಿಷಯಕ ಶಕ್ತಿಯಿಲ್ಲ. ಆದುದರಿಂದ ಮುಕ್ತನೂ ಭಗವಂತನ ಪರಮ ಸಾದೃಶ್ಯ ಹೊಂದಲಾರ. ಈ ವಾಕ್ಯದಿಂದ "ಓಂ ಜಗದ್ವ್ಯಾಪಾರ ವರ್ಜಂ" ಎಂಬ ಬ್ರಹ್ಮಸೂತ್ರವನ್ನು ಪ್ರಮಾಣವಾಗಿ ಸಂಗ್ರಹಿಸಿದ್ದಾರೆ.

ಪ್ರಕೃತ 'ಸಾಮ್ಯಂ ನಚಾಸ್ಯ ಪರಮಸ್ಯ ಚ ಕೇನಚಾಪ್ಯಂ ಮುಕ್ತೇನ ಚ' ಎಂಬ

ಪೂರ್ವೋಕ್ತ ಪ್ರಮೇಯದ ಸಾಧಕ.

4) "ಮಾತಾ ಪರೋಸಿ ನತು ತೇಽಶ್ನವತೇ ಮಹಿತ್ವಂ" ಎಂಬ ವಾಕ್ಯದೀಂದ "ಪರೋ ಮಾತ್ರಯಾ ತನ್ವಾ ವೃಧಾನ ನ ತೇ ಮಹಿತ್ವಮನ್ವಶ್ನುವಂತಿ ಎಂಬ" ಋಗ್ವೇದದ ವಿಷ್ಣು ಸೂಕ್ತದ ಒಂದು ಭಾಗವನ್ನು ಇಲ್ಲಿ ಸಂಗ್ರಹಿಸಿದ್ದಾರೆ.

ಮಾತ್ರಯಾ-ದೈಶಿಕ, ಕಾಲಿಕ, ಗುಣತಃ-ಸೀಮೆಯಿಲ್ಲದ್ದು, ಪರೋಸಿ—ವಿಶ್ವದಿ ನಿಂತಿದ್ದಿ ಸರ್ವದೇಶ ಕಾಲದಲ್ಲೂ ವ್ಯಾಪ್ತನಾದವ ಹಾಗೂ ಗುಣ ಪರಿಪೂರ್ಣ ಎಂದರ್ಥ. ತನ್ವಾ-ತನ್ನ ಶರೀರದಿಂದಲೇ. ವೃಧಾನ-ಎಲ್ಲಾ ಕಡೆ ವ್ಯಾಪಿಸಿದವ. ಸೂರ್ಯನಂತೆ ಕೇವಲ ಪ್ರಕಾಶದಿಂದ ವ್ಯಾಪ್ತನಾದವನಲ್ಲ. ಹೇ ಶ್ರೀ ಹರಿಯೇತೇ-ನಿನ್ನ, ಮಹಿತ್ವಂ-ಮಹಿಮೆಯನ್ನು, ನತು ಅಶ್ನುವತೆ-ಯಾರೂ ಹೊಂದಲಾರರು,

"ಕಾಲಾಚ್ಚ ದೇಶಗುಣತೋಽಸ್ಯ ನಚಾದಿರಂತೇ" 'ಅಸ್ಯ ಗುಣವಿಶ್ಚತಿರನ್ಯ ಗಾರ್ಷ್ಣ' 'ಸಾಮ್ಯೇನ ಚಾಸ್ಯ ಪರಮೇನಚಕಶ್ಚನ ಚಾಪ್ಯಂ' ಎಂಬ ಪ್ರಮೇಯ ಈ ಪ್ರಮಾಣದಿಂದ ಸಿದ್ಧವಾಗಿದೆ.

5) 'ಪಾಡ್ಗುಣ್ಯವಿಗ್ರಹ' ಎಂಬುದರಿಂದ 'ಜಿತಂತೇ ಪುಂಡರೀಕಾಕ್ಷ ಪೂರ್ಣ ಷಾಡ್ಗುಣ್ಯ ವಿಗ್ರಹ' ಯೆಂಬ ಪಂಚತಂತ್ರವನ್ನು ಸಂಗ್ರಹಿಸಿದ್ದಾರೆ, ಐಶ್ವರ್ಯಾದಿ ಆರೂ ಗುಣಗಳೇ ಶರೀರವಾಗಿವುಳ್ಳವನೆಂದರ್ಥ.

6) 'ಸುಪೂರ್ಣಗುಣೈಕದೇಹ' 'ಸಮಸ್ತನಂತಗುಣೈಕನಂತೇ ಗುಣತೋ ಅನಂತ ವಿಗ್ರಹೇ ಎಂಬ ಪ್ರಮೇಯಕ್ಕೆ ಸಾಧಕಗಳು.

॥ ೨೫ ॥

'ಮಾಹಾತ್ಮ್ಯದೇಹ' 'ಸ್ಮೃತಿಮುಕ್ತಿಗತೇ "ಶಿವಶ್ಚ
ಬ್ರಹ್ಮಾಚತದ್ಗುಣಗತೌನಕಥಂನೇಶೌ ।
ನಶ್ರೀಃಕುತಸ್ತದಪರೇ"s ಸ್ಯಸುಖಸ್ಯಮಾತ್ರಾ
ಮಶ್ನಂತಿಮುಕ್ತಸುಗುಣಾಶ್ಚಶತಾವರೇಣ" ॥

1) ಮಾಹಾತ್ಮ್ಯಂ ದೇಹೇ ಯಸ್ಯ ಸಃ ಭಗವಂತನ ದೇಹ ಅತಿ ವಿಚಿತ್ರವಾಗಿದೆ. ಮಾನವ ಬುದ್ಧಿಗೆ ಸಿಗದ ಮಹಾಮಹಿಮೆಯುಳ್ಳದ್ದು. ಸಹಸ್ರಶಃಶಿರಕರಾದ್ಯವಯ ವವುಳ್ಳವನು. ವಿಶ್ವತ-ಚಕ್ಷುಃ, ಇಂದ್ರಾಗ್ನಿ ಚಂದ್ರ ಸೂರ್ಯ ಪ್ರಾಣ ಭೂಮಿ ಅಂತೆ ರಿಕ್ಷಾದಿ ಸರ್ವಸೃಷ್ಟ. ತಾಯಿಯ ಯೋನಿಯಿಂದ ಹೊರ ಹೊಮ್ಮುವಾಗಲೇ ಶ್ರೀ-

ವತ್ಸ ಕೌಸ್ತುಭ ಶಂಖ ಗದಾದಿ ಅತಿವಾನುಷ ದಿವ್ಯಲಕ್ಷಣೋಪೇತನೂ ಶೈಶವದಲ್ಲೇ ತನ್ನ ಅಣೂದರದಲ್ಲಿ ಸಮಸ್ತ ಬ್ರಹ್ಮಾಂಡನನ್ನು ಯಶೋದೆಗೆ ಪ್ರದರ್ಶಿಸಿದನು. ಗೋಕುಲದ ಸಕಲ ಗೋಗಳನ್ನು ಕಟ್ಟಲು ಸಾಧ್ಯವಾದ ಹಗ್ಗದಿಂದಲೂ ಶ್ರೀ ಕೃಷ್ಣನ ದೇಹ ಬಂಧಿಸಲು ಅಸಾಧ್ಯವೆನಿಸಿತು. ಬಾಲಕನು ತನ್ನಕಿರುಬೆರಳಿನಿಂದಲೂ ಗೋವರ್ಧನ ಗಿರಿಯನ್ನು ಎತ್ತಿ ಗೋಗಳನ್ನು ನಿರಂತರ ಸಾಕಿ ಸಲಹಿದ. ಬ್ರಹ್ಮೇಂದ್ರಾದಿ ಸಕಲ ದೇವತೆಗಳ ಆಧಾರ. ಇತ್ಯಾದಿ ಮಹಿಮೆ ಶ್ರುತಿ ಸ್ಮೃತಿಸಿದ್ಧ. ಭಗವಂತನ ದೇಹ ಜಡವಲ್ಲ. ಇವನಿಗೆ ಸರಿಸಮಾನಾರೂ ಇಲ್ಲ. ಇವನ ಅಭೇದ ಅಲ್ಪಶಕ್ತನಾದ ಜೀವನಿಗೆ ಹೇಗೆ ಸಂಭವಿಸಿತು.?

2) 'ಸ್ಮೃತಿ ಮುಕ್ತಿ ಗತೇ' ಸಂಸಾರಬಂಧವನ್ನು. ಬಂಧದಿಂದ ಮುಕ್ತಿಯನ್ನು ಹೊಂದಿಸುವವ ಸರ್ವಶ್ರೇಷ್ಠನಿಯೇ. 'ಬಂಧಕೋ ಭವ ಪಾಶೇನ ಭವ ಪಾಶಾಚ್ಚ ಮೋಚಕ' 'ಉತಾಮೃತತ್ವಸ್ಯ ಈಶಾನಃ" ಎಂಬ ಶ್ರುತಿಸ್ಮೃತಿಯನ್ನಿಟ್ಟು ಕೊಂಡಿದ್ದಾರೆ. "ಮುಕ್ತೇನ ಚಾಸ್ಯ ಸಾಮ್ಯಂ ನಚಾಸ್ಯಂ" ಎಂಬ ವಿಷಯದಲ್ಲಿ ಇದು ಪ್ರಮಾಣವಾಗುತ್ತೆ.

3) "ಶಿವಶ್ಚ ಬ್ರಹ್ಮಚ ತದ್ಗುಣಗತಾ ನಕಥಂಚನೇಶಾ" ಶಿವಶ್ಚ – ಶಿವನಾಗಲೀ. ಬ್ರಹ್ಮಚ-ಚತುರ್ಮುಖನಾಗಲಿ, ತದ್ಗುಣಗತೌ–ಭಗವಂತನಗುಣಗಳನ್ನು, ಸಂಪೂರ್ಣವಾಗಿ ತಿಳಿಯಲು, ಕಥಂಚನ–ಯಾವ ಪ್ರಕಾರದಿಂದಲೂ, ನ ಈಶೌ–ಸಮರ್ಥರಲ್ಲ. ಇದರಿಂದ "ನಾಂತಂ ಗುಣಾನಾಂ ಅಗುಣಸ್ಯ ಜಗ್ಮುರ್ಯೋಗೇಶ್ವರಾಃಯೇ ಭವಪಾದ್ಮಮುಖ್ಯಾಃ ॥ ಎಂಬಭಾಗವತ ವಾಕ್ಯ ಇಟ್ಟುಕೊಂಡಿದ್ದಾರೆ. ಬ್ರಹ್ಮರುದ್ರಾದಿ ದೇವಾದಿದೇವರೂ ಕೂಡಾ, ಸತ್ವರಜಸ್ತಮಸ್ಸೆಂಬ ಜಡಗುಣಗಳಿಲ್ಲದ್ದರಿಂದ, ನಿರ್ಗುಣನೆಂಬ ,ಶ್ರುತಿಪ್ರತಿಪಾದ್ಯನಾದ ಭಗವಂತನಾದ ಶ್ರೀವಾಸುದೇವನ ಗುಣಗಳ ಕೊನೆಯನ್ನು ಕಾಣಲಿಲ್ಲ. (ಭವ–ರುದ್ರ, ಪಾದ್ಮ–ಬ್ರಹ್ಮ, ಅಗುಣ–ಜಡವಾದ ಗುಣ ಇಲ್ಲದಿದ್ದವ)

4) "ನ ಶ್ರೀಃ ಕುತಃ ತದಪರೆ" – ಲಕ್ಷ್ಮೀದೇವಿಯೂ ದೇವರ ಪೂರ್ಣ ಗುಣಗಳನ್ನು ತಿಳಿದಿಲ್ಲ. ಇತರರು ತಿಳಿದಿಲ್ಲಯೆಂದು ಏನು ಹೇಳತಕ್ಕದ್ದು. ಇದರಿಂದ ಶಂಭ್ರಣೇ ಸೂಕ್ತ ಸಂಗ್ರಹಿಸಿದ್ದಾರೆ.

ಅಹಂ ರುದ್ರಾಯ ಧನುರಾತನೋಮಿ ... ...

ಮಮ ಯೋನಿ ರಪ್ಸು ಅಂತಃ ಸಮುದ್ರೇ ॥ ತತೋ ವಿತಿಷ್ಠೇ ಭುವನಾನಿವಿಶ್ವೋ
ತಾವಮೂಂದ್ಯಾಂ ವರ್ಷ್ಮಣೋಪಸ್ಪೃಶಾಮಿ ॥ ಪರೋ ದಿವಾ ಪರ ಏನಾ
ಪೃಥಿವ್ಯೈತಾವತೀ ಮಹಿನಾಸಂಬಭೂವ ॥

ಅಹಂ-ನಾನು, ಯಂ- ಯಾರನ್ನು, ಉಗ್ರಂ-ರುದ್ರನನ್ನು, ಕಾವಮಯೇ-ಮಾಡಬಯಸುತ್ತೇನೋ?, ತಂ ತು-ಅವರನ್ನೆಲ್ಲಾ, ಕೃಣೋಮಿ-ರುದ್ರನನ್ನು ಮಾಡುತ್ತೇನೆ. ಯಂ- ಯಾರನ್ನು, ಬ್ರಹ್ಮಾಣಂ- ಚತುರ್ಮುಖನನ್ನು, ಯಂ ಋಷಿಂ-ಯಾರನ್ನು ಋಷಿಯನ್ನಾಗಿ, ಯಂ-ಯಾರನ್ನು, ಸುಮೇಧಾಂ-ಒಳ್ಳೆಯ ಜ್ಞಾನಿಯನ್ನಾಗಿ ಕಾವಮಯೇ-ಮಾಡಬಯಸುತ್ತೇನೋ? ತಂಬ್ರಹ್ಮಾಣಂ-ಅವರನ್ನು ಬ್ರಾಹ್ಮಣನನ್ನಾಗಿ, ತಂ ಋಷಿಂ- ಅವನನ್ನು ಋಷಿಯನ್ನಾಗಿ, ತಂ ಸುಮೇಧಾಂ-ಅವನನ್ನು ಜ್ಞಾನಿಯನ್ನಾಗಿ, ಕೃಣೋಮಿ-ಮಾಡುತ್ತೇನೆ. ಅಹಂ-ನಾನು, ಶರವೇ-ಸಂಹಾರಕನಾದ, ಬ್ರಹ್ಮದ್ವಿಷೇ-ಚತುರ್ಮುಖನ ಪಂಚಮ ಶಿರಸ್ಸನ್ನು ನಾಶಮಾಡಿರತಕ್ಕ, ರುದ್ರಾಯ-ಶಿವನಿಗೆ ಹಂತವಾವು-ಕೊಲ್ಲುವುದಕ್ಕೋಸ್ಕರವೇ, ಧನುಃ-ಧನುಸ್ಸನ್ನು ಸಂತನೋಮಿ- ಸಿದ್ಧಪಡಿಸಿದ್ದೇನೆ. ಅಹಂ- ನಾನು, ಜನಾಯ- ಭಕ್ತ ಜನರಿಗಾಗಿ, ಸಮದಂ-ಆನಂದದಿಂದ ಕೂಡಿದ ಐಶ್ವರ್ಯವನ್ನು, ಕೃಣೋಮಿ-ಮಾಡುತ್ತೇನೆ.
ಅಹಂ-ನಾನು, ದ್ಯಾವಾಪೃಥಿವೀ-ದ್ಯ ಭೂ ಸಮಸ್ತ ಲೋಕವನ್ನು, ಆವಿವೇಶ-ಧಾರಣೆಗಾಗಿ ಪ್ರವೇಶಿಸಿದ್ದೇನೆ. ಅಹಂ-ನಾನು, ಅಸ್ಯ-ಜಗತ್ತಿನ, ಪಿತರಂ-ಸೃಷ್ಟಿ ಕರ್ತನಾದ ಚತುರ್ಮುಖನನ್ನು, ಮೂರ್ಧನ್-ಎಲ್ಲರಿಗಿಂತಲೂ ಉತ್ಕೃಷ್ಟನನ್ನಾಗಿ, ಸೂವೇ-ಹಡೆದಿದ್ದೇನೆ. ಮಮ-ಇಂತಹ ಅಪಾರ ಮಹಿಮೆಯುಳ್ಳ ನನಗೂ, ಯೋನಿಃ-ಕಾರಣನಾದ ಭಗವಂತನು, ಸಮುದ್ರೇ-ಸಾಗರದಲ್ಲಿ. ಅಪ್ಸು ಅಂತಃ-ನೀರಿನ ಮಧ್ಯದಲ್ಲಿ ಇದ್ದಾನೆ. ತತಃ-ಆ ಪರಮಾತ್ಮನಿಂದಲೇ ವಿಶ್ವಾಭುವನಾನಿ-ಸಮಸ್ತ ಪ್ರಪಂಚವೂ, ವಿತಿಷ್ಠೇ-ಸ್ಥಿರವಾಗಿ ನಿಂತಿದೆ. ನಾನಾದಶೂ ಅಮೂಂ-ದ್ಯಾಂ-ಈ ದ್ಯುಲೋಕವನ್ನು, ಉಪಸ್ಪೃಶಾಮಿ-ಕೇವಲ ಸ್ಪರ್ಶ ಮಾತ್ರ ಮಾಡಿದ್ದೇನೆ. ಸ್ವತಂತ್ರವಾಗಿ ಜಗತ್ತನ್ನು ಧರಿಸಲು ಅಸಮರ್ಥಳೆಂದರ್ಥ. ಅಹಮೇವ-ನಾನಾದರೂ, ವಾತಇವ-ಗಾಳಿಯಂತೆ ನಿರ್ಲೇಪವಳಾಗಿ ವಿಶ್ವಾ ಭುವನಾನಿ-ಸಮಸ್ತ ಜಗತ್ತನ್ನೂ, ಆರಂಭ-ಮಾಡತಕ್ಕವಳಾಗಿ. ಪ್ರವಾಮಿ-ಬೀಸುತ್ತೇನೆ, ಸಃ-ನನಗೆ ಕಾರಣನಾದ ಪರಮಾತ್ಮನು, ದಿವಾ-ದ್ಯು ಲೋಕಾಭಿಮಾನಿಯಾದ ನನ್ನ (ಲಕ್ಷ್ಮಿಯ) ರೂಪಕ್ಕಿಂತಲೂ, ಏನಾ-ಈ, ಪೃಥಿವೀ- ಲೋಕಾಭಿಮಾನಿಯಾದ

ಲಕ್ಷ್ಮಿಯ ರೂಪಕ್ಕಿಂತಲೂ, ಪರಃ-ಶ್ರೇಷ್ಠನು, ಅಹಂ-ನಾನು, ಮಹಿಮಾ-ಮಹಿಮೆಯಿಂದ, ಏತಾವತೀ-ಇಷ್ಟೆ ಪರಿವಾಣವುಳ್ಳವಳು ಸಂಬಭೂವ-ಆಗಿದ್ದೇನೆ. ಪರ ಮಾತ್ಮನು ಅಪರಿಮಿತ. ಇದರಿಂದ ಲಕ್ಷ್ಮಿಯು ಭಗವಂತನ ಗುಣಗಳನ್ನು ತಿಳಿಯಲು ಅಸಮರ್ಥಳೆಂದಾಯಿತು. ಈ ಶ್ರುತಿಯು "ಅಸ್ಯ ಗುಣವಿಸ್ತೃತಿಃ ಅನ್ಯಥಾ ಕ್ಷ: ಎಂಬ ಪೂರ್ವೋಕ್ತ ಪ್ರಮೇಯ ಸಾಧಕವು. "ಅಸ್ಯ ಸುಖಿನ್ಯ ಮಾತ್ರಾಂ ಅಶ್ನಂ ಮುಕ್ತ ಸುಗಣಾಶ್ಚ ಶತಾವರೇಣ" ಮುಕ್ತಸುಗಣಾ:-ಮುಕ್ತ ಜೀವರೆ, ಒಳ್ಳೆಯ ಸಂಘವು, ಅಸ್ಯ-ಪರಮಾತ್ಮನ, ಸುಖಿನ್ಯ-ಆನಂದದ, ಮಾತ್ರಾಂ-ಅಣು ಅಂಶವನ್ನು, ಶತಾವರೇಣ-ಉತ್ತಮೋತ್ತಮ ಮುಕ್ತರಿಗಿಂತ ಅಧಮಾಧಮ ಮುಕ್ತರು ನೂರು ಪಟ್ಟು ಕಡಿಮೆ ಪ್ರಮಾಣದಿಂದ ಸುಖಭೋಗವುಳ್ಳವರು. ಈ ವಾಕ್ಯದಿಂದ "ಏತಸ್ಯೈವ ಆನಂದಸ್ಯ ಅನ್ಯಾನಿ ಭೂತಾನಿಮಾತ್ರಾಮುಪಜೀವಂತಿ"ಯೆಂಬ ಶ್ರುತಿಯನ್ನು, 'ಸೈಷಾನಂದಸ್ಯ ಮೀಮಾಂಸಾ' ಎಂಬ ಆನಂದ ತಾರತಮ್ಯ ಶ್ರುತಿಯನ್ನು ಸಂಗ್ರಹಿಸಿದ್ದಾರೆ.

ಈ ಪ್ರಮಾಣವು ಮುಕ್ತರಿಂದ "ಭಗವತ್ ಸಾದೃಶ್ಯ, ಅಸಾಧ್ಯ, ಅಭೇದ, ಸುತರಾಂ ಅಸಿದ್ಧ"ಯೆಂಬ ಪೂರ್ವೋಕ್ತ ಪ್ರಮೇಯ ಸಾಧಕ.

ಆಭಾಸಕಾಭಾಸಪರಾವಬಾಸ

ರೂಪಾಣ್ಯಜಸ್ರಾಣಿ ಚಚೇತನಾನಾಮ್ ।

ವಿಷ್ಣೋಃ ಸದೈವಾತಿವಶಾತ್ ಕದಾಪಿ

ಗಚ್ಛಂತಿಕೇಶಾದಿಗಣಾ ನ ಮುಕ್ತೌ ॥೭೬॥

ಅರ್ಥ ಚೇತನಾನಾಂ-ಬ್ರಹ್ಮಾದಿಗಳಜೀವರ,ಆಭಾಸಕ...ರೂಪಾಣಿಆಭಾಸಕ-ಪರಮಾತ್ಮನಪ್ರತಿಬಿಂಬರಾದವಾಯುದೇವರ,(ಆಭಾಸ)-ಪ್ರತಿಬಿಂಬರಾದರುದ್ರಾದಿಗಳಿಗಿಂತ, (ಪರ)ಅಧಮನಾದ ಇಂದ್ರನ, (ಅವಭಾಸ) ಪ್ರತಿಬಿಂಬರಾದ ಅಹಂಕರಿಕ ಪ್ರಾಣಾದಿಗಳ, (ರೂಪಾಣಿ) ಸ್ವರೂಪಗಳು, ಅಜಸ್ರಾಣಿ-ನಿತ್ಯಗಳು, ಕೇಶಾದಿಗಣಾ- (ಕ) ಬ್ರಹ್ಮದೇವರು, ವಾಯುದೇವರು, (ಈಶ)-ರುದ್ರದೇವರು, ಇವರೇ ಮೊದಲಾಗಿ ಉಳ್ಳ ಜೀವರ ಸಮುದಾಯವು, ಮುಕ್ತೌ -ಮೋಕ್ಷದಲ್ಲಿ, ಕದಾಪಿ-ಸಂಸಾರದಲ್ಲೂ, ಸದೈವ-ಯಾವಾಗಲೂ ವಿಷ್ಣೋಃ-ಪರಮಾತ್ಮನ, ವಶಾತ್-ಅತಿ ನಿಯಂತ್ರಣವನ್ನು ಅತಿಕ್ರಮಿಸಿ, ನ ಗಚ್ಛಂತಿ-ಹೋಗುವುದಿಲ್ಲ.

ಪರಮಾತ್ಮನ ಪ್ರತಿಬಿಂಬ ಬ್ರಹ್ಮವಾಯುಗಳು. ಅವರ ಪ್ರತಿಬಿಂಬ ರುದ್ರ ದೇವರು. ಅವರ ಪ್ರತಿಬಿಂಬ ಇಂದ್ರಕಾಮರು. ಅವರ ಪ್ರತಿಬಿಂಬ ಪ್ರಾಣಾದಿ ಗಳು. ಹೀಗೆ ಎಲ್ಲಾ ಜೀವರ ಸ್ವರೂಪವೂ ನಿತ್ಯವೆ. ರವೂ ದೇವಿಯರು ಬ್ರಹ್ಮ ರುದ್ರಾದಿ ಸಮಸ್ತ ಜೀವರೂ ಮುಕ್ತಿಯಲ್ಲೂ, ಸಂಸಾರದಲ್ಲೂ ಎಲ್ಲೆ ಕಡೆಯಲ್ಲೂ. ಯಾವಾಗಲೂ ಭಗವಂತನ ಸಂಕಲ್ಪವನ್ನು ಮೀರಲಾರರು.

"ಅಭಾಸಕಾಭಾಷ" ಇತ್ಯಾದಿ ಶ್ರುತಿವಾಕ್ಯದ ಪೂರ್ವಾರ್ಧವು "ಅಭಾಸೋ ಕೋಸ್ಮಪವನ::" ಎಂಬ ಪ್ರಮೇಯ ಸಾಧಕ. ಇದೇ ಶ್ರುತಿಯ ಉತ್ತರಾರ್ಧವು. 'ಯಸ್ಮಾಜ್ಜ್ಞಯೂರಹಿತಮಿಂದಿರಯಾಸಮೇತಂ ಬ್ರಹ್ಮೇತಪೂರ್ವಕಮಿದನಂತು ಕಸ್ಯ ಚೇಶಂ' ಎಂಬ ಪ್ರಮೇಯಸಾಧಕವಾಗಿದೆ.

॥ ೨೭ ॥

"ಯಸ್ಮಿನ್ಪರೇಽನ್ಯೇಪ್ಯಜಜೀವಕೋಶಾಃ"
"ನಾಹಂಪರಾಯುರ್ನವಮರೀಚಿಮುಖ್ಯಾಃ।"
'ಜಾನಂತಿಯದ್ಧ್ಯಣಗಣಾನ್ನರಮಾದಯೋಽಪೀ
ನಿತ್ಯಃಸ್ವತಂತ್ರಉತಕೋಽಸ್ತಿತದನ್ಯಈಶಃ' ॥೨೭॥

1) "ಯಸ್ಮಿನ್ ಪರೇಸ್ಮೇಽಪ್ಯಜ ಜೀವಕೋಶಾಃ" ಎಂಬ ವಾಕ್ಯದಿಂದ ಶ್ರೀಮದಾಚಾರ್ಯರು ರುದ್ರದೇವರು ದುರ್ವಾರಿಸಗೆ ಹೇಳತಕ್ಕ ಭಾಗವತ ವಾಕ್ಯವನ್ನು ಸಂಗ್ರಹಿಸಿದ್ದಾರೆ.

"ವಯಂ ನ ತಾತ ಪ್ರಭವಾಮ ಭೂಮ್ನೋ
ಭವಂತಿ ಕಾಲೇ ನ ಭವಂತಿ ಹೀದೃಶಾಃ॥
"ಯಸ್ಮಿನ್ ಪರೇಽನ್ಯೇಽಪ್ಯಜಜೀವಕೋಶಾಃ"
ಸಹಸ್ರಶೋ ಯತ್ರ ವಯಂ ಭ್ರಮಾಮಃ ॥ (ಭಾಗವತ)

ದಯನೀಯವಾದ ದೂರ್ವಾಸನೇ. ನಾನಾಗಲಿ, ನನ್ನಂತಹ ಇತರ ದೇವತೆ ಯಾಗಲಿ ಶ್ರೀ ವಿಷ್ಣುವಿನ ಸುದರ್ಶನನಿಂದ ನಿನ್ನನ್ನು ರಕ್ಷಿಸಲಾರೆವು. ಕಾರಣ ಪರಿ ಪೂರ್ಣನಾದ ಆ ಭಗವಂತನಿಂದಲೇ–ಸೃಷ್ಟಿಕಾಲ ಬಂದಾಗ ಸೃಷ್ಟರಾಗುತ್ತೇವೆ. ಪ್ರಳಯ ಕಾಲ ಬಂದಾಗ ಆತನಿಂದಲೇ ಸಂಹೃತರಾಗಿ ಇಲ್ಲಾಂತಾ ಆಗುತ್ತೇವೆ; ಯಾವ ಬ್ರಹ್ಮಾಂಡದಲ್ಲಿ ನಾವು ಅನಂತಾನಂತಜೀವರುಸಂಚಾರ ಮಾಡುತ್ತೇವೆಯೋ

ಅಂತಹ ಬ್ರಹ್ಮನ ಜೀವಕೋಶದಂತಿರುವ ಬ್ರಹ್ಮಾಂಡಗಳೂ ಭಗವಂತನನ್ನು ಆಶ್ರಯಿಸಿಕೊಂಡೇ ಸೃಷ್ಟಿಗಳು ಸುಹೃತಗಳೂ ಆಗುತ್ತವೆ.

5) "ನಾಹಂ ಪರಾಯುಃ ನವಮರೀಚಿ ಮುಖ್ಯಾಃ" ಎಂಬುದರಿಂದ ನಾಹಂ ಪರಾಯುಃ ನವಮರೀಚಿ ಮುಖ್ಯಾಃ ಜಾನಂತಿ ಯದ್ವಿರಚಿತಂ ಖಿಲಾ ಸತ್ತ್ವ ಸಂಘಾಃ॥ ಎಂಬ ರುದ್ರ ವಾಕ್ಯವನ್ನು ಇಟ್ಟುಕೊಂಡಿದ್ದಾರೆ.

ನಾನಾಗಲಿ (ರುದ್ರ) ಬ್ರಹ್ಮನಾಗಲೀ, ಮರೀಚಿ ಪ್ರಭೃತಿಗಳಾದ ಋಷಿಗಳಾಗಲಿ, ಯಾವುದೇ ಚೇತನವಾಗಲಿ ಭಗವಂತನ ಈ ವಿಚಿತ್ರ ಸೃಷ್ಟಿಯನ್ನು ಯಾರೂ ಸಂಪೂರ್ಣ ತಿಳಿಯಲಾರೆವು.

3) ಯದ್ಗುಣಗಣಾನ್-ಯಾವ ಭಗವಂತನ ಗುಣಗಳ ಸಮೂಹವನು-ರವಾದಯೋಽಪಿ-ಲಕ್ಷ್ಮ್ಯಯೇ ಮೊದಲಾದ ದೇವಾದಿ ದೇವತೆಗಳೂ, ನ ಜಾನಂತಿ-

---

ತಿಳಿಯಲಾರರೋ, ಸಃ-ಅಂತಹ ಪರಮಾತ್ಮನು, ನಿತ್ಯಃ-ನಿರ್ವಿಕಾರನು, ಯಾವುದೇ ವಿಧದ ನಾಶ ಶೂನ್ಯನು, ಉತ-ಹಾಗೆಯೇ, ಸ್ವತಂತ್ರಃ-ಅಪರಾನಧೀನನು, ತದನ್ಯಃ-ಈ ಭಗವಂತನಿಗಿಂತ ಬೇರೆಯಾದ, ಈಶಃ-ಸ್ವಾಮಿಯು, ಕೋಽಸ್ತಿ-ಯಾರಿದ್ದಾನೆ?

ರವಾ ಬ್ರಹ್ಮಾದಿ ದೇವತೆಗಳೂ ಭಗವಂತನ ಮಹಿಮೆಯನ್ನು ಸಾಕಲ್ಯೇನ ತಿಳಿಯಲಾರರು. ಅವನು ಸ್ವತಂತ್ರ; ಸರ್ವಥಾ ನಾಶ ಶೂನ್ಯ. ಭಗವಂತನಿಗಿಂತ ಇನ್ನೊಬ್ಬ ಜಗದೊಡೆಯ ಯಾರು ಇಲ್ಲ.

"ಅತಿ ಪ್ರತಿಭಾದಿಯುಕ್ತೈಃ ಸುರಾದಿಭಿಃ ಅಚಿಂತ್ಯ ಮಹಿಮಾ" ಯೆಂಬ ವಿಷಯಸಾಧಕ.

॥ ೨೮ ॥

'ನೈವೈಕ ಏವ ಪುರುಷಃ ಪುರುಷೋತ್ತಮೋಽ ಸಾ
ವೇಕಃ ಕುತಃ ಸ ಪುರುಷೋ' 'ಯುತ ಏವ ಜಾತ್ಯಾ' ॥
ಆರ್ಷಾತ್ ಶ್ರುತೇಶ್ಚ ಗುಣತೋ ನಿಜರೂಪತಶ್ಚ
ನಿತ್ಯಾನ್ಯ ಏವ ಕಥಮುಸ್ಮ ಸ ಇತ್ಯಪಿ ಸ್ಯಾತ್ ॥೨೮॥

1) "ನೈವೈಕ .....ಕುತಃ ಸ ಪುರುಷಃ" ಎಂಬುದರಿಂದ ಮಹಾಭಾರತದ ಜನಮೇಜಯ ಹಾಗೂ ವೈಶಂಪಾಯನರ ಪ್ರಶ್ನೋತ್ತರಗಳನ್ನು ಸಂಗ್ರಹಿಸಿದ್ದಾರೆ

"ಬಹವಃ ಪುರುಷಾಃ ಬ್ರಹ್ಮನ್ ಉತಾಹೋ ಏಕ ಏವತು"

ಬ್ರಹ್ಮಜ್ಞರಾದ ವೈಶಂಪಾಯನರೇ, ಪ್ರಪಂಚದಲ್ಲಿ ಚೇತನರು ಬಹು ದುಂದಿ
ಇದ್ದಾರೆಯೋ ಅಥವಾ ಒಬ್ಬನೇ ಚೇತನ ಇರುವುದೇ?
ಕೋಽತ್ರ ಪುರುಷಶ್ರೇಷ್ಠಃ ತಂ ಭವಾನ್ ವಕ್ತು ಮರ್ಹತಿ ॥
ಬಹುವುಂದಿ ಚೇತನರೆಂದು ತಾವು ಒಪ್ಪುವುದಾದರೆ ಎಲ್ಲರೂ ಸಮಾನರೇ
ಅಥವಾ ಒಬ್ಬ ಎಲ್ಲರಿಗಿಂತಲೂ ಶ್ರೇಷ್ಠನಾದವ ಇರುವುದಾದರೆ ಅವನಾರು?
ಇಷ್ಟು ಜನಮೇಜಯನ ಪ್ರಶ್ನೆ.

ವೈಶಂಪಾಯನ ಉವಾಚ "ನೈತದಿಚ್ಛಂತಿ ಪುರುಷಂ ಏಕಂ ಕುರುಕುಲೋದ್ವಹ"
ಎಲೋ ಕುರುಕುಲೋತ್ಪನ್ನನಾದ ಜನಮೇಜಯನೇ, ಕೆಲವು ಕುಪಂಡಿತರು ಒಬ್ಬನೇ
ಚೇತನನೆಂದು ಹೇಳುತ್ತಿದ್ದಾರೆ. ಆದರೆ ಇದನ್ನು ಜ್ಞಾನಿಗಳು ಅಂಗೀಕರಿಸುವುದಿಲ್ಲ.
ಬಹೂನಾಂ ಪುರುಷಾಣಾಂ ಹಿ ಯಃಶ್ಯೈಕ್ಯಾ ಯೋನಿರುಚ್ಯತೇ । ತಥಾ ತಂ ಪುರು
ಷಂ ವಿಶ್ವಮಾಖ್ಯಾಸ್ಯಾಮಿ ಗುಣಾಧಿಕಂ ॥

ಶ್ರುತಿಸ್ಮೃತಿಗಳು ಭಗವಂತನನ್ನು ಎಲ್ಲಾ ಜೀವರ ಹುಟ್ಟು ಸಾವು ರಕ್ಷಿಗಳಿಗೆ
ನಿಮಿತ್ತನನ್ನಾಗಿ ಹೇಳುತ್ತಿವೆ. ಅದೇ ರೀತಿಯಾಗಿ ನಾನೂ ಸಕಲಾಂಶಯರ್ಯಾಮಿ
ಯಾದ, ಸಮಸ್ತ ಗುಣಪರಿಪೂರ್ಣನಾದ ಭಗವಂತನನ್ನು ನಿನಗೆ ವಿವರಿಸುತ್ತೇನೆ.
ಇದು ವೈಶಂಪಾಯನರ ಪ್ರತಿಜ್ಞೆ ಜನಮೇಜಯನಿಗೆ.

ಈಗ "ನೈವೈಕ ಏವ ಪುರುಷಃ ಪುರುಷೋತ್ತಮೋ ಸಾವೇಕಃ ಕುತಃ ಸ
ಪುರುಷಃ" ಎಂಬ ಆಚಾರ್ಯರ ವಚನಾಮೃತ ಸವಿ ಅಸ್ವಾದ್ಯಮಾನ
ವಾಗಿದೆ.
ಏಕ-ಏವ, ಪುರುಷಃ-ಒಬ್ಬನೇ ಒಬ್ಬ ಚೇತನ ಇರುವುದುಯೆಂಬ ಪಕ್ಷ, ನೈವ-
ಇಲ್ಲವೇ ಇಲ್ಲ, ಅಸೌ-ಆಭಗವಂತನು, ಪುರುಷೋತ್ತಮಃ-ಚೇತನೋತ್ತಮನು, ಸಃ-
ಇಂತಹ ಸರ್ವೋತ್ತಮನಾದ, ಪುರುಷಃ-ಪರಮಾತ್ಮನು, ಏಕಃ-ಜೀವರಿಂದ
ಅಭಿನ್ನನು, ಕುತಃ-ಹೇಗೆ?

2) ಯತಃ-ಯಾವ ಕಾರಣದಿಂದ, ಸಃ-ಆ ಪರಮಾತ್ಮನು, ಜಾತ್ಯಾ-ಜೀವತ್ವಕ್ಕೆ
ವಿರುದ್ಧವಾದ ಈಶ್ವರತ್ವವೆಂಬ ಧರ್ಮ ಇದ್ದುದರಿಂದ, ಅರ್ಥಾತ್-ತನ್ನ ಸಾಮ
ರ್ಥ್ಯದಿಂದಲೇ, ಇನ್ನೊಬ್ಬರ ಅಪೇಕ್ಷೆಯಿಲ್ಲದೆ ಲಭಿಸುವ ಇಷ್ಟಾರ್ಥವುಳ್ಳವನಾದ್ದ
ರಿಂದ, ಶ್ರುತೇಶ್ಚ-ದ್ವಾಸುಪರ್ಣಾ ಇತ್ಯಾದಿ ಶ್ರುತಿ ಪ್ರಮಾಣ ಇದ್ದುದರಿಂದ,
ಗುಣತಃ-ಪರಿಪೂರ್ಣ ಗುಣವುಳ್ಳವನಾದ್ದರಿಂದಲೂ, ನಿಜರೂಪತಶ್ಚ-ಅಣು ಜೀವ

ರಿಗೆ ಅಯೋಗ್ಯವಾದ ವ್ಯಾಪ್ತವಾದ ದೇಹವುಳ್ಳವನಾದುದರಿಂದ, ನಿತ್ಯಾನ್ಯವಿವ. ನಿತ್ಯವೂ ಜೀವರಿಗಿಂತ ಭಿನ್ನನೋ, ತತಃ-ಆ ಕಾರಣದಿಂದ, ಸ ಅಸ್ಮಿ-ಆ ಪರ ಮಾತ್ಮನೇ ನಾನಾಗಿದ್ದೇನೆ. ಇತ್ಯಪಿ-ಎಂಬುದು ಕೂಡಾ, ಕಥಂ-ಹೇಗೆ, ಸ್ಯಾತ್-ಕೂಡೀತು?

ಪರಮಾತ್ಮನು ಬೇರೆ, ಜೀವನು ಬೇರೆಯೆಂಬುದನ್ನು ಪ್ರತಿಯೊಬ್ಬರೂ ಒಪ್ಪಲೇ ಬೇಕು. ಜೀವನಲ್ಲಿ ಅಲ್ಪಶಕ್ತಿ, ಅಲ್ಪಜ್ಞಾನ, ಪಾರತಂತ್ರ್ಯಯೆಂಬ ಜೀವತ್ವ ವಿದೆ. ಇದಕ್ಕೆ ಸಂಪೂರ್ಣ ವಿರುದ್ಧವಾಗಿ, ಶ್ರೀ ಹರಿಯಲ್ಲಿ ಸಾರ್ವಜ್ಞ್ಯ, ಸರ್ವಶಕ್ತಿ, ಸ್ವಾತಂತ್ರ್ಯಯೆಂಬ ಈಶ್ವರತ್ವ ಇದೆ. ಹೀಗೆ ಈಶರತ್ವ ಜೀವತ್ವವೆಂಬ ವಿರುದ್ಧ ಜಾತಿಗಳಿರುವಾಗ ಇಬ್ಬರನ್ನು ಒಂದೇಯೆಂದು ಹೇಗೆ ಒಪ್ಪಿಕೊಳ್ಳುವುದು?

ಅರ್ಥಾತ್ - ಜೀವ ಬಯಸಿದ್ದನ್ನೆಲ್ಲಾ ಪಡೆಯಲಾರ, ಪಡೆದರೂ ಪರಾಪೇಕ್ಷೆ ಇದ್ದೇ ಇದೆ. ಸ್ವತಂತ್ರನಾಗಿ ಯಾವ ಪ್ರಯೋಜನವನ್ನೂ ಗಳಿಸಲಾರ. ಈಶ್ವರ ನಾದರೆ ಮನಸಾ ಬಯಸಿದ್ದನ್ನು ಪರಮುಖವನ್ನೇ ಅಪೇಕ್ಷಿಸದೆ ಸ್ವತಂತ್ರನಾಗಿ ಪಡೆಯಬಲ್ಲ. ಹೀಗೆ ಅರ್ಥದ ಅಂದರೆ ಪ್ರಯೋಜನದ ಸಿದ್ಧಿ ಹಾಗೂ ಅಸಿದ್ಧಿ ಯೆಂಬ ವಿರುದ್ಧ ಧರ್ಮವಿರುವಾಗ ಜೀವೇಶ್ವರೈಕ್ಯ ಹೇಗೆ ಘಟಿಸೀತು?

ಶ್ರುತೇಶ್ಚ - ದ್ವಾಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿಷ ಸ್ವಜಾತೇ ತಯೋರನ್ಯಃ ಪಿಪ್ಪಲಂ ಸ್ವಾದ್ವತ್ತಿ ಅನಶ್ನನ್ನನ್ಯೋ ಅಭಿಚಾಕಶೀತಿ.

ಶರೀರವೆಂಬ ಒಂದು ವೃಕ್ಷವನ್ನು ಜೀವೇಶ್ವರ ರೆಂಬ ಎರಡು ಹಕ್ಕಿಗಳು ಆಶ್ರಯಿಸಿವೆ. ಒಂದು ಹಕ್ಕಿ ಕರ್ಮಫಲವನ್ನು ಭೋಗಿಸುತ್ತದೆ. ಇನ್ನೊಂದು ಹಕ್ಕಿ ಕರ್ಮಫಲವನ್ನು ಭೋಗಿಸದೆ ಸಾಕ್ಷಿಭೂತವಾಗಿ ಕಂಗೊಳಿಸುತ್ತದೆ.

ಈ ಶ್ರುತಿ ಜೀವೇಶ್ವರರಿಂಗೆ ಭೇದವನ್ನು ಸ್ಪಷ್ಟವಾಗಿ ತಿಳಿಸುತ್ತದೆ.

ಗುಣತಃ - ಅಲ್ಪ ಗುಣವುಳ್ಳ ಜೀವನಿಗೂ ಪರಿಪೂರ್ಣ ಗುಣಗಳುಳ್ಳ ಪರಮಾತ್ಮ ನಿಗೂ ಐಕ್ಯ ಹೇಗೆ ಕೂಡೀತು?

ನಿಜರೂಪತಶ್ಚ - ಜೀವ ಅಣು ಸ್ವರೂಪವುಳ್ಳವ. ಭಗವಂತನ ಸ್ವರೂಪ ವ್ಯಾಪ್ತ. ಅಣು ಜೀವನಿಗೆ ಎಟಕದ ಸರ್ವವ್ಯಾಪ್ತಿ ಭಗವಂತನಿಗಿರುವಾಗ ಇವರಿಬ್ಬರಿಗೆ ಐಕ್ಯ ಹೇಗೆ ತಾನೆ ಕೂಡೀತು?

ಯತಃ ಸ್ವರೂಪತಶ್ಚಾನ್ಯೋ ಜಾತಿತಃ ಶ್ರುತಿತೋಽರ್ಥತಃ ।
ಕಥ ಮಸ್ಮಿ ಸ ಇತ್ಯೇವ ಸಂಬಂಧಃ ಸ್ಯಾದ ಸಂಹಿತಃ ॥ ಎಂಬ ಮಹಾ

ಭಾರತಾಂತರ್ಗತವಾದ ಮೋಕ್ಷ ಧರ್ಮದ ಪ್ರಮೇಯ ಸಂಗ್ರಾಹಕ ಈ ಶ್ಲೋಕದ ಉತ್ತರಾರ್ಧ

ಈ ಸಮಗ್ರ ಶ್ಲೋಕದಿಂದ ಶ್ರೀಮದಾಚಾರ್ಯರು ಹಿಂದೆಹೇಳಿದ "ಅಭಿಧಾ ಕುತೋಽಸ್ಯ" ಎಂಬುದನ್ನು ಪ್ರಮಾಣ ಬಲದಿಂದ ಸಮರ್ಥಿಸಿದ್ದಾರೆ.

॥ ೨೯ ॥

ಸರ್ವೋತ್ತಮೋ ಹರಿರಿದಂ ತು ತದಾಜ್ಞಯೈವ
ಚೇತುಂ ಕ್ಷಮಂ ಸತು ಹರಿಃ ಪರಮಃ ಸ್ವತಂತ್ರಃ ।
ಪೂರ್ಣಾವ್ಯಯಾಗಣಿತ ನಿತ್ಯಗುಣಾರ್ಣವೋಽ ಸಾ
ವಿತ್ಯೇವ ವೇದವಚನಾನಿ ಪರೋಕ್ತಯಶ್ಚ ॥

ಅನ್ವಯಾರ್ಥ— ವೇದವಚನಾನಿ-ವೇದದ ವಾಕ್ಯಗಳು, ಪರೋಕ್ತಯಃಶ್ಚ-(ಪದ)-ಪರವಾಕ್ಯ, (ಉಕ್ತಯಃ)-ಪಂಚರಾತ್ರ, ಭಾರತ, ಪುರಾಣಾತ್ಮಕ ವಾಕ್ಯಗಳು, ಹರಿಃ ಸರ್ವೋತ್ತಮಃ-ಹರಿಯೇ ಸರ್ವೋತ್ತಮನು, ಇದಂ-ಈ ವಿಶ್ವವು, ತದಾಜ್ಞಯೈವ-ಭಗವಂತನ ಅಪ್ಪಣೆಯಿಂದಲೇ, ಚೇತುಂ-ಅತನನ್ನು ತಿಳಿಯಲು ಕ್ಷಮಂ-ಸಮರ್ಥವಾಗಿದೆ. ಸತು ಹರಿ: ತು-ಆ ಭಗವಂತನಾದರೂ, ಪರಮಃ:-ಶ್ರೇಷ್ಠನು, ಸ್ವತಂತ್ರಃ-ಅಪರಾಧೀನನು ಪೂರ್ಣಾ...ರ್ಣವಃ-(ಪೂರ್ಣ)-ಪರಿಪೂರ್ಣನಾದ, (ಅವ್ಯಯ)-ಯಾವುದೇಪ್ರಕಾರ ನಾಶ ರಹಿತವಾದ, (ಅಗಣಿತ)-ಯಾರಿಂದಲೂ ಎಣಿಸಲಾಗದ,[ನಿತ್ಯ]-ನಿತ್ಯವಾದ. [ಗುಣ]-ಗುಣಗಳಿಂದ, [ಅರ್ಣವ]-ಸಮುದ್ರದಂತಿರುವವನು, ಇತ್ಯೇವ-ಈ ರೀತಿಯಾಗಿಯೇ ಸಾರುತ್ತಿವೆ.

ಶ್ರೀ ಹರಿಯು ಸರ್ವೋತ್ತಮನು, ಸ್ವತಂತ್ರನು. ಅತನ ಅನುಗ್ರಹವಿಲ್ಲದೇ ಯಾರೂ ಆತನನ್ನು ತಿಳಿಯಲಾರರು. ಅತನ ಗುಣಗಳು ನಿತ್ಯ ನಿರ್ವಿಕಾರಗಳು. ಪರಿಪೂರ್ಣಗಳು. ನಿರವಧಿಕಗಳು. ಎಣಿಕೆಗೆ ಎಟಕದವುಗಳು ಹೌದು. ಇದೇ ಶ್ರುತಿ ಸ್ಮೃತಿಗಳ ಸಾರ, ಪಂಚರಾತ್ರ, ಭಾರತ, ಪುರಾಣಗಳ ಹಿತ ಸಂದೇಶ.

॥ ೩೦ ॥

ಋಗಾದಯಶ್ಚ ಚತ್ವಾರಃ ಪಂಚರಾತ್ರಂ ಚ ಭಾರತಮ್ ।
ಮೂಲ ರಾಮಾಯಣಂ ಬ್ರಹ್ಮ ಸೂತ್ರಂ ಮಾನಂ

ಸ್ವತಃ ಸ್ಮೃತವ್

ಅನ್ವಯಾರ್ಥ—ಚತ್ವಾರಃ- ಋಗಾದಯಃ ಚ-ಋಕ್, ಯಜುರ್, ಸಾಮ, ಅಥರ್ವ ವೆಂಬ ನಾಲ್ಕು ವೇದಗಳು. ಪಂಚರಾತ್ರಂ-ಪಂಚರಾತ್ರಾಗಮವು. ಭಾರತಂ—ಭಾರತವು. ಮೂಲರಾಮಾಯಣಂ—ಮೂಲ ರಾಮಾಯಣವು. ಚ-ಮತ್ತು ಬ್ರಹ್ಮ ಸೂತ್ರಂ-ಬ್ರಹ್ಮಸೂತ್ರವು. ಸ್ವತಃ—ಇನ್ನೊಂದು ಸಂವಾದದ ಅಪೇಕ್ಷೆ ಇಲ್ಲದೆ, ಪ್ರಮಾಣಂ-ಪ್ರಮಾಣವಾಗಿ, ಸ್ಮೃತವ್ -ಸ್ಮೃತಿಯಲ್ಲಿ ಹೇಳಲ್ಪಟ್ಟಿದೆ.

ವಾಕ್ಯವನ್ನು ಪ್ರಯೋಗಿಸುವ ಪುರುಷನ ದೋಷವೇ ವಾಕ್ಯ ದೋಷಕ್ಕೆ ಅಥವಾ ವಾಕ್ಯದ ಅಪ್ರಮಾಣಕ್ಕೆ ಕಾರಣ. ವಾಕ್ಯಪ್ರಯುಕ್ತೃನು ಅಜ್ಞಾನಿಯಾಗಿದ್ದರೆ ಮೋಸ ಮಾಡುವನಾಗಿದ್ದರೆ ಅವನ ವಾಕ್ಯವೂ ಸುಳ್ಳಾಗುತ್ತದೆ. ಅಪ್ರಮಾಣವಾಗುತ್ತದೆ. ವೇದಗಳೆಲ್ಲವೂ ಅಪೌರುಷೆಯಗಳು. ಪುರುಷ ನಿರ್ಮಿತವಲ್ಲ. ಅನಾದಿನಿತ್ಯ ಇಂತಹ ವೇದಗಳಲ್ಲಿ ಪುರುಷ ದೋಷ ಮೂಲಕ ದೋಷಕ್ಕೆಲ್ಲಿ ಅವಕಾಶ,? ಆದುದರಿಂದ ಸಂವಾದ ನಿರಪೇಕ್ಷವಾಗಿಯೇ ಪ್ರಮಾಣಗಳು. ಪಂಚರಾತ್ರ ಭಾರತಾದಿ ಮೂಲ ರಾಮಾಯಣ ಬ್ರಹ್ಮ ಸೂತ್ರಗಳು ಭಗವಂತನಿಂದ ಸೃಷ್ಟವಾದವು ಗಳಾದರೂ ಪ್ರಮಾಣವಾದ ವೇದಗಳಿಗೆ ಅನುಕೂಲವಾದುದರಿಂದ ವೇದ ವಿರೋಧ ಇಲ್ಲವಾದುದರಿಂದ ಇವುಗಳೂ ಸ್ವತಃ ಪ್ರಮಾಣಗಳು ಸಂವಾದದ ಅಪೇಕ್ಷೆ ಇಲ್ಲ,

॥ ೩೧ ॥

ಅವಿರುದ್ಧಂ ತು ಯತ್ತ್ವಸ್ಯ ಪ್ರಮಾಣಂ ತಚ್ಚ ನಾನ್ಯಥಾ
ಏತದ್ವಿರುದ್ಧಂ ಯತ್ತು ಸ್ಯಾತ್ ನತನ್ಮಾನಂ ಕಥಂಚನ ॥

ಅನ್ವಯಾರ್ಥ— ಯತ್‌ತು-ಯಾವ ವಾಕ್ಯವು, ಅಸ್ಯ-ಪೂರ್ವೋಕ್ತ ಗ್ರಂಥಗಳಿಗೆ, ಅವಿರುದ್ಧಂ-ಪ್ರತಿಕೂಲವಾಗದ (ವಿರುದ್ಧವಾಗದ) ಅರ್ಥ ಪ್ರತಿಪಾದಕವೂ, ತಚ್ಚ-ಆ ವಾಕ್ಯವು, ಪ್ರಮಾಣಮ್-ಪ್ರಮಾಣವು, ಅನ್ಯಥಾ-ಅಪ್ರಮಾಣವು, ನ-ಅಲ್ಲ, ಯತ್ತು-ಯಾವ ವಚನವು. ಏತತ್‌ವಿರುದ್ಧಂ-ವೇದಾದಿಗಳಿಗೆ ವಿರುದ್ಧ ಅರ್ಥ ಬೋಧಕವೋ, ತತ್-ಆ ವಾಕ್ಯವು, ಕಥಂಚನ-ಯಾವ ಪ್ರಕಾರದಿಂದಲೂ, ನ ಮಾನಂ-ಪ್ರಮಾಣವು ಅಲ್ಲ,

ವೇದ, ಪಂಚರಾತ್ರ, ಭಾರತ, ಮೂಲರಾಮಾಯಣ ಬ್ರಹ್ಮ ಸೂತ್ರಗಳಿಗೆ ಸಮ್ಮತವಾದ ಅರ್ಥವನ್ನು ಹೇಳುವ ಎಲ್ಲಾ ವಾಕ್ಯಗಳು ಪ್ರಮಾಣಗಳಾಗಿವೆ.

॥ ೩೨ ॥

ವೈಷ್ಣವಾನಿ ಪುರಾಣಾನಿ ಪಂಚರಾತ್ರಾತ್ಮಕತ್ವತಃ ।
ಪ್ರಮಾಣಾನ್ಯೇವ ಮನ್ವಾದ್ಯಾಃ ಸ್ಮೃತಯೋಽಪ್ಯನುಕೂಲತಃ।

ಅನ್ವಯಾರ್ಥ— ವೈಷ್ಣವಾನಿ–ಪುರಾಣಾನಿ–ವಿಷ್ಣು ಸಂಬಂಧಿಯಾದ, ಸಾತ್ವಿಕ ಪುರಾಣಗಳು, ಪಂಚರಾತ್ರಾತ್ಮಕತ್ವತಃ-ಪಂಚರಾತ್ರ ಆಗಮಕ್ಕೆ ಪರಮಾನಅರ್ಥವುಳ್ಳದಾದ್ದರಿಂದ, ಪ್ರಮಾಣಾನ್ಯೇವ-ಪ್ರಮಾಣಗಳೇ, ಮನ್ವಾದ್ಯಾಃಸ್ಮೃತಯೋಽಪಿ–ಮನುಸ್ಮೃತಿಯೇ ಮೊದಲಾದ ಸ್ಮೃತಿಗಳೂ, ಅನುಕೂಲತಃ-ವೇದಾದಿಗಳಿಗೆ ಅನುಕೂಲವಾದ ಅರ್ಥ ಹೇಳುವುದರಿಂದ, ಪ್ರಮಾಣಾನ್ಯೇವ–ಪ್ರಮಾಣಗಳೇ.

ಸಾತ್ವಿಕವಾದ ಪ್ರತಿಯೊಂದು ವೈಷ್ಣವ ಪುರಾಣಗಳೂ ಪಂಚಾರಾತ್ರಪ್ರೋಕ್ತವಾದ ಪ್ರಮೇಯವನ್ನೇ ಪ್ರತಿಪಾದಿಸುವುದರಿಂದ ಪ್ರಮಾಣಗಳೆಂಬುದನ್ನು ಒಪ್ಪಲೇಬೇಕು. ವೇದದ ಅರ್ಥವನ್ನು ಸ್ಮರಿಸಿ ರಚಿತವಾದ ಗ್ರಂಥಗಳಿಗೆ ಸ್ಮೃತಿಗಳೆಂದು ಹೆಸರು. ವೇದಾರ್ಥದ ಸ್ಮೃತಿ ಪೂರ್ವಕವಾಗಿಯೇ ರಚಿತವಾದ ಸ್ಮೃತಿಗಳು ವೇದಗಳಿಗೆ ಅನುಕೂಲಗಳೇ ಆಗಬೇಕು ತಾನೆ? ಆದ್ದರಿಂದ ಮನು ಸ್ಮೃತಿ ಮೊದಲಾದ ಸ್ಮೃತಿಗಳೂ ಪ್ರಮಾಣಗಳೇ.

॥ ೩೩ ॥

ಏತೇಷು ವಿಷ್ಣೋರಾಧಿಕ್ಯಮುಚ್ಯತೇ ಽನ್ಯಸ್ಯ ನ ಕ್ವಚಿತ್ ।
ಅತಸ್ತದೇವ ಮಂತವ್ಯಂ ನಾನ್ಯಥಾತು ಕಥಂಚನ ॥

ಅನ್ವಯಾರ್ಥ— ಏತೇಷು–ಈ ಪ್ರಮಾಣ ಗ್ರಂಥಗಳಲ್ಲಿ, ವಿಷ್ಣೋಃ–ಶ್ರೀ ವಿಷ್ಣುವಿಗೆ ಆಧಿಕ್ಯಂ–ಸರ್ವೋತ್ತಮತ್ವವು, ಉಚ್ಯತೇ-ಹೇಳಲ್ಪಡುತ್ತದೆ, ಅನ್ಯಸ್ಯ-ಇತರರಿಗೆ, ಕ್ವಚಿತ್– ಎಲ್ಲಿಯೂ, ನ ಉಚ್ಯತೇ-ಹೇಳಲ್ಪಡುವುದಿಲ್ಲ. ಅತಃ–ಆದುದರಿಂದ, ತದೇವ-ವಿಷ್ಣೂತ್ಕರ್ಷವು, ಮಂತವ್ಯಂ–ಮನನೀಯವಾಗಿದೆ, ಕಥಂಚನ-ಯಾವ ವಿಷಯದಿಂದಲೂ, ಅನ್ಯಥಾ-ಏತದ್ವಿರುದ್ಧವಾಗಿ ನ ಮಂತವ್ಯಂ-ತಿಳಿಯಬಾರದು.

ತಾತ್ಪರ್ಯ— ವಿಷ್ಣುವಿನ ಸರ್ವೋತ್ತಮತ್ವವೇ ಸ್ವೀಕಾರಾರ್ಹ ಹಾಗೂ ಮನನೀಯ; ಏಕೆಂದರೆ ಈ ವೇದಾದಿ ಪ್ರಮಾಣ ಗ್ರಂಥಗಳಲ್ಲಿ ವಿಷ್ಣುವಿಗೆ ಸರ್ವತಃ ಆಧಿಕ್ಯವು ಪ್ರದಿಪಾದಿತವಾಗಿದೆ. ಈ ಪ್ರಮಾಣ ಗ್ರಂಥಗಳ ಯಾವ ಭಾಗದಲ್ಲೂ ಇತರರ ಸರ್ವೋತ್ತಮತ್ವವು ಹೇಳಲ್ಪಡಲೇ ಇಲ್ಲ. ಹೀಗೆಯೂ ಅಪ್ರಮಾಣವಾದ

ಹೇಳಿರತಕ್ಕಗ್ರಂಥಗಳಲ್ಲಿರುದ್ರನಸರ್ವೋತ್ತಮತ್ವವು ಹೇಗೆ ಅಂಗೀಕಾರಾರ್ಹವಾದೀತು?

॥ ೩೪ ॥

ಮೋಹಾರ್ಥಾನ್ಯನ್ಯಶಾಸ್ತ್ರಾಣಿ ಕೃತಾನ್ಯೇವಾಜ್ಞಯಾಹರೇಃ ।
ಅತಸ್ತೇಷೂಕ್ತಮಗ್ರಾಹ್ಯಮಸುರಾಣಾಂತಮೋಗತೇಃ॥೩೪॥

॥ ೩೫ ॥

ಯಸ್ಮಾತ್ ಕೃತಾನಿ ತಾನೀಹವಿಷ್ಣುನೋಕ್ತೈಃ ಶಿವಾದಿಭಿಃ ।
ಏಷಾಂ ಯನ್ನ ವಿರೋಧಿಸ್ಯಾತ್ತತ್ರೋಕ್ತಂತನ್ನವಾರ್ಯತೇ ॥

ಅನ್ವಯಾರ್ಥ— ಹರೇಃ-ವಿಷ್ಣುವಿನ, ಆಜ್ಞಯಾ-ಆಣತಿಯಿಂದ, ಕೃತಾನಿ-ರಚಿತವಾದ ಅನ್ಯಶಾಸ್ತ್ರಾಣಿ-ಇತರ ಶಾಸ್ತ್ರಗಳು, ಮೋಹಾರ್ಥಾನಿ-(ಮೋಹ) ವಿಪರೀತ ಜ್ಞಾನವೇ, (ಅರ್ಥಾನಿ)-ಪ್ರಯೋಜನವಾಗಿವುಳ್ಳವುಗಳು, ಅತ:-ಆದುದರಿಂದ, ತೇಷು-ಪಾಶುಪತಾದಿಗಳಲ್ಲಿ, ಉಕ್ತಂ-ಹೇಳಿರತಕ್ಕ ವಿಷಯವು, ಅಗ್ರಾಹ್ಯಂ-ಸ್ವೀಕಾರಾರ್ಹವಲ್ಲ, ಯಸ್ಮಾತ್-ಯಾವ ನಿಮಿತ್ತದಿಂದ, ಅಸುರಾಣಾಂ-ಆಸುರೀ ಸ್ವಭಾವದ ಅಧಮ ಜೀವರಿಗೆ, ತಮೋಗತೇ:-ಅಂಧತಮೋಲೋಕ ಪ್ರಾಪ್ತಿಯಾಗುವುದಕ್ಕಾಗಿ, ಯಸ್ಮಾತ್-ಯಾವ ಕಾರಣದ ದಶೆಯಿಂದ, ವಿಷ್ಣುನಾ-ಶ್ರೀ ಹರಿಯಿಂದ, ಉಕ್ತೈ:-ಹೇಳಲ್ಪಟ್ಟ (ಆಜ್ಞಾಪ್ತರಾದ), ಶಿವಾದಿಭಿ:-ರುದ್ರಾದಿಗಳಿಂದ, ತಾನಿ-ಆ ಗ್ರಂಥಗಳು, ಇಹ-ಈ ವಿಷಯದಲ್ಲಿ, ಕೃತಾನಿ-ಮಾಡಲ್ಪಟ್ಟಿರುವವೋ, ಅತ:-ಆಕಾರಣದಿಂದ, ತೇಷು-ಆವುಗಳಲ್ಲಿಉಕ್ತಂ-ಹೇಳಲ್ಪಟ್ಟದ್ದು, ಅಗ್ರಾಹ್ಯಂ-ಸ್ವೀಕಾರಾರ್ಹವಲ್ಲ, ತತ್ರ-ಪಾಶುಪತಾದಿ ಶಾಸ್ತ್ರಗಳಲ್ಲಿ, ಉಕ್ತಂ-ಹೇಳಲ್ಪಟ್ಟ, ಯತ್ ಏಷಾ-ಯಾವಅಂಶವು, (ಈ ವೇದಾದಿ ಗ್ರಂಥಗಳಿಗೆ) ನ ವಿರೋಧಿ-ವಿರುದ್ಧ ಆಲ್ಲವೋ, ತತ್-ಆ ಅಂಶವು, ನವಾರ್ಯತೇ-ನಿಷೇಧಿಸಲ್ಪಡುವುದಿಲ್ಲ.

ತಾತ್ಪರ್ಯ— ವೇದ ಭಾರತ, ಪಾಂಚರಾತ್ರ ಇತ್ಯಾದಿ ಪ್ರಮಾಣ ಗ್ರಂಥಗಳಿಂದ ಉತ್ಪನ್ನವಾಗುವ ಜ್ಞಾನ ಯಥಾರ್ಥ. ಈ ಯಥಾರ್ಥಜ್ಞಾನ ಉತ್ತಮಲೋಕ ಪ್ರಾಪ್ತಿನಿಮಿತ್ತವಾಗಿದೆ. ತಮೋಗತಿಗೆನಿಮಿತ್ತವಾದದ್ದುವಿಪರೀತಜ್ಞಾನ, ಆಸುರೀಸ್ವಭಾವದ ಅಧಮ ಜೀವರಿಗೆ, ತಮಃ ಪ್ರಾಪ್ತಿ ಅವರ್ಜನೀಯವಾಗಿದೆ. ಆದಕ್ಕಾಗಿವಿಪರೀತ ಜ್ಞಾನವು ಅವಶ್ಯಕ. ಈ ರೀತಿಯಾಗಿ ವಿಚಾರಮಾಡಿ ತಮೋಗತಿಗೆ ನಿಮಿತ್ತವಾದಪಾಪಿಗಳಿಗೆಅಜ್ಞಾನವನ್ನುಂಟು ಮಾಡುವ ಗ್ರಂಥವನ್ನುರಚಿಸುವಂದುಶ್ರೀಹರಿಯು

ಆಜ್ಞಾಪಿಸಿದ. ರುದ್ರನು ಮೋಹಕವಾದ ಪಾಶುಪತಾದಿಗಳನ್ನು ರಚಿಸಿದ. ಸಜ್ಜನರೇ ಈ ಮೋಹಕ ಶಾಸ್ತ್ರಕ್ಕೆ ಬಲಿಯಾಗಬೇಡಿ ಎಂದು ಎಚ್ಚರಿಕೆ ಕೊಡುತ್ತಾರೆ. ಪಾಶುಪತಾದಿಗಳು ಮೋಹಕ ಶಾಸ್ತ್ರಗಳೇ ಆದರೂ ವೇದಾದಿಗಳಿಗೆ ಅವಿರುದ್ಧವಾದ ಪ್ರಮೇಯ ಪ್ರತಿಪಾದಕವಾದ ಭಾಗ ಈ ಪಾಶುಪತಾದಿಗಳಲ್ಲಿ ಕಂಡು ಬಂದರೆ ಆ ಭಾಗವೂ ಪರಿತ್ಯಾಜ್ಯವಲ್ಲ. ಗ್ರಾಹ್ಯವಾಗಿದೆ. ..... ಅನಂತತ್ವಾತ್ ಮಹಾವಿಷ್ಣೋಃ ತದಂತರಂಅನಂತಕವರ್ ॥ ಮಾಹಾತ್ಮ್ಯ ಸೂಚನಾರ್ಥಾಯ ಹ್ಯುದಾಹರಣಮೂರಿತಂ" ಎಂಬ ಭಾಗದಿಂದ ಉಕ್ತವಿಷ್ಣೋತ್ಕರ್ಷ ಸರ್ವದಾ ಮನನೀಯವಾಗಿದೆ.

॥ ೩೬ ॥

"ಜನಿತೋತವಿಷ್ಣೋಃ" ಎಂಬುದಾಗಿ ಶ್ರುತಿಯಲ್ಲಿ ವಿಷ್ಣುವಿಗೂ ಜನಕನಾದವನು ಇದ್ದಾನೆ ಎಂಬುದಾಗಿ ಹೇಳಿದೆ. ಜನನ ಇದ್ದವನಿಗೆ ಮರಣ ನಿಶ್ಚಿತ. ಆದುದರಿಂದಸ್ವಾತಂತ್ರ್ಯವು ಅಂಗೀಕಾರಾನರ್ಹ. ಆದುದರಿಂದಶ್ರೀಹರಿಸರ್ವೋತ್ತಮತ್ವವು ಅಸಾಧ್ಯ. ಹೀಗೆ ವೇದದ ಈ ಭಾಗವು ಅಪ್ರಮಾಣವು. ಆದುದರಿಂದಲೇ ವೇದಾದಿಗಳು ಅತ್ಯಂತ ಪ್ರಮಾಣವೆಂಬ ಮಾತು ಅರ್ಥ ಶೂನ್ಯವೆಂಬ ಶಂಕೆಗೆ ಉತ್ತರವನ್ನು ಈ ಮುಂದಿನ ವಾಕ್ಯ ಹೇಳುತ್ತದೆ.-

ವಿಷ್ಣ್ವಧಿಕ್ಯ ವಿರೋಧೀನಿ ಯಾನಿ ವೇದವಚಾಂಸ್ಯಪಿ ।
ತಾನಿ ಯೋಜ್ಯಾನ್ಯಾನುಕೂಲ್ಯಾತ್ ವಿಷ್ಣ್ವಧಿಕ್ಯಸ್ಯ
ಸರ್ವಶಃ ॥೩೬॥

ಅನ್ವಯಾರ್ಥ— ವಿಷ್ಣ್ವಧಿಕ್ಯವಿರೋಧೀನಿ-ವಿಷ್ಣುವಿನ ಸರ್ವೋತ್ಕರ್ಷವನ್ನು ವಿರೋಧಿಸುವಂತಹ, ಯಾನಿ-ಯಾವ, ವೇದವಚಾಂಸಿ ಅಪಿ-ವೇದದ ಮಾತುಗಳೂ ಇವೆಯೋ, ತಾನಿ ಸರ್ವಶಃ-ಅವೆಲ್ಲವನ್ನೂ, ವಿಷ್ಣ್ವಧಿಕ್ಯಸ್ಯ-ವಿಷ್ಣೂತ್ಕರ್ಷಕ್ಕೆ, ಅನುಕೂಲ್ಯಾತ್-ಅನುಕೂಲವಾಗುವಂತೆ, ಯೋಜ್ಯಾನಿ-ಕೂಡಿಸಬೇಕು.

ತಾತ್ಪರ್ಯ— ಅಪಾತತಃ ಅಂದರೆ ಮೇಲೆ ಮೇಲೆ ನೋಡಿದಾಗ, ಕೆಲವು ವೇದಗಳು ವಿಷ್ಣುವಿನ ಸರ್ವೋತ್ಕರ್ಷವನ್ನು ವಿರೋಧಿಸುವಂತೆ ಕಾಣಬಹುದು. ಪೂರ್ವಾಪರ ವಿಚಾರ ಮಾಡಬೇಕು. ಸ್ಪಷ್ಟವಾಗಿ ವಿಷ್ಣುವಿನ ಸರ್ವೋತ್ಕರ್ಷವನ್ನು ಪ್ರತಿಪಾದನೆ ಮಾಡುವ ಬಹು ವೇದ ವಾಕ್ಯಗಳಿವೆ. ಆ ವಾಕ್ಯಗಳಿಗೆ ವಿರೋಧ ಬರದಂತೆ ಈ

ವಾಕ್ಯಗಳಿಗೂ ವಿಷ್ಣೋತ್ಕರ್ಷವನ್ನು ಪ್ರತಿಪಾದಿಸುವ ರೀತಿಯಲ್ಲಿ ಯೋಜನ ಮಾಡಿ ಕೊಳ್ಳಬೇಕು ಎಂದು ಪ್ರಮಾಣಗಳಿವೆ.

ಪ್ರಕೃತ ಇಲ್ಲಿಯೂ "ಜನಿತೋತ ವಿಷ್ಣೋ" ಎಂಬ ವೇದ ವಾಕ್ಯದಲ್ಲಿ "ಪವಮಾನ ಸಾಮ" ಎಂದಿದೆ. ಮುಖ್ಯ ಪ್ರಾಣನು ವಿಷ್ಣುವಿಗೆ ಜನಕ ಅಂದರೆ ವಿಷ್ಣುವಿನ ಜ್ಞಾನವನ್ನು ಸಜ್ಜನರಿಗೆ ಪವಮಾನನು ಉಂಟು ಮಾಡುತ್ತಾನೆ ಎಂದು ಅರ್ಥ ಮಾಡಬೇಕು. "ಯಸ್ಮಾತ್ ವಿಜಾನಾತ್ ಸಪಿತುಷ್ಪಿತಾಸತ್" ಎಂಬ ಶ್ರುತಿಯೇ ಪ್ರಮಾಣ

॥ ೩೭ ॥

ಅವತಾರೇಷು ಯತ್ಕಿಂಚಿತ್ ದರ್ಶಯೇನ್ನರವದ್ಧರಿಃ ।
ತಚ್ಚಾಸುರಾಣಾಂ ಮೋಹಾಯ ದೋಷಾಃ ವಿಷ್ಣೋರ್ನ ಹಿ ಕ್ವಚಿತ್ ॥೩೭॥

ಅನ್ವಯಾರ್ಥ— ಹರಿಃ–ಭಗವಂತನು, ಅವತಾರೇಷು-ರಾಮ ಕೃಷ್ಣಾದ್ಯವತಾರಗಳಲ್ಲಿ ನರವತ್-ಮನುಷ್ಯರಂತೆ. ಯತ್ಕಿಂಚಿತ್, ಏನನ್ನಾದರೂ. ದರ್ಶಯೇತ್-ತೋರಿಸಿದ್ದರೆ ತಚ್ಚ–ಅದಾದರೂ, ಅಸುರಾಣಾಂ-ಆಸುರೀ ಸ್ವಭಾವದ ಜೀವದ,ಮೋಹಾಯ-ವಿಪರೀತ ಜ್ಞಾನಕ್ಕೋಸ್ಕರ, ಕ್ವಚಿತ್-ಯಾವಾಗಲೂ, ವಿಷ್ಣೋಃ-ಶ್ರೀ ಹರಿಗೆ. ದೋಷಾಃ–ದೋಷಗಳು, ನ-ಇಲ್ಲ, ಹಿ-ನಿಶ್ಚಯ

ತಾತ್ಪರ್ಯ— ಭಗವಂತನು ರಾಮ ಕೃಷ್ಣ ಪ್ರಭೃತಿ ಅವತಾರಗಳಲ್ಲಿ ಮನುಷ್ಯರಂತೆ ಅಜ್ಞಾನವನ್ನು ದುಃಖವನ್ನು ತೋರ್ಪಡಿಸಿದ್ದಾರೆ, ಅದೆಲ್ಲವೂ ನಟನೆ ಮಾತ್ರ. ಆಸುರೀ ಸ್ವಭಾವದ ಅಧಮ ಜೀವರಿಗೆ ಉಂಟಾಗುವ ವಿಪರೀತ ಜ್ಞಾನವೇ ಈ ನಟನೆಯ ಮಹಾ ಪ್ರಯೋಜನ ಎಂದೆಂದೂ ದೋಷ ಲೇಶ ಶ್ರೀ ಹರಿಗೆ ಇಲ್ಲ.

॥ ೩೮ ॥

ಅಜ್ಞತ್ವಂ ಪಾರವಶ್ಯಂ ವಾ ಛೇದ ಭೇದಾದಿಕಂತಥಾ ।
ತಥಾ ಪ್ರಾಕೃತದೇಹತ್ವಂ ದೇಹತ್ಯಾಗಾದಿಕಂ ತಥಾ॥

॥ ೩೯ ॥

ಅನೀಶತ್ವಂಚದುಃಖಿತ್ವಂಸಾಮ್ಯಮನ್ಯೈಶ್ಚಹೀನತಾಮರ್।

ಪ್ರದರ್ಶಯತಿ ಮೋಹಾಯ ದೈತ್ಯಾದೀನಾಂ ಹರಿಃ ಸ್ವಯಮ್ ॥

ಅನ್ವಯಾರ್ಥ— ಹರಿಃ-ಪರಮಾತ್ಮನು, ಸ್ವಯಂ-ತಾನು, ಅಜ್ಞತ್ವಂ-ಅಜ್ಞಾನವನ್ನು ಪಾರವಶ್ಯಂ ವಾ-ಪರಾಧೀನತೆಯನ್ನು, ಭೇದ ಭೇದಾದಿಕಂ-(ಭೇದ)-ಗಾಯ, (ಭೇದಾದಿಕಂ)-ವಿಭಿನ್ನತೆಯೇ ಮೊದಲಾದುದನ್ನು, ತಥಾ-ಹಾಗೆಯೇ, ಪ್ರಾಕೃತ ದೇಹತ್ಯಂ-ಜಡಶರೀರವನ್ನು ದೇಹತ್ಯಾಗದಿಕಂ-ಶರೀರ ಪರಿತ್ಯಾಗವೇ ಮೊದಲಾದುವನ್ನೇ, ಆನೀಶತ್ವಂ-ಅಸಾಮರ್ಥ್ಯವನ್ನು, ದುಃಖಿತ್ವಂ-ದುಃಖವನ್ನು, ಸಾಮ್ಯ-ಇತರರಿಂದ ಸರಿ ಸಮಾನತೆಯನ್ನು, ಅನ್ಯೇಭ್ಯಶ್ಚ-ಇತರರಿಗಿಂತ, ಹೀನತಾಂ-ನೀಚತೆಯನ್ನ, ದೈತ್ಯಾನಾಂ-ದೈತ್ಯರ, ಮೋಹಾಯ-ವಿಪರೀತ ಜ್ಞಾನಕ್ಕೋಸ್ಕರ, ಪ್ರದರ್ಶಯತಿ-ತೋರಿಸುತ್ತಾನೆ.

ತಾತ್ಪರ್ಯ— ರಾಮಾವತಾರದಲ್ಲಿ ಅಶೋಕ ವೃಕ್ಷಮೂಲದಲ್ಲಿ ರಾವಣ ಕೊಂಡೊಯ್ದು ಇಟ್ಟ ಸೀತೆಯ ಪ್ರತಿಮೆಯನ್ನೇ ಸೀತೆಯೆಂದು ಭ್ರಮೆಯನ್ನು ತೋರಿಸಿದ. (ಅಜ್ಞಾನ)

ನರಕಾಸುರನ ಜೊತೆ ಯುದ್ಧದಲ್ಲಿ ಬಳಲಿದ ಶ್ರೀಕೃಷ್ಣ ಸತ್ಯಭಾಮೆಯ ಸಹಾಯ ಪಡೆದು ಆತನ ವಧೆ ಮಾಡಿದ. (ಪರವಶತೆ)

ಮಹಾಭಾರತದಲ್ಲಿ ಭೀಷ್ಮ ಅರ್ಜುನರ ಯುದ್ಧದಲ್ಲಿ ತನಗೆ ಗಾಯವಾಯಿತು. ರಕ್ತ ಚಿಮ್ಮಿತು ಎಂದು ತೋರಿಸಿದ್ದಾನೆ ಶ್ರೀಕೃಷ್ಣ. (ಭೇದ)

ಪರಶುರಾಮನಿಗೂ ಶ್ರೀರಾಮಚಂದ್ರನಿಗೂ ನಡೆದ ಯುದ್ಧದಿಂದ ಭಗವತ್ ಸ್ವರೂಪರಾದ ಇವರು ಭಾರ್ಗವರ ಭೇದ ಪ್ರದರ್ಶನವಾಯಿತು. (ಭೇದ)

ರಾಮಾವತಾರದಲ್ಲಿ ಜಡ ದೇಹವುಳ್ಳವನಂತೆ ತನ್ನನ್ನು ತೋರ್ಪಡಿಸಿದ್ದಾನೆ. (ಪ್ರಾಕೃತ ದೇಹತ್ವಂ)

ಶ್ರೀಕೃಷ್ಣ ದೇಹ ಪರಿತ್ಯಾಗ ಮಾಡಿದವನಂತೆ ತೋರಿಸಿದ್ದಾನೆ. (ದೇಹತ್ಯಾಗ)

ಉಗ್ರಸೇನನನ್ನು ರಾಜನನ್ನಾಗಿ ಮಾಡಿ ತಾನು ದೇಶದಲ್ಲಿ "ಅನೀಶ" ನೆಂದು ಭ್ರಾಂತಿ ಹುಟ್ಟಿಸಿದ,

ರಾಮಾವತಾರದಲ್ಲಿ ಸೀತೆಗಾಗಿ ದುಃಖವನ್ನು ಪ್ರಕಟಿಸಿದ. (ದುಃಖಿತ್ವಂ)

ಕೈಲಾಸಯಾತ್ರೆಯ ಸಂದರ್ಭದಲ್ಲಿ ರುದ್ರನಿಗಿಂತ ಹೀನತೆಯನ್ನು ತೋರಿಸಿದ್ದಾನೆ.

ಈ ರೀತಿಯಾಗಿ ಅಜ್ಞಾನಾದಿಗಳ ಪ್ರದರ್ಶನ ಮಾತ್ರ. ವಾಸ್ತವವಾಗಿ ಸರ್ವ ಸ್ವಾಮಿ, ಸರ್ವಜ್ಞ, ಸರ್ವಶಕ್ತಿ ನಿತ್ಯಾನಂದ ಸ್ವತಂತ್ರನಾದ ಭಗವಂತನಲ್ಲಿ ಯಾವ ದೋಷಕ್ಕೂ ಅವಕಾಶವಿಲ್ಲ.

॥ ೪೦ ॥

ನ ತಸ್ಯ ಕಶ್ಚಿದ್ದೋಷೋಸ್ತಿ ಪೂರ್ಣಾಖಿಲಗುಣೋ ಹ್ಯಸೌ ।
ಸರ್ವದೇಹಸ್ಥರೂಪೇಷು ಪ್ರಾದುರ್ಭಾವೇಷು ಚೇಶ್ವರಃ ॥

ಅನ್ವಯಾರ್ಥ— ತಸ್ಯ–ಪರಮಾತ್ಮನಿಗೆ, ಕಶ್ಚಿತ್–ಯಾವೊಂದೂ, ದೋಷಃ–ದೋಷವು, ನ–ಇಲ್ಲ, ಈಶಃ–ಸ್ವಾಮಿಯಾದ, ಅಸೌ–ಈ ಪರಮಾತ್ಮನು, ಸರ್ವದೇಹಸ್ಥರೂಪೇಷು–ಎಲ್ಲ ಜೀವರ ದೇಹದಲ್ಲಿ ಅಂತರ್ಯಾಮಿಯಾಗಿ ಇರತಕ್ಕ ರೂಪಗಳಲ್ಲಿ, ಪ್ರಾದುರ್ಭಾವೇಷು–ಅವತಾರಗಳಲ್ಲಿ, ಪೂರ್ಣಾಖಿಲಗುಣಃ–ಪರಿಪೂರ್ಣವಾದ ಸಮಸ್ತಗುಣಗಳುಳ್ಳವನು.

ತಾತ್ಪರ್ಯ— ಭಗವಂತನು ನಿರ್ದೋಷ ಗುಣಪರಿಪೂರ್ಣ ಕೇವಲ ಅವನ ಮೂಲ ರೂಪ ಮಾತ್ರವಲ್ಲ. ಪ್ರತಿಯೊಂದು ಅವತಾರಗಳೂ ಎಲ್ಲ ದೇಹಗಳ ಅಂತರ್ಯಾಮಿ ರೂಪಗಳೂ ಗುಣಪರಿಪೂರ್ಣಗಳು.

॥ ೪೧ ॥

ಬ್ರಹ್ಮಾದ್ಯಭೇದಃ ಸಾಮ್ಯಂ ವಾ ಕುತಸ್ತಸ್ಯ ಮಹಾತ್ಮನಃ ।
ಯದ್ಯೇವಂ ವಾಚಕಂ ಶಾಸ್ತ್ರಂ ತದ್ಧಿ ಶಾಸ್ತ್ರಂಪರಂ ಮತಮ್ ॥

ಅನ್ವಯಾರ್ಥ— ಮಹಾತ್ಮನಃ–ಸರ್ವ ಸ್ವಾಮಿಯಾದ, ತಸ್ಯ–ಆ ವಿಷ್ಣುವಿಗೆ, ಬ್ರಹ್ಮಾದ್ಯಭೇದಃ–ಬ್ರಹ್ಮನೇಮೊದಲಾದವರಿಂದಐಕ್ಯವು, ಸಾಮ್ಯಂ ವಾ–ಸರಿಸಮಾನತೆಯಾಗಲಿ, ಕುತಃ–ಹೇಗೆ ಕೂಡೀತು? ಏವಂ–ಹಿಂದೆ ಹೇಳಿದ ರೀತಿಯಿಂದ, ವಾಚಕಂ–ಹೇಳತಕ್ಕ, ಶಾಸ್ತ್ರಂ–ಶಾಸ್ತ್ರವು, ಯತ್–ಯಾವುದೋ, ತದ್ಧಿ–ಅದೇ, ಪರಂ–ಸರ್ವಶ್ರೇಷ್ಠವಾದ, ಶಾಸ್ತ್ರಂ–ಶಾಸ್ತ್ರವೆಂಬುದಾಗಿ, ಮತಂ–ಸಮ್ಮತವಾಗಿದೆ.

ತಾತ್ಪರ್ಯ— ಸರ್ವವ್ಯಾಪ್ತನಾದ ಭಗವಂತನಿಗೆ ಬ್ರಹ್ಮಾದಿಗಳಿಂದ ಐಕ್ಯವಾಗಲಿ, ಸಾಮ್ಯವಾಗಲಿ ಅಸಂಭಾವಿತ, ಆದುದರಿಂದ ಸಕಲ ಗುಣ ಪರಿಪೂರ್ಣನಾದ, ಸರ್ವ ಸ್ವಾಮಿಯಾದ, ಸರ್ವಜ್ಞ ಸರ್ವಶಕ್ತನಾದ, ಸರ್ವವಿಲಕ್ಷಣನಾದ ವಿಷ್ಣುವನ್ನು ಹೇಳುವ ಗ್ರಂಥವೇ ಸರ್ವಶ್ರೇಷ್ಠವಾದ ಶಾಸ್ತ್ರ.

॥ ೪೨ ॥

ನಿರ್ಣಯಾಯೈವಯತೊ್ಪೀಕ್ತಂಬ್ರಹ್ಮಸೂತ್ರಂತು
ವಿಷ್ಣುನಾ ।
ವ್ಯಾಸರೂಪೇಣತದ್ಗ್ರಾಹ್ಯಂತತೊ್ಪೀಕ್ತಾಃಸರ್ವ ನಿರ್ಣಯಾಃ

ಅನ್ವಯಾರ್ಥ— ವ್ಯಾಸರೂಪೇಣ-ವ್ಯಾಸ ಸ್ವರೂಪವನ್ನು ಸ್ವೀಕರಿಸಿದ, ವಿಷ್ಣುನಾ-ವಿಷ್ಣುವಿನಿಂದ, ನಿರ್ಣಯಾಯ-ಸಕಲ ವೇದಾರ್ಥ ನಿರ್ಣಯಕ್ಕೊ್ಕೀಸ್ಕರ, ಯತ್-ಯಾವ, ಬ್ರಹ್ಮಸೂತ್ರಂ-ಬ್ರಹ್ಮಸೂತ್ರವೆಂಬ ಶಾಸ್ತ್ರವು, ಪ್ರೊ್ಪೀಕ್ತಂ-ಹೇಳಲ್ಪಟ್ಟಿದೆಯೋ ತತ್-ಆ ಗ್ರಂಥವು, ಗ್ರಾಹ್ಯಂ-ಸ್ವೀಕಾರ್ಯ, ಸರ್ವನಿರ್ಣಯಾಃ-ಎಲ್ಲಾ ವೇದಾರ್ಥಗಳ ನಿರ್ಣಯಗಳು, ತತ್ರ-ಆ ಬ್ರಹ್ಮ ಸೂತ್ರಗಳಲ್ಲಿ ಇವೆ.

ತಾತ್ಪರ್ಯ— ಶ್ರೀಮನ್ನಾರಾಯಣನೇ ವ್ಯಾಸನಾಗಿ ಅವತರಿಸಿ ವೇದಾರ್ಥನಿರ್ಣಯಕ್ಕಾಗಿ ಬ್ರಹ್ಮ ಸೂತ್ರವನ್ನು ರಚಿಸಿದ. ಈ ಗ್ರಂಥದಲ್ಲಿ ಸರ್ವಶ್ರುತಿಸ್ಮೃತಿಗಳ ಅರ್ಥಗಳ ನಿರ್ಣಯ ಮಾಡಿದ್ದಾರೆ. ಆದುದರಿಂದ ಇದು ಅತ್ಯಂತಗ್ರಾಹ್ಯವಾಗಿದೆ.

॥ ೪೩ ॥

ಯಥಾರ್ಥವಚನಾನಾಂ ಚ ಮೋಹಾರ್ಥಾನಾಂಚ
ಸಂಶಯಾನ್ ।
ಅಪನೇತುಂ ಹಿ ಭಗವಾನ್ ಬ್ರಹ್ಮಸೂತ್ರಮುಚೀಕ್ಲೃಪತ್ ॥

ಅನ್ವಯಾರ್ಥ— ಯ-ಥಾರ್ಥವಚನಾನಾಂ-ಯಃಥಾರ್ಥ ವಿಷಯವನ್ನೇ ಹೇಳಿರತಕ್ಕ ವೇದಾದಿಗಳ, ಮೋಹಾರ್ಥಾನಾಂಚ-ವಿಪರೀತ ಅರ್ಥವನ್ನು ಹೇಳತಕ್ಕ ಪಾಶುಪತಾದಿಗಳ (ಅಧ್ಯಯನದಿಂದಾಗುವ) ಸಂಶಯಾಂ-ಸಂಶಯವನ್ನು ಅಪನೇತುಂ ಹಿ-ಪರಿಹಾರ ಮಾಡುವುದಕ್ಕೊ್ಕೀಸ್ಕರ ಭಗವಾನ್-ಪೂಜ್ಯರಾದ ದೇವರು, ಬ್ರಹ್ಮಸೂತ್ರಂ-ಬ್ರಹ್ಮ ಸೂತ್ರಗಳನ್ನು ಅಚೀಕ್ಲೃಪತ್-ರಚಿಸಿದರು,

ತಾತ್ಪರ್ಯ— ವೇದ, ಭಾರತ, ಪಂಚರಾತ್ರಾದಿಗಳು ವಿಷ್ಣುವನ್ನೇ ಸರೊ್ಪೀತ್ತಮನನ್ನಾಗಿತಿಳಿಸುತ್ತವೆ. ಪಾಶುಪಾತಾದಿಗಳು ರುದ್ರನ ಸರ್ವೋತ್ತಮತೆಯನ್ನು ಪ್ರತಿಪಾದಿಸುತ್ತಿವೆ. ಇವೆರಡರ ಅಧ್ಯಯನ ಮಾಡುವಾಗ ಮಾಧ್ವಸ್ಥನಿಗೆ ಸಂಶಯ ಬರುವುದು ಸ್ವಾಭಾವಿಕ. ಈ ಸಂಶಯ ಪರಿಹಾರಕೊ್ಕೀಸ್ಕರ ಶ್ರೀ ವೇದ ವ್ಯಾಸ ದೇವರು

ಬ್ರಹ್ಮ ಸೂತ್ರವನ್ನು ರಚಿಸಿದ್ದಾರೆ. ಇದರಲ್ಲಿ ಸರ್ವ ಶ್ರುತಿ ಸ್ಮೃತ್ಯರ್ಥವು ಇದೆ ಆದುದರಿಂದ ಇದು ಗ್ರಾಹ್ಯವೇ ಆಗಿದೆ.

॥ ೪೪ ॥

ತಸ್ಮಾತ್ಸೂತ್ರಾರ್ಥಮಾಗೃಹ್ಯಕರ್ತವ್ಯಃಸರ್ವನಿರ್ಣಯಃ ।

ಅನ್ವಯಾರ್ಥ— ತಸ್ಮಾತ್ ಆದುದರಿಂದ, ಸೂತ್ರಾರ್ಥ-ಬ್ರಹ್ಮ ಸೂತ್ರದ ಅರ್ಥವನ್ನು, ಆಗೃಹ್ಯ-ಸರಿಯಾಗಿ ತಿಳಿದು, ಸರ್ವನಿರ್ಣಯಃ-ಸರ್ವಶ್ರುತಿಸ್ಮೃತ್ಯರ್ಥಗಳ ನಿಶ್ಚಯವು ಕರ್ತವ್ಯಃ- ಮಾಡಲ್ಪಡಬೇಕು.

ತಾತ್ಪರ್ಯ— ಮೀಮಾಂಸಾ ಶಾಸ್ತ್ರವಾದ ಬ್ರಹ್ಮ ಸೂತ್ರವನ್ನು ಸರಿಯಾಗಿ ಮನನ ಮಾಡಬೇಕು. ಅದರಲ್ಲಿ ಹೇಳಿದ ನ್ಯಾಯವನ್ನೇ ಅನುಸಂಧಾನ ಮಾಡಿ ಕೊಂಡೇ ಸರ್ವ ಶ್ರುತಿ ಸ್ಮೃತಿಗಳ ಅರ್ಥವನ್ನು ದೃಢವಾಡಿಕೊಳ್ಳಬೇಕು.

॥ ೪೫ ॥ ॥ ೪೬ ॥

ಸರ್ವದೋಷವಹೀನತ್ವಂ ಗುಣೈಃ ಸರ್ವೈರುದೀರ್ಣತಾ॥೪೬॥
ಅಭೇದಃ ಸರ್ವರೂಪೇಷು ಜೀವಭೇದಃ ಸದೈವಹಿ ।
ವಿಷ್ಣೋರುಕ್ತಾನಿಸೂತ್ರೇಷುಸರ್ವವೇದೇಡ್ಯತಾತಥಾ॥
ತಾರತಮ್ಯಂಚಮುಕ್ತಾನಾಂವಿಮುಕ್ತಿರ್ವಿದ್ಯಯಾ
ತಥಾ ।

ಅನ್ವಯಾರ್ಥ— ಸೂತ್ರೇಷು-ಬ್ರಹ್ಮ ಸೂತ್ರಗಳಲ್ಲಿ, ವಿಷ್ಣೋಃ-ಶ್ರೀ ವಿಷ್ಣುವಿಗೆ, ಸರ್ವದೋಷವಿಹೀನತ್ವಂ-ಸಮಸ್ತದೋಷಗಳ ಭಾವವು, ಸರ್ವೈಃ-ಸಮಸ್ತ, ಗುಣೈಃ-ಗುಣಗಳಿಂದ, ಉದೀರ್ಣತಾ-ಉತ್ಕೃಷ್ಟತೆಯು, ಸರ್ವರೂಪೇಷು-ಸಮಸ್ತ ಭಗವದವತಾರಗಳಲ್ಲೂ, ಅಭೇದಃ-ಐಕ್ಯವು, ಸದೈವ-ಮುಕ್ತಿ ಹಾಗೂ ಸಂಸಾರಗಳಲ್ಲಿ, ಜೀವ ಭೇದಃ- ಜೀವ ಭೇದವು, ತಥಾ-ಹಾಗೆಯೇ, ಸರ್ವವೇದಡ್ಯತಾ-ಸಮಸ್ತ ವೇದ ಪ್ರತಿಪಾದ್ಯತ್ವವು, ಮುಕ್ತಾನಾಂ-ಮುಕ್ತರಿಗೆ ತಾರತಮ್ಯಂ-ನೀಚೋಚ್ಚ ತೆಯು ತಥಾ-ಹಾಗೆಯೇ, ವಿದ್ಯಯಾ-ಭಗವದ ಪರೋಕ್ಷದಿಂದ, ವಿಮುಕ್ತಿಃ-ನೋಕ್ಷವು, (ಇತ್ಯಾದೀನಿ-ಇವೆಲ್ಲವೂ,) ಉಕ್ತಾನಿ-ಹೇಳಲ್ಪಟ್ಟವೆ.

ತಾತ್ಪರ್ಯ— ಭಗವಂತನು ನಿರ್ದೋಷನು ಗುಣಪರಿಪೂರ್ಣನು. ಭಗವಂತನ

ಮೂಲ ರೂಪಕ್ಕೂ ಮತ್ಸ್ಯಾದಿ ಅವತಾರ ರೂಪಗಳಿಗೂ ಭೇದ ಇಲ್ಲವೇ ಇಲ್ಲ. ಎಲ್ಲಾ ಭಗವದ್ರೂಪಗಳೂ ಅತ್ಯಂತಾ ಭಿನ್ನಗಳು. ಜೀವನಿಗೂ ವಿಷ್ಣುವಿಗೂ ಯಾವಾಗಲೂ ಭೇದ. ವೇದದ ಪ್ರತಿಯೊಂದು ವರ್ಣ, ಪ್ರತಿಯೊಂದು ಪದ, ಪ್ರತಿಯೊಂದು ರೂಪವೂ ಭಗವಂತನ ಮಹಿಮೆಯನ್ನು ಹೇಳುತ್ತೆ. ಬ್ರಹ್ಮಸೂತ್ರವು ಈ ಎಲ್ಲ ಪ್ರಮೇಯವನ್ನು ಸಾಧಿಸುತ್ತದೆ.

ವಿಶೇಷಾರ್ಥ ನಿರ್ದೋಷತ್ವವು ಬ್ರಹ್ಮಸೂತ್ರದ ಎರಡನೇ ಅಧ್ಯಾಯದ (ಅವಿರೋಧ ಅಧ್ಯಾಯದಿಂದ ಸಿದ್ಧವಾದ) ಪ್ರಮೇಯ. ಗುಣಪರಿಪೂರ್ಣತ್ವ (ಪ್ರಥಮಾಧ್ಯಾಯ (ಸಮನ್ವಯಾಧ್ಯಾಯ)ದ ಪ್ರಮೇಯ. ವೇದದ ಒಂದೊಂದು ಅಕ್ಷರ ಭಗವಂತನ ಒಂದೊಂದು ಗುಣಗಳನ್ನು ಪ್ರತಿಪಾದಿಸುತ್ತದೆ. ಅನಂತಾನಂತ ಅಕ್ಷರಗಳುಳ್ಳ ಅನಂತಾನಂತ ವೇದಗಳು ಭಗವಂತನ ಅನಂತಾನಂತ ಗುಣಗಳನ್ನು ಪ್ರತಿಪಾದಿಸುತ್ತವೆ

1) 'ನ ಸ್ಥಾನತೋಪಿ ಪರಸ್ಯೋಭಯಲಿಂಗಂ ಸರ್ವತ್ರ ಹಿ' ಎಂಬ ಸೂತ್ರದಲ್ಲಿ ಭಗವದ್ರೂಪಗಳಿಗೆ ಪರಪ್ಪರ ಭೇದ ಇಲ್ಲ. ಸರ್ವರೂಪೇ ಅಭೇದಯೆಂಬ ಪ್ರಮೇಯ ವಿದು.

2) ಭೇದವ್ಯಪದೇಶಾಚ್ಚಾನ್ಯಃ. 'ಶಾರೀರಶ ಉಭಯೇಪಿಹ್ಯಹಿಭೇದೇನೈನಮಧೀಯತೇ' 'ವಿಶೇಷಣಭೇದವ್ಯಪದೇಶಾಚ್ಚನೇತರೌ' 'ಸಂಪುಪ್ಯತ್ಕ್ರಾಂತ್ಯೋರ್ಭೇದೇನ' ಇತ್ಯಾದಿ ಸೂತ್ರಗಳು ಜೀವ ಬ್ರಹ್ಮರ ಭೇದಪ್ರತಿಪಾದಕಗಳು.
ಓಂ ಶಾಸ್ತ್ರಯೋನಿತ್ವಾತ್, ತತ್ತು ಸಮನ್ವಯಾತ್ ಇತ್ಯಾದಿ ಸೂತ್ರಗಳಲ್ಲಿ ಸರ್ವವೇದ ಪ್ರತಿಪಾದ್ಯತ್ವವು ಭಗವಂತನಿಗೆ ಸಿದ್ಧವಾಗುತ್ತದೆ.
'ಇಯದಾಮನನಾತ್' ಮನಪ್ರಾಣ ಉತ್ತರಾತ್' ಸೋಽಧ್ಯಕ್ಷೌ ತದುಪಾಗಮು ಎಂಬ ಸೂತ್ರಗಳಲ್ಲಿ ಮುಕ್ತರ ನೀಚೋಚ್ಚತೆಗಳು ವಿವರಿಸಲ್ಪಟ್ಟಿವೆ. "ವಿದ್ಯೈವನಿರ್ಧಾರಣಾತ್" ಎಂಬುದರಿಂದ ವಿದ್ಯೆಯಿಂದ ವಿಮುಕ್ತಿಯೆಂದು ಪ್ರತಿಪಾದಿತವಿದೆ.

॥೪೭॥ ॥೪೮॥

ತಸ್ಮಾದೇತದ್ವಿರುದ್ಧಂ ಯನ್ನೋಹಾರ್ಥಂ ತದುದಾಹೃತವ್
ತಸ್ಮಾದ್ಯೇಯೋ ಗುಣಾಃವಿಷ್ಣೋರ್ಗ್ರಾಹ್ಯಸ್ತೇಸರ್ವಏವಹಿ॥

ಇತ್ಯಾದ್ಯುಕ್ತಂ ಭಗವತಾ ಭವಿಷ್ಯತ್ಪರ್ವಣಿಸ್ಪುಟಮ್

ಅನ್ವಯಾರ್ಥ: ತಸ್ಮಾತ್-ಆದುದರಿಂದ, ಯತ್-ಯಾವ ವಾಕ್ಯವು, ವಿತದ್ವಿರುದ್ಧಂ-ಪೂರ್ವೋಕ್ತ ಪ್ರಮೇಯಗಳಿಗೆ ವಿರುದ್ಧಾರ್ಥವುಳ್ಳದ್ದೋ, ತದ್-ಅದು, ಮೋಹಾಯ-ವಿಪರೀತ ಜ್ಞಾನಕ್ಕೋಸ್ಕರ, ಉದಾಹೃತಂ-ಹೇಳಲ್ಪಟ್ಟಿದೆ. ತಸ್ಮಾತ್-ಆದುದರಿಂದ, ವಿಷ್ಣೋಃ-ಶ್ರೀವಿಷ್ಣುವಿಗೆ, ಯೇ-ಯಾವ, ಗುಣಾಃ-ಗುಣಗಳು ಹೇಳಲ್ಪಟ್ಟವೆಯೋ, ತೇ ಸರ್ವ ಏವ-ಆ ಎಲ್ಲಾ ಗುಣಗಳೂ, ಗ್ರಾಹ್ಯಾಃ ಹಿ-ಅಂಗೀಕಾರಾರ್ಹಗಳೇ, ಆಗಿವೆ. ಭಗವತಾ-ಭಗವಾನ್ ಶ್ರೀವೇದವ್ಯಾಸದೇವರಿಂದ, ಭವಿಷ್ಯತ್ ಪರ್ವಣಿ-'ಭವಿಷ್ಯತ್ ಪರ್ವ' ವೆಂಬ ಪುರಾಣದಲ್ಲಿ, ಸ್ಫುಟಂ--ಸ್ಪಷ್ಟವಾಗಿ, ಇತ್ಯಾದಿ ಹಿಂದೆ ಹೇಳಿದ ಪ್ರಮೇಯವು, ಉಕ್ತಂ-ಹೇಳಲ್ಪಟ್ಟಿದೆ.

ವಿಷ್ಣುವಿನ ಸರ್ವೋತ್ತಮತೆ, ಜೀವ ಬ್ರಹ್ಮರ ಭೇದ, ತಾರತಮ್ಯ ಇತ್ಯಾದಿ ಪೂರ್ವೋಕ್ತ. ಎಲ್ಲ ಪ್ರಮೇಯಗಳೂ ಅಂಗೀಕಾರ್ಯಗಳು. ಬ್ರಹ್ಮಸೂತ್ರ ಇದನ್ನು ಸ್ಪಷ್ಟವಾಗಿ ಸಾರುತ್ತದೆಯೆಂಬುದು ಹಿಂದೆಯೇ ತಿಳಿಸಲ್ಪಟ್ಟಿದೆ. ಈ ಪ್ರಮೇಯಗಳನ್ನು ಅಲ್ಲಗಳೆಯುವ ಪಾಶುಪತಾದಿಗಳು ಅಸುರ ಜನರ ವಿಪರೀತ ಜ್ಞಾನಕ್ಕಾಗಿ ನಿರ್ಮಿತಗಳು. ಸರ್ವಜ್ಞರಾದ ಶ್ರೀ ವೇದವ್ಯಾಸದೇವರೇ ಸಾಕ್ಷಾತ್ ಭವಿಷ್ಯತ್ ಪರ್ವದಲ್ಲಿ ಇದನ್ನು ಸ್ಪಷ್ಟಪಡಿಸಿದ್ದಾರೆ. 'ಋಗಾದಯಶ್ಚತ್ವಾರಃ' ಎಂಬಲ್ಲಿಂದ 'ತೇ ಸರ್ವವರ್' ಯೆನ್ನುವ ತನಕ ಎಲ್ಲಾ ಶ್ಲೋಕಗಳೂ ಭವಿಷ್ಯತ್‌ಪರ್ವದ ಶ್ಲೋಕಗಳು.

ವಾರಾಹ ಪುರಾಣದಲ್ಲಿ ಶ್ರೀಕೃಷ್ಣ ಭೂದ್ರನಿಗೆ ಹೇಳಿದ

॥೪೯॥ ॥೫೦॥

ಏಷವೈ ಮೋಹಂಸೃಜಾಮ್ಯಾಶುಯೋಜನಾನ್ಯೋಹಯಿಷ್ಯತಿ ।
ತ್ವಂಚ ರುದ್ರ ಮಹಾಬಾಹೋ ಮೋಹಶಾಸ್ತ್ರಾಣಿಕಾರಯ।
ಅತಥ್ಯಾನಿ ವಿತಥ್ಯಾನಿ ದರ್ಶಯಸ್ವ ಮಹಾಭುಜ ।
ಪ್ರಕಾಶಂ ಕುರು ಚಾತ್ಮಾನಮಪ್ರಕಾಶಂ ಚಮಾಂಕುರು
ಇತಿ ವಾರಾಹ ವಚನಂ

ಅನ್ವಯಾರ್ಥ ಮಹಾಬಾಹೋ ರುದ್ರ-ಶ್ರೇಷ್ಠ ಭುಜಗಳುಳ್ಳ ರುದ್ರನೇ, ಯಃ-ಯಾವನು, ಜನಾನ್-ದುಷ್ಟ ಜನರನ್ನು, ಮೋಹಯಿಷ್ಯತಿ-ವಿಪರೀತ ಜ್ಞಾನ ವುಳ್ಳವರನ್ನಾಗಿ ಮಾಡುತ್ತಾನೋ, ವಿಪಃ ಅಹಂ-ಅಂತಹ ನಾನು, ಅ-ಯಾವ ಮೋಹ-ನಟನೆಯನ್ನು, ವಚನೆಯನ್ನು, ಶ್ರುತಿ-ವೇಗನೆ, ಸೃಜಾಮಿ-ಉಂಟುಮಾಡುತ್ತೇನೆ, ತ್ವಂಚ-ನೀನಾದರೂ, ಮೋಹಶಾಸ್ತ್ರಾಣಿ-ವಿಪರೀತ ಜ್ಞಾನವನ್ನುಂಟುಮಾಡುವ ಗ್ರಂಥಗಳನ್ನು, ಕಾರಯ-ರಚಿಸು, ಹೇ ಮಹಾಭುಜ-ಎಲೋ ಭುಜಶಾಲಿಯಾದ ರುದ್ರನೇ, ಅತಥ್ಯಾನಿ-ಎಲ್ಲಿಯೂ ಇಲ್ಲದ ಅತ್ಯಂತ ಸುಳ್ಳಾದ ಲಿಂಗಮೂಲಾನ್ವೇಷಣೆ ಭಸ್ಮಧಾರಣೆಗಳನ್ನು ಹಾಗೂ ವಿತಥ್ಯಾನಿ-ಇಲ್ಲದೇ ಇರುವದನ್ನು. ದರ್ಶಯಾಸ್ವ-ತೋರಿಸು, ಆತ್ಮಾನಂ-ನಿನ್ನನ್ನು, ಪ್ರಕಾಶಂ-ಪ್ರಕಾಶನನ್ನಾಗಿ ಮಾಡು, ಮಾಂ-ನನ್ನನ್ನು ಅಪ್ರಕಾಶಂಚ-ಅಪ್ರಸಿದ್ಧನನ್ನಾಗಿ, ಕುರು-ಮಾಡು, ಇತಿ-ಇಷ್ಟು, ವಾರಾಹವಚನಂ-ವಾರಾಹ ಪುರಾಣದ ಉಕ್ತಿ ಇದೆ.

ತಾತ್ಪರ್ಯ ಮುಂದೆ ನಡೆಯಬೇಕಾದ ನಾಟಕದಲ್ಲಿ ನಾನು ಹೇಗೆ ಅಭಿನಯಿಸುತ್ತೇನೆ ಹಾಗೂ ನಿನ್ನ ಪಾತ್ರ ಯಾವುದು? ನೀನು ಹೇಗೆ ನಟಿಸಬೇಕು ಎಂಬ ಮಾರ್ಗದರ್ಶನವನ್ನು ತೆರೆಯ ಹಿಂದೆ ಶ್ರೀಕೃಷ್ಣ ರುದ್ರನಿಗೆ ನೀಡುತ್ತಿದ್ದಾನೆಯೆಂಬುದರ ಬಗೆ ವಾರಾಹ ಪುರಾಣದ ಸ್ಪಷ್ಟ ವಿವರಣೆ ಈ ರೀತಿಯಾಗಿ ನೀಡುತ್ತಿದೆ. ಎಲೋ ರುದ್ರ ಅಸುರೀ ಸ್ವಭಾವದ ಅಧಮ ಜೀವರಿಗೆ ವಿಪರೀತ ಜ್ಞಾನವನ್ನುಂಟು ಮಾಡಿ ಜ್ಞಾನ ಮಾರ್ಗದಿಂದ ಚ್ಯುತರನ್ನಾಗಿ ಮಾಡುವುದೇ ನನ್ನ ಉದ್ದೇಶ. ಅದಕ್ಕಾಗಿ ನಾನು ನನ್ನ ನಿಜ ಸ್ವರೂಪವನ್ನು ಮರೆಮಾಡುತ್ತೇನೆ. ನಾನು ಕೈಲಾಸ ಯಾತ್ರಾದಿ ಮಾಡಿ ನಿನ್ನ ಭೃತ್ಯನಂತೆ ನಟಿಸುತ್ತೇನೆ. ನೀನೂ ನನಗೆ ಸಹಾಯಕನಾಗು. ನೀನು ಸಮರ್ಥನಿರುವಿ. ಜನರಿಗೆ ಮೋಹಕವಾದ ಗ್ರಂಥಗಳ ರಚನೆಮಾಡಿ ನೀನು ಸುಳ್ಳಾದ ಲಿಂಗಧಾರಣೆ ಭಸ್ಮಧಾರಣೆ ಮಾಡಬೇಕು. ಅಪ್ರಾಮಾಣಿಕವಾದ ಲಿಂಗ ಮೂಲದ ಅನ್ವೇಷಣೆಯನ್ನು ನಿನ್ನ ಗ್ರಂಥದಲ್ಲಿ ಸೇರಿಸು. ನಿನಗಿಂತ ಸಂಪೂರ್ಣವಾಗಿ ವಿಪರೀತನಾದ ನನ್ನಲ್ಲಿ ಸಾರ್ವಜ್ಞಾದಿಗಳು ವಾಸ್ತವಾಗಿದ್ದರೂ, ಅವನ್ನೆಲ್ಲಾ ನಿನ್ನ ಅಸಾಧಾರಣ ಧರ್ಮವನ್ನಾಗಿ ಅಸುರೀ ಜನ ತಿಳಿಯುವಂತೆ ಮಾಡು. ಹೀಗೆ ಮಾಡುವದರಿಂದ ನಿನ್ನ ಪ್ರಸಿದ್ಧಿ ಲೋಕದಲ್ಲೆಲ್ಲ ಹಬ್ಬುತ್ತ ಕ್ರಮದಿಂದ ಜನ ನನ್ನನ್ನು

ಮಾಡಿಯುತ್ತಾರೆ. ಜ್ಞಾನ ಮಾರ್ಗದಿಂದ ಚ್ಯುತರಾಗುತ್ತಾರೆ. ಎಂಬುದಾಗಿ ವಾರಾಹ ಪುರಾಣದಲ್ಲಿ ಸ್ಪಷ್ಟವಾಗಿ ವಿಷ್ಣು ಸರ್ವೋತ್ತಮತ್ವಕ್ಕೆ ವಿರುದ್ಧವಾಗಿ ಹೇಗೆ ಜಗತ್ತಿನಲ್ಲಿ ಪ್ರಸಿದ್ಧವಾಯಿತು ಎನ್ನುವದಕ್ಕೆ ಪ್ರಮಾಣವಾಗಿದೆ.

॥೫೧॥ ॥೫೨॥ ಬ್ರಹ್ಮಾಂಡೋಕ್ತಂ ತಥಾಪರಂ ।
ಅವೇಹಾಯಗುಣಾಃವಿಷ್ಣೋರಾಕಾರಶ್ಚಿತ್ಚ್ಚರೀರತಾ
ನಿರ್ದೋಷತ್ವಂ ತಾರತಮ್ಯಂ ಮುಕ್ತಾನಾಮಪಿ ಚೋಚ್ಯತೇ।
ಏತದ್ವಿರುದ್ಧಂ ಯತ್ಸರ್ವಂ ತನ್ಮೋಹಾಯೇತಿನಿರ್ಣಯಃ

ಅನ್ವಯಾರ್ಥ ತಥಾ-ಹಾಗೆಯೇ, ಪರಂ–ಶ್ರೇಷ್ಠವಾದ, ಬ್ರಹ್ಮಾಂಡೋಕ್ತಂ–ಬ್ರಹ್ಮಾಂಡ ಪುರಾಣದ ವಚನವೂ ಇದೆ. ವಿಷ್ಣೋಃ-ವಿಷ್ಣುವಿನ, ಗುಣಾಃ–ಜ್ಞಾನಾನಂದಾದಿಗಳು, ವಿಷ್ಣೋಃ-ಶ್ರೀಹರಿಗೆ, ಚಚ್ಛರೀರತಾ-ಜ್ಞಾನಾನಂದಾತ್ಮಕ ಶರೀರವಿರುವ ತ್ತದೆ. ಇದೇ (ಚಿತ್ ಶರೀರಂ ಯಸ್ಯ ಭಾವಃ ಇತಿ ವಿಗ್ರಹಃ) ಆಕಾರಃ-ಭಗವಂತನ ಸ್ವರೂಪ, ಅವೇಹಾಯ ಉಚ್ಯತೇ–ಯಥಾರ್ಥ ಜ್ಞಾನಕ್ಕೋಸ್ಕರವೇಹೇಳಲ್ಪಡುತ್ತದೆ. ವಿಷ್ಣೋಃ ನಿರ್ದೋಷತ್ವಂ- ಭಗವಂತನ ನಿರ್ದೋಷತೆಯೂ, ಚ-ಮತ್ತು, ಮುಕ್ತನಾಮಪಿ–ಮುಕ್ತ ಜೀವರಿಗೂ, ತಾರತಮ್ಯಂ-ನೀಚೋಚ್ಚತೆಗಳವೆ ಎಂದೂ, ಅವೇಹಾಯ–ಯಥಾರ್ಥ ಜ್ಞಾನಕ್ಕಾಗಿ, ಉಚ್ಯತೇ-ಶಾಸ್ತ್ರಗಳಲ್ಲಿ ಹೇಳಲ್ಪಡುತ್ತಿದೆ. ಏತದ್ವಿರುದ್ಧಂ-ಈ ಪ್ರಮೇಯಕ್ಕೆ ವಿಪರೀತವಾದ ಅರ್ಥವು, ಯತ್-ಯಾವುದಿದೆಯೋ, ತತ್ಸರ್ವಂ-ಅವೆಲ್ಲಾ, ಮೋಹಾಯ-ವಿಪರೀತ ಜ್ಞಾನಕ್ಕೋಸ್ಕರ, ಇತಿ ನಿರ್ಣಯಃ -ಬ್ರಹ್ಮಾಂಡ ಪುರಾಣದ ಅತ್ಯುತ್ತಮ ಸಂದೇಶವು ಇದನ್ನೇ ಇನ್ನೂ ಸ್ಪಷ್ಟ ಪಡಿಸುತ್ತದೆ. "ಭಗವಂತನು ಗುಣಪೂರ್ಣನು ದೋಷಶೂನ್ಯನು. ಜ್ಞಾನಾನಂದಾತ್ಮಕವಾದ ಶರೀರವೇ ಆತನ ಸ್ವರೂಪ. ನಮ್ಮಂತೆ ಪ್ರಕೃತಿಪ್ರಭೃತಿ ನಿರ್ಮಿತ ಶರೀರ ಆತನದಲ್ಲ. ನೀಚೋಚ್ಚತೆ ಮುಕ್ತಿಯಲ್ಲೂ ಇದೆ. ಇದು ಎಲ್ಲಾ ಸತ್ಯವು. ಮೋಹಕ್ಕಾಗಿ ಹೇಳಿದ ಪ್ರಮೇಯ ಇದಲ್ಲ. ಸಜ್ಜನರ ಯಥಾರ್ಥ ಜ್ಞಾನಕ್ಕಾಗಿ ಶಾಸ್ತ್ರದಲ್ಲಿ ಇದನ್ನು ಒತ್ತಿ ಹೇಳಿದ್ದಾರೆ." ಇದುಬ್ರಹ್ಮಾಂಡ ಪುರಾಣದ ಸಂದೇಶ.

॥ ೫೨ ॥ ॥ ೫೩ ॥ ॥ ೫೪ ॥ ॥ ೫೫ ॥

ಸ್ಕಾಂದೇವ್ಯಕ್ತಂಶಿವೇನೈವಷಣ್ಮುಖಾಯೈವಸಾದರವ್ ।
ಶಿವಶಾಸ್ತ್ರೇಪಿ ತದ್ಗ್ರಾಹ್ಯಂ ಭಗವಚ್ಛಾಸ್ತ್ರಯೋಗಿಯತ್ ॥

ಪರವೋವಿಷ್ಣುರೇವೈಕಃತಜ್ಜ್ಞಾನಂವೋಕ್ಷ
ಸಾಧನವ್ ।
ಶಾಸ್ತ್ರಾಣಾಂನಿರ್ಣಯಸ್ತ್ವೇಷಃತದನ್ಯನ್ನೋಹ
ನಾಯು ಹಿ ॥
~~ಜ್ಞಾನಂ ವಿನಾ ತು ಯಾ ಮುಕ್ತಿಃ ಸಾವ್ಯಂ ಚಮುಮು~~
ವಿಷ್ಣುನಾ ।
ತೀರ್ಥಾದಿ ಮಾತ್ರತೋ ಜ್ಞಾನಂ ಮುಮೂಧಿಕ್ಯಂ ಚ
ವಿಷ್ಣುತಃ ॥

ಅಭೇದಶ್ಚಾಸ್ಯದಾದೀನಾಂಮುಕ್ತಾನಾಂಹರಿಣಾ ತಥಾ ।
ಇತ್ಯಾದಿಸರ್ವಂವೋಹಾಯಕಥ್ಯತೇಪುತ್ರನಾನ್ಯಥಾ ॥

ಅನ್ವಯಾರ್ಥ— ಸ್ಕಾಂದೇऽಪಿ-ಸ್ಕಾಂದಪುರಾಣದಲ್ಲೂ, ಶಿವೇನೈವ-(ತಂದೆಯಾದ) ರುದ್ರನಿಂದಲೇ, ಷಣ್ಮುಖಾಯೈವ-ಮಗನಾದ ಸುಬ್ರಹ್ಮಣ್ಯನಿಗೇನೇ, ಸಾದರಂ-ಆದರ ವುಳ್ಳದ್ದು ಹೇಗಾದೀತೋ ಹಾಗೆ, ಉಕ್ತಂ-ಹೇಳಲ್ಪಟ್ಟಿದೆ, ಯತ್-ಯಾವ ಅರ್ಥವು ಭಗವಶಾಸ್ತ್ರಯೋಗಿ-(ಭಗವತ್)-ಪರಮಾತ್ಮನ ಶ್ರೇಷ್ಠತೆಯನ್ನು ಹೇಳುವ, (ಶಾಸ್ತ್ರ)-ವೇದಾದಿ ಶಾಸ್ತ್ರಗಳ, (ಯೋಗಿ)-ಅನುಕೂಲವಾಗಿ ಸವಾನ ಅರ್ಥವುಳ್ಳದ್ದು, ಶಿವಶಾಸ್ತ್ರೇ–ಶೈವ ಶಾಸ್ತ್ರದಲ್ಲಿ, ಉಕ್ತಂ ಅಪಿ-ಹೇಳಲ್ಪಟ್ಟರೂ, ತದ್–ಆ, ಅರ್ಥವು, ಗ್ರಾಹ್ಯಂ-ಸ್ವೀಕಾರಾರ್ಹ, ವಿಷ್ಣುಃಏಕ ಏವ–ವಿಷ್ಣುವೊಬ್ಬನೇ, ಪರಮಃ-ಸರ್ವೋತ್ತಮನು, ತಜ್ಜ್ಞಾನಂ- ಅವನ ಸಾಕ್ಷಾತ್ಕಾರವೇ, ಮೋಕ್ಷ ಸಾಧನಂ-ಮೋಕ್ಷಕ್ಕೆ ಕಾರಣ

ವಿಷಃತು-ಇದೇ, ಶಾಸ್ತ್ರಾಣಾಂ-ಶಾಸ್ತ್ರಗಳ, ನಿರ್ಣಯಃ-ತೀರ್ಮಾನವೂ ಆಗಿದೆ, ತದನ್ಯತ್-ಇದಕ್ಕಿಂತ ವಿಪರೀತವಾದದ್ದು, ಮೋಹನಾಯಹಿ-ವಿಪರೀತ ಜ್ಞಾನಕೋಸ್ಕರ ಹೇಳಲ್ಪಟ್ಟದ್ದು, ಪುತ್ರ-ಎಲೋ ಪ್ರೀತಿಯ ಮಗನೇ, ಜ್ಞಾನಂ-ವಿಷ್ಣುವಿನ ಜ್ಞಾನದನ್ನು, ವಿನಾ-ಹೊರತು, ಮುಕ್ತಿಃ-ಮೋಕ್ಷವುಎಂಬಂತಹ, ಯಾ-ಯಾವ ವಾಕ್ಯವುವದತಿ ಹೇಳುತ್ತದೆಯೋ ಅದು; ಚ-ಮತ್ತು, ಮಮ-ನನಗೆ, (ರುದ್ರನಿಗೆ)ವಿಷ್ಣುನಾ-ವಿಷ್ಣುವಿನಿಂದ, ಸಾಮ್ಯಂ-ಸಾದೃಶ್ಯವಿದೆ, ತೀರ್ಥಾದಿ ಯಾತ್ರತಃ-ಕೇವಲ ತೀರ್ಥಯಾತ್ರೆಯಿಂದಲೇ, ಜ್ಞಾನಂ-ಭಗವಂತನ ಜ್ಞಾನ ಬರುತ್ತದೆ, ಚ-ಮತ್ತು, ವಿಷ್ಣುತಃ-ವಿಷ್ಣುವಿನ ದೆಸೆಯಿಂದ, ಮಮ-ನನಗೆ (ರುದ್ರನಿಗೆ), ಅಧಿಕ್ಯಂ-ಉತ್ಕರ್ಷವೂ ಇದೆ, ಅಸ್ಮದಾದೀನಾಂ-ನಮ್ಮೆಲ್ಲರಿಗೂ, ತಥಾ-ಹಾಗೆ, ಮುಕ್ತಾನಾಂ ಚ-ಮುಕ್ತ ಜೀವರಿಗೂ, ಹರಿಣಾ-ವಿಷ್ಣುವಿನಿಂದ, ಅಭೇದಃ-ಐಕ್ಯವಿದ, ಇತ್ಯಾದಿಸರ್ವಂ-ಈ ಎಲ್ಲಾ ವಾಕ್ಯ ಗಳೂ, ಮೋಹಾಯ-ವಿಪರೀತ ಜ್ಞಾನಕ್ಕಾಗಿ, ಕಥ್ಯತೇ-ಹೇಳಲ್ಪಡುತ್ತದೆ, ಅನ್ಯಥಾ-ಇದಕ್ಕೆ ವಿರುದ್ಧವಾಗಿ. ನ-ಇಲ್ಲ.

ತಾತ್ಪರ್ಯ— ಅತ್ಯ ಪೂರ್ವವೂ ಗಮನೀಯವೂ ಆಗಿ ನಡೆದ ಒಂದು ಘಟನೆ. ಪಿತನಾದ ಪಾರ್ವತೀ ಪತಿಯು ತನ್ನ ಪ್ರೇಮದ ಸುಪುತ್ರನಂದ ಸುಬ್ರಹ್ಮಣ್ಯನಿಗೆ ರಹಸ್ಯದಲ್ಲಿ ಆದರಾಭಿವಾನದಿಂದ ನೀಡಿದ ಸಂದೇಶ. ಎಲೋ ಸುಪುತ್ರನಾದ ಸುಬ್ರಹ್ಮಣ್ಯನೇ ವಿಷ್ಣುವೇ ಸರ್ವೋತ್ತಮ. ಅವನ ಜ್ಞಾನವೇ ಮೋಕ್ಷ ಸಾಧನ. ಶ್ರುತಿ ಶಾಸ್ತ್ರಗಳ ಶ್ರವಣ, ಮನನ, ಅಲ್ಲಿ ಹೇಳಿದಂತೆ ಪರಮಾತ್ಮನ ಉಪಾಸನೆಯೇ ಆತನ ಜ್ಞಾನಕ್ಕೆ ಕಾರಣ. ಇದೇ ಶಾಸ್ತ್ರಗಳ ಖಂತಿಮ ನಿರ್ಣಯ. ಇದಕ್ಕೆ ವಿಪರೀತವಾಗಿನವಗೂ (ರುದ್ರನಿಗೂ) ವಿಷ್ಣುವಿಗೂ ಸಾಮ್ಯವಾಗಲಿ ವಿಷ್ಣುಗಿಂತ ನನ್ನಲ್ಲಿ ಆಧಿಕ್ಯವನ್ನಾಗಲಿ ನನಗೂ ಹಾಗೂ ಮುಕ್ತರಿಗೂ ವಿಷ್ಣುವಿಗಿಂತ ಐಕ್ಯವನ್ನಾಗಲಿ ತೀರ್ಥಯಾತ್ರೆಯಿಂದಲೇ ಮೋಕ್ಷದಿಂದಾಗಲಿ ಜ್ಞಾನವಿಲ್ಲದನೇ ಮೋಕ್ಷವನ್ನಾಗಲಿ ಎಲ್ಲಿಯಾದರೂ ಹೇಳಿದ್ದರೆ ಅದು ಅಸುರೀ ಸ್ವಭಾವದ ಜನರಿಗೆ ವಿಪರೀತ ಜ್ಞಾನಕ್ಕಾಗಿಯೆಂದು ಭಾವಿಸು. ಇದರಲ್ಲಿ ಸಂಶಯವಿಲ್ಲ. ಇದಕ್ಕಿಂತ ವಿಪರೀತ ಭಾವನೆ ಸಲ್ಲದು, ಪಿತೃಪುತ್ರರ ಈ ಪ್ರೇಮ ಸಂವಾದದಿಂದ ರುದ್ರನಿಗೂ ಸಮ್ಮತವಾದ ಸಿದ್ಧಾಂತ ಸ್ಪಷ್ಟವಾಗಿದೆ:

॥ ೫೬ ॥ ॥ ೫೭ ॥ ॥ ೫೮ ॥

ಉಕ್ತಂ ಪದ್ಮಪುರಾಣೇಚ ಶೈವ ಏವ ಶಿವೇನತು ।
ಯದುಕ್ತಂ ಹರಿಣಾ ಪೂರ್ವಮುಮಾಯೈ ಪ್ರಾಹ
ತದ್ಧರಃ ॥
ತ್ವಾವಮಾರಾಧ್ಯತಥಾಶಂಭೋಗೃಹೀಷ್ಯಾಮಿವರಂಸದಾ
ದ್ವಾಪರಾದೌ ಯುಗೇ ಭೂತ್ವಾ ಕಲಯಾ ಮಾನು
ಷಾದಿಷು ॥

ಸ್ವಾಗಮೈಃಕಲ್ಪಿತೈಸ್ತ್ವಂಚಜನಾನ್ಮದ್ವಿ
ಮುಖಾನ್ಕುರು ।
ಮಾಂಚಗೋಪಯಯೋನಸ್ಯಾತ್ಸೃಷ್ಟಿರೇಷೋತ್ತ
ರಾಧರಾ ।

ಅನ್ವಯಾರ್ಥ— ಶೈವೇ:-ಶಿವ ಪ್ರತಿಪಾದಕವಾದ, ಪದ್ಮಪುರಾಣೇಚವಿವ-ಪಾದ್ಮ ಪುರಾಣದ ಪೂರ್ವ ಖಂಡದಲ್ಲಿಯೇ, ಶಿವೇನತು-ರುದ್ರನಿಂದಲೇ, ಉಕ್ತಂಚ-ಇದೇ ಪ್ರಮೇಯವು ಹೇಳಲ್ಪಟ್ಟಿದೆ. ಹರಿಣಾ-ಶ್ರೀ ವಿಷ್ಣುವಿನಿಂದ, ಪೂರ್ವಂ-ಹಿಂದೆ, ಯತ್-ಯಾವ ಮಾತು, ಉಕ್ತಂ-ರುದ್ರನನ್ನು ಕುರಿತು ಹೇಳಲ್ಪಟ್ಟಿದೆಯೋ, ತದ್-ಅದೇ ಮಾತನ್ನು, ಹರ:-ರುದ್ರನು, ಉಮಾಯೈ-ಪಾರ್ವತಿಗಾಗಿ, ಪ್ರಾಹ-ಹೇಳಿದನು.

(ಶ್ರೀ ಕೃಷ್ಣನ ಮಾತು ರುದ್ರನಿಗಾಗಿ) ಶಂಭೋ-ಎಲೋ ರುದ್ರನೇ. ದ್ವಾಪರಾದೌ-ದ್ವಾಪರವೇಮುಂತಾದ, ಯುಗೇ-ಯುಗದಲ್ಲಿ, ಮಾನುಷಾದಿಷು-ಮನುಷ್ಯ ಮುಂತಾದ ವರ್ಗದಲ್ಲಿ, ಕಲಯಾ-ಸ್ವರೂಪ ಅಂಶದಿಂದ,' ಭೂತ್ವಾ-ಅವತರಿಸಿ, ತ್ವಾಂ-ನಿನ್ನನ್ನು. ಸದಾ-ಯಾವಾಗಲೂ, ಆರಾಧ್ಯ-ಪೂಜಿಸಿ, ತಥಾ-ಹಾಗೆಯೆ (ಮೋಕ್ಷಕ್ಕಾಗಿಯೇ) ವರಂ-ವರವನ್ನು.ಗ್ರಹೀಷ್ಯಾಮಿ-ಸ್ವೀಕರಿಸುತ್ತೇನೆ, ಕಲ್ಪಿತೈಃ-ಕಪೋಲ ಕಲ್ಪಿತ ವಸ್ತುಗಳನ್ನು ಹೇಳುವ, ಸ್ವಾಗಮೈಃ-ನಿನ್ನಿಂದ ರಚಿತ

ವಾವ ಗ್ರಂಥಗಳಿಂದ, ಜನಾನ್ ಜೀವರನ್ನು, ಮದ್ವಿಮುಖಾನ್-ನನ್ನಲ್ಲಿ ಭಕ್ತಿ ರಹಿತರನ್ನಾಗಿ, ಕುರು-ಮಾಡು, ಮಾಂ-ನನ್ನನ್ನು, ಗೋಪಯ-ಮರೆಮಾಡು, ಯೇನ-ಹೀಗೆ ಮಾಡುವುದರಿಂದ, ಏಷಾ-ಈ ಅಸುರಸೃಷ್ಟಿಯು, ಉತ್ತರಾಧರಾ-ಈಗಸವಿೋಚಿನಮಾರ್ಗಗಾಮಿಯಾಗಿದ್ದರೂ, ಮುಂದೆ ಅಪನಾರ್ಗಪ್ರವೃತ್ತಿಯುಳ್ಳದ್ದು ಆಗುತ್ತದೆ.

ಪದ್ಮ ಪುರಾಣದಲ್ಲಿ ಎರಡು ಭಾಗವಿದೆ. ಪೂರ್ವ ಭಾಗ ವೇದ ಪಂಚರಾತ್ರಗಳಿಗೆ ವಿರುದ್ಧ ಅರ್ಥ ಪ್ರತಿಪಾದಕವಾದುದರಿಂದ ಅದು ಪೂರ್ವಪಕ್ಷ ಭಾಗವೆಂದು ಕರೆಯಲ್ಪಡುತ್ತದೆ. ಉತ್ತರಾರ್ಧವು ವೇದಾರ್ಥವಾದುದರಿಂದ ಅದನ್ನು ಸಿದ್ಧಾಂತ ಭಾಗವೆನ್ನುತ್ತಾರೆ. ಅದರಲ್ಲಿ ಪೂರ್ವ ಶೈವ ಅಧಿಕ್ಯ ಪರ. ಆ ಪೂರ್ವ ಪಕ್ಷ ಪೂರ್ವಾರ್ಧದಲ್ಲಾವಿಷ್ಣ್ವಧಿಕ್ಯವು ಶಿವ ಪಾರ್ವತಿಯರ ಸಂವಾದದಿಂದ ತಿಳಿದು ಬರುತ್ತದೆ. ಶ್ರೀ ಹರಿಯು ಹಿಂದೆ ರುದ್ರನಿಗೆ ಹೇಳಿದ ಮಾತನ್ನು ರುದ್ರನು ತನ್ನ ಪ್ರೀತಿಯು ಸತಿಯಾದ ಪಾರ್ವತಿಗೆ ಅಕ್ಷರಶಃ ಅನುವಾದ ಮಾಡುತ್ತಾನೆ. "ಶ್ರೀ ಕೃಷ್ಣ-ರುದ್ರರ ಸಂಭಾಷಣೆ". ಎಲೋ ಶಂಭೋ! ನಾನು ನನ್ನ ಸ್ವರೂಪ ಅಂಶದಿಂದಲೇ ಮನುಷ್ಯಾದಿ ವರ್ಗದಲ್ಲಿ ಅವತರಿಸುತ್ತೇನೆ. ಕೈಲಾಸ ಯಾತ್ರಾದಿಗಳನ್ನು ಮಾಡುತ್ತಾ ನಿನ್ನ ಪೂಜೆಯನ್ನು ಮಾಡುತ್ತೇನೆ. ನಿನ್ನಿಂದ ವರಪನ್ನು ಸ್ವೀಕರಿಸುತ್ತಾ ಇರುತ್ತೇನೆ. ನೀನೂ ಸುಳ್ಳು ಪೊಳ್ಳುಗಳನ್ನು ಪೋಣಿಸಿ ಗ್ರಂಥವನ್ನು ರಚಿಸು ಅಸುರ ಪ್ರಪಂಚ ಇದರಿಂದ ಮೋಹವನ್ನು ಅನುಭವಿಸುತ್ತದೆ. ನನ್ನನ್ನು ಸರ್ವೋತ್ತಮನನ್ನಾಗಿ ತಿಳಿದ ಈ ಅಸುರ ವರ್ಗ ನನ್ನಿಂದ ವಿಮುಖವಾಗಿ ದೂರ ಸರಿಯುತ್ತದೆ. ಹೀಗೆ ಕ್ರಮೇಣ ಉತ್ತಮ ಮಾರ್ಗದಲ್ಲಿ ನಡೆಯುತ್ತಿದ್ದ ಈ ಅಸುರ ಪ್ರಪಂಚ ಅಧಮ ಮಾರ್ಗಗಾಮಿಯಾಗಿ ಅಧಃ ಪಾತವನ್ನನುಭವಿಸುತ್ತದೆ. ನೀನೂ ಅವರ ವಿವರೀತ ಜ್ಞಾನಕ್ಕಾಗಿ ನನ್ನ ಉತ್ತಮತೆಯನ್ನು ಮರೆಮಾಡು. ನನ್ನ ನಾಮಾರ್ಥ ಅವರಿಗೆ ತಿಳಿಯದಂತೆ ಮಾಡು ಎಂಬುದಾಗಿ ಶ್ರೀ ಕೃಷ್ಣ ರುದ್ರನಿಗೆ ಈ ಮಾತನ್ನು ಹೇಳಿದ. ಇದನ್ನು ರುದ್ರ ಅಕ್ಷರಶಃ ತನ್ನ ಪ್ರೇಮದ ಮಡದಿ ಗೌರಿಗೆ ನುಡಿದ.

॥ ೫೯ ॥

ನ ಚ ವೈಷ್ಣವ ಶಾಸ್ತ್ರೇಷು ವೇದೇಷ್ವಪಿ ಹರೇಃ ಪರಃ

ಕ್ವಚಿದುಕ್ತೋऽನ್ಯ ಶಾಸ್ತ್ರೇಷು ಪರಮೋ ವಿಷ್ಣುರೀರಿತಃ॥

ಅನ್ವಯಾರ್ಥ— ವೈಷ್ಣವಶಾಸ್ತ್ರೇಷು-ವಿಷ್ಣು ಸರ್ವೋತ್ತಮತ್ವ ಪ್ರತಿಪಾದಕ ಶಾಸ್ತ್ರಗಳಲ್ಲಿ, ವೇದೇಷ್ವಪಿ-ಶ್ರುತಿಗಳಲ್ಲಿಯೂ, ಕ್ವಚಿತ್-ಯಾವ ಭಾಗದಲ್ಲೂ, ಹರೇಃ ಪರಃ-ಭಗವಂತನಿಗಿಂತ ಉತ್ತಮನಾದವನು, ನ ಚ ಉಕ್ತಃ-ಹೇಳಲ್ಪಡಲಿಲ್ಲ. ಅನ್ಯಶಾಸ್ತ್ರೇಷು-ಇತರ ಶೈವ ಗ್ರಂಥಗಳಲ್ಲಿ, ಪರಮೋ ವಿಷ್ಣುಃ ಈರಿತಃ-ವಿಷ್ಣುವೇ ಸರ್ವಶ್ರೇಷ್ಠನೆಂದು ಹೇಳಲ್ಪಟ್ಟಿದ್ದೂ ಇದೆ.

ವೇದ ವೈಷ್ಣವ ಗ್ರಂಥಗಳಲ್ಲಿ ವಿಷ್ಣು ಸರ್ವೋತ್ತಮತ್ವವನ್ನೇ ಸೂಚಿಸಿದ್ದಾರೆ. ಇತರರಿಗೆ ಸರ್ವಾಗ್ರಗಣ್ಯತೆಯನ್ನು ಹೇಳಿಲ್ಲ. ಆದರೆ ಶೈವ ಗ್ರಂಥಗಳಲ್ಲಿ ರುದ್ರ ಶ್ರೇಷ್ಠತೆಯನ್ನು ಹೇಳಿದಂತೆ ವಿಷ್ಣುವಿನ ಸರ್ವೋತ್ಕರ್ಷವನ್ನು ಅಲ್ಲಲ್ಲಿ ಉಲ್ಲೇಖಿಸಿದ್ದಾರೆ. ಇದರಿಂದ ವಿಷ್ಣು ಸರ್ವೋತ್ತಮತ್ವವು ಶೈವ ವೈಷ್ಣವ ಉಭಯ ಸಮ್ಮತವಾದುದರಿಂದ ಸರ್ವರಿಂದಲೂ ಸ್ವೀಕಾರಾರ್ಹವೆಂದು ತಿಳಿಯಬೇಕಾಗುತ್ತದೆ. ಶಿವ ಸರೋತ್ತಮತ್ವಾದಿಗಳು ಅಪ್ರಮಾಣಕವೆಂದು ಸಿದ್ಧವಾಯಿತು.

॥ ೬೦ ॥

ನಿರ್ದೋಷತ್ವಾಚ್ಚವೇದಾನಾಂವೇದೋಕ್ತಂಗ್ರಾಹ್ಯ
ಮೇವ ಹಿ ।
ವೇದೇಷ್ವಪಿ ಪರೋ ವಿಷ್ಣುಃಸರ್ವಸ್ಮಾದುಚ್ಯತೇ ಸದಾ ॥

ಅನ್ವಯಾರ್ಥ— ವೇದಾನಾಂ-ಶ್ರುತಿಗಳಿಗೆ, ನಿರ್ದೋಷತ್ವಾತ್-ಯಾವ ದೋಷವೂ ಇಲ್ಲವಾದುದರಿಂದ, ವೇದೋಕ್ತಂ-ವೇದದಲ್ಲಿ ಹೇಳಿದ ಪ್ರಮೇಯವು, ಗ್ರಾಹ್ಯಮೇವ ಹಿ-ಸರ್ವದಾ ಸ್ವೀಕಾರ್ಯವಾಗಿದೆ, ವೇದೇಷ್ವಪಿ-ವೇದಗಳಲ್ಲಿಯೂ, ವಿಷ್ಣುಃ-ವಿಷ್ಣುವು, ಸರ್ವಸ್ಮಾತ್-ಎಲ್ಲರಿಗಿಂತಲೂ, ಪರಃ-ಉತ್ತಮನೆಂದು, ಸದಾ-ಯಾವಾಗಲೂ, ಉಚ್ಯತೇ-ಹೇಳಲ್ಪಡುತ್ತದೆ.

ವಾಕ್ಯವನ್ನು ಯಾವನು ಸ್ವತಂತ್ರವಾಗಿ ಪ್ರಯೋಗ ಮಾಡುತ್ತಾನೋ, ಅವನಲ್ಲಿ ದೋಷ ಇದ್ದರೆ ವಾಕ್ಯದಲ್ಲಿ ದೋಷ ಬರುತ್ತೆ. ಸ್ವತಃ ವಾಕ್ಯವುದುಷ್ಟವಲ್ಲ. ವೇದವು ಪೌರುಷೇಯ ಅಂದರೆ ಕರ್ತೃ ನಿರ್ಮಿತವಲ್ಲ. ಆದುದರಿಂದ ಪುರುಷನ

ಅಜ್ಞಾನಮೂಲಕವಾದ ಯಾಜ ದೋಷಕ್ಕೂ ವೇದದಲ್ಲಿ ಅವಕಾಶವಿಲ್ಲ.ಆದುದ ರಿಂದಲೇ ವೇದೋಕ್ತ ವಿಷ್ಣು ಸರ್ವೋತ್ಕೃಷ್ಟತ್ವವೇ ಸ್ವೀಕಾರಾರ್ಹವೆಂದು ಸಿದ್ಧ ವಾಯಿತು.

॥ ೬೧ ॥

ಅಸ್ಯದೇವಸ್ಯಮೀಳ್ಹುಷೋವಯಾವಿಷ್ಣೋರೇಷಸ್ಯ
ಪ್ರಭೃಥೇ ಹವಿರ್ಭಿಃ ।
ವಿಧೇಹಿರುದ್ರೋರುದ್ರಿಯಂಮಹಿತ್ವಂಯಾಸಿಷ್ಟಂ
ವರ್ತಿರಶ್ವಿನಾವಿರಾವತ್ ॥

ಅನ್ವಯಾರ್ಥ— ಅಸ್ಯ-ಎಲ್ಲರಿಗಿಂತಲೂ ಭಿನ್ನವಾದ್ದರಿಂದ ಆಕಾರ ಶಬ್ದವಾಚ್ಯ ನಾದ, ದೇವಸ್ಯ-ಕ್ರೀಡಾದಿ ಸಕಲ ಗುಣವುಳ್ಳ, ಮೀಳ್ಹುಷಃ-ಭಕ್ತರಿಗೆ ಇಷ್ಟಾರ್ಥ ವನ್ನು ನೀಡುವ, ವಿಷ್ಣೋಃ-ವಿಷ್ಣುವಿಗೆ, ಹವಿರ್ಭಿಃ-ಯಜ್ಞದ ಹವಿಸ್ಸಿನಿಂದ, ಪ್ರಭೃಥೇ-ಸರಿಯಾಗಿ ಆರಾಧನೆ ನಡೆಯುತ್ತಿರಲು, ವಯಾಃ-ಬಂಧಕನಾದ ರುದ್ರನು, ರುದ್ರಿಯಂ-ರುದ್ರ ಸಂಬಂಧಿಯಾದ, ಮಹಿತ್ವಂ-ರುದ್ರ ಪದವಿ ಪ್ರಭೃತಿ ಮಹಿಮೆ ಯನ್ನು, ವಿಧೇಹಿ-ಹೊಂದಿದನು, ಅಶ್ವಿನಾ-ಎಲೋ ಅಶ್ವಿನಿದೇವತೆಗಳೇ, ವಿರಾವತ್-ಯಜ್ಞೀಯ ಹವಿಸ್ಸಿನಿಂದ ಕೂಡಿದ, ವರ್ತಿಃ-ಇರುವಿಕೆಯನ್ನು, (ರುದ್ರನಂತೆ ವಿಷ್ಣು ವಿನ ಆರಾಧನೆಯಿಂದಲೇ,) ಯಾಸಿಷ್ಟಂ-ಹೊಂದಿದ್ದೀರಿ;

ಅಂಹಕಾರ ತತ್ತ್ವಕ್ಕೆ ಅಭಿಮಾನಿ ದೇವತೆ ರುದ್ರ. ಅದುದರಿಂದ ಅಹಂಕಾರಾದಿಗಳನ್ನು ಉಂಟುಮಾಡಿ ಎಲ್ಲಾ ಜೀವರಿಗೂ ಬಂಧಕ. ಇಂತಹ ರುದ್ರ ನು ಕೂಡಾ ಯಜ್ಞಾದಿಗಳಲ್ಲಿ ವಿಷ್ಣುನಿಗೆಹವಿಸ್ಸನ್ನರ್ಪಿಸಿಯೇ ಇತರರಿಗೆದುರ್ಲಭವಾದ ರುದ್ರ ಪದವಿಯನ್ನು ಗಿಟ್ಟಿಸಿಕೊಂಡು ವಿಷ್ಣುವಿನ ಆರಾಧನೆಯಿಂದ ಉಂಟಾದವು ನಾದರಿಂದಲೇ ಮುಂದಿನ ಕಲ್ಪದಲ್ಲಿ ಶೇಷ ಪದವಿಯನ್ನು ಅಲಂಕರಿಸುತ್ತಾನೆ. ಎಲೈ ಅಶ್ವಿನಿ ದೇವತೆಗಳೇ ಜಿವನಿಗಿಂತಲೂ ಯೋಗ್ಯತೆಯಲ್ಲಿ ಅಧಮರಾದ ನೀವೂ ವಿಷ್ಣುವಿನ ಆರಾಧನೆಯಿಂದಲೇ ಲಬ್ಧವಾದ ಯಜ್ಞದ ಹವಿಸ್ಸಿನಿಂದ ನಿಮ್ಮ ಸತ್ತ್ವ ದನ್ನು ಹೊಂದಿದ್ದೀರಿ. ವಿಷ್ಣುವು ಸರ್ವಜಗದ್ವಿಲಕ್ಷಣ ಕ್ರೀಡಾದಿಗುಣ ವಿಶಿಷ್ಟ. ಭಕ್ತ

ರಿಗೆ ಅಭಿಲಷಿತವಾದ ಸಕಲಪುರುಷಾರ್ಥವನ್ನು ಕೊಡುವವ.

ವಿಶೇಷಾಂಶ— 1) ಅಸ್ಮ-ಅ ಭಗವಂತನು ನಿಮ್ಮಂತೆ ಅಲ್ಲ. ಪನ್ನಂತೆ ಅಲ್ಲ. ರುದ್ರನಂತೆಯೂ ಅಲ್ಲ. ಅವನು ಪೂರಂತೆಯೂ ಅಲ್ಲ. ಸಕಲ ಜಗದ್ವಿಲಕ್ಷಣ ಸರ್ವೋತ್ತಮ. ಆದುದರಿಂದ ಅವನನ್ನು 'ಅ' ಶಬ್ದದಿಂದ ಕರೆಯುತ್ತಾರೆ.

2) ವೀಳ್ಟಾಪೇ-ವಿಹ-ಸೇಚನೆ ಎಂಬ ಧಾತುವಿನಿಂದ ಉಂಟಾದ ಶಬ್ದ. ಸೇಚನೆ ಮಾಡತಕ್ಕವರೆಂದು ಅರ್ಥ ಕೊಡುತ್ತದೆ. ಭಕ್ತಾಭೀಷ್ಟ ಸೇಚಕ ಎಂಬ ಅರ್ಥ ಕೊಡುತ್ತೆ.

3) ಪಯಾ-ಪಯ ಬಂಧನೆ ಎಂಬ ಧಾತುವಿನಿಂದ ಈ ಶಬ್ದ ಬಂಧಕ ಎಂಬ ಅರ್ಥ ಕೊಡುತ್ತೆ.

4) ಪ್ರಭೃಥೇ-ಪ್ರಕರ್ಷದಿಂದ ಭೃಥ-ಹೊಟ್ಟೆಯು ಭರಣೆ ಪೂರಣ ಅಂದರೆ ಆರಾಧನೆ ನಡೆಯುತ್ತಿರಲಾಯೆನ್ನುವ ಅರ್ಥ ಸಿಗುತ್ತೆ.

5) ಇರಾ-ಅನ್ನ "ಇರೇತಿ ಅನ್ನನಾಮ" ಎಂಬುದು ವೇದ ವಾಕ್ಯದಿಂದ ಸಿದ್ಧ. ಅಂದರೆ ಯಜ್ಞದಲ್ಲಿ ಸಿಗತಕ್ಕ ಹವಿಸ್ಸು. ಇರಾವತ್-ಹವಿಷ್ವನ್ನವುಳ್ಳ; ವರ್ತಿಃ- ವೃತು-ವರ್ತನೆ ಎಂಬ ಧಾತುವಿನಿಂದ ಉಂಟಾದ ಸಕಾರಾಂತ ಶಬ್ದ ವರ್ತಿಃ ವರ್ತನೆ ಎಂದರ್ಥ.

॥ ೬೨ ॥

ಸ್ತು ಹಿ ಶ್ರುತಂಗರ್ತಸದಂಯುವಾನಂ ವೃಗನ್ನಭೀವುವುಪ
ಹತ್ನುವುಗ್ರವ್ ।

ಇದು ಋಗ್ವೇದದ 2ನೇ ಮಂಡಲದ ರುದ್ರದೇವತಾಕ 33ನೆಯ ಸೂಕ್ತದಲ್ಲಿ 11ನೆಯ ಮಂತ್ರ. ಇದರಲ್ಲಿ ಪೂರ್ವಾರ್ಧವನ್ನು ಮಾತ್ರ ಆಚಾರ್ಯರು ಉದಾಹರಿಸಿದ್ದಾರೆ ಇದರ ಸಂಪೂರ್ಣ ಮಂತ್ರ ಹೀಗಿದೆ.

"ಸ್ತು ಹಿ ಶ್ರುತಂ. . . . . ವುಗ್ರವ್"
ವೃಳಾ ಜರಿತ್ರೋ ರುದ್ರ ಸ್ತವಾನೋನ್ಯಂ ತೇ ಅಸ್ಮನ್ನಿವಪಂತು
ಸೇನಾಃ ॥

ಅನ್ವಯಾರ್ಥ— ರುದ್ರ-ಎಲೋ ರುದ್ರನೇ, ಗರ್ತಸದಂ-ಹೃದಯ ಗುಹೆಯಲ್ಲಿ ವಾಸವಾಡಿ ಕೊಂಡಿರುವ, ಮೃಗಂ ನ-ಮೃಗರಾಜನಾದ ಸಿಂಹವನ್ನೆಂಬಂತೆ, ಭೀಷಂ-ಭಯಂಕರನಾದ, ಯುವಾನಂ-ನಿತ್ಯ ತರುಣನಾದ, (ಜನ್ಮಜರಾ ಮರಣಗಳಿಗೊಳಗಾಗದ) ಉಪಹಂತ್ನು-(ಉಪ)-ಕೊಲ್ಲಲು ಉಪಕರಣವಾದ [ಯೋಗ್ಯವಾದ] ಶತ್ರುವನ್ನು, ಹಂತುಂ-ಕೊಲ್ಲಶಕ್ತಂತಹ, ಶ್ರುತಂ-ವೇದ ಪ್ರತಿಪಾದ್ಯನಾದ, ಉಗ್ರಂ ಶತ್ರುಭಯಂಕರ ನೃಸಿಂಹನನ್ನು, ಸ್ತುಹಿ-ಸ್ತೋತ್ರ ಮಾಡು, ಸ್ತವಾನಃ-ನೃಸಿಂಹನ ಸ್ತುತಿಸುವ ನೀನು ಜರಿತ್ರೇ-ನಿನ್ನಿಂದ ಸ್ತುತ್ಯನಾದ ನೃಸಿಂಹನನ್ನು ಸ್ತೋತ್ರ ಮಾಡುವ ನನಗೆ, ಮೃಳಾ-ಕರ್ಪಕನಾಗು, ತೇ-ನಿನ್ನ, ಸೇನಾಃ-ಭೂತಪ್ರೇತಪಿಶಾಚಾದಿ ಸೈನ್ಯವು, ಆಸ್ಮತ್-ನಮಗಿಂತ, ಅನ್ಯಂ-ವಿಪರೀತವಾದ ದುಷ್ಟರನ್ನು, ನಿವಪಂತಃ-ಚೆನ್ನಾಗಿ ನಾಶಮಾಡಲಿ

~~ನೃಸಿಂಹನು ಸ್ತಂಭದಿಂದ ಪ್ರಾದುರ್ಭೂತನಾದ. ಕೋಪದ ಆವೇ~~ ಶದಿಂದ ಸಿಕ್ಕ ಸಿಕ್ಕವರಿಗೆಲ್ಲಾ ಮಾರಕನಾಗಲಿಲ್ಲ. ಭಕ್ತನಾದ ಪ್ರಲ್ಹಾದನನ್ನು ಪೊರೆದ. ಕದನಕ್ಕೆ ಉಪನಿನ್ನನಾದ ಹಿಡಣ್ಯ ಕಶಿಪುವನ್ನೇ ತನ್ನ ಸವಿೀಪದ ಅಂಕ ದಲ್ಲಿಟ್ಟು ಕೊಂದ ಶ್ರೀ ನೃಸಿಂಹ. ಶತ್ರುವಿಗೆ ಮಹಾಭಯಂಕರ. ಆದ್ದರಿಂದಲೇ ಮೃಗರಾಜನಾದ ಸಿಂಹದ ಸಾದೃಶ್ಯ. ನೃಸಿಂಹರೂಪಿಯಾದ ಭಗವಂತನು ನಿತ್ಯ ಯುವಕನು. ಆದುದರಿಂದಲೇ ಜರಾ ಜನಿ ಮರಣಗಳ ಪೀಡೆ ಈತನನ್ನು ಬಾಧಿಸದು. ಎಲೋ ರುದ್ರನೇ! ಅಂತರ್ನಿಯಾಮಕನಾಗಿ ನಿನ್ನ ಹೃದಯ ಗುಹೆಯಲ್ಲಿ ಮನೆ ಮಾಡಿದ ನೃಸಿಂಹನಿಗೆ ಸ್ತುತಿ ಸೇವೆಗಳನ್ನು ಸದಾ ಸಲ್ಲಿಸುತ್ತಿ. ರುದ್ರನೇ ನೃಸಿಂಹ ಆರಾಧಕನಾದ ನೀನು ನನ್ನ ರಕ್ಷಣೆಯ ಭಾರ ಹೊರಬೇಕು. ನನ್ನ ಭಗವದಾರಾಧನೆಗೆ ವಿರೋಧಿಗಳಾದವರನ್ನು ನಿನ್ನ ಭೂತಪ್ರೇತಾದಿ ಸಕಲ ಪರಿವಾರದಿಂದ ಸಂಹರಿಸುವಂತೆ ಮಾಡು.

॥ ೬೩ ॥

ಯುಂಕಾಮುಯೇತಂತವುಗ್ರಂಕೃಣೋಮಿತಂಬ್ರಹ್ಮಾ
ಣಾಂತವೃಷಿಂತಂಸುಮೇಧಾವತ್ ।

ಅನ್ವಯಾರ್ಥ— ಯುಂ-ಯಾರನ್ನು, ಉಗ್ರಂ-ರುದ್ರನನ್ನಾಗಿ, ಕಾಮುಯೇ-ಮಾಡ ಬಯಸುತ್ತೇನೋ, ತಂ-ಅವನನ್ನು, ಉಗ್ರಂ-ರುದ್ರನನ್ನಾಗಿ, ಕೃಣೋಮಿ-ಯ-

ಬ್ರಹ್ಮಾಣಂ ಕೃಣೋಮಿ—ಅವನನ್ನು ಚತುರ್ಮುಖನನ್ನಾಗಿ ಮಾಡುತ್ತೇನೆ, ಯಂ ಬ್ರಹ್ಮಾಣಂ ತಾವಯೇ-ಯಾರನ್ನು ಬ್ರಹ್ಮನನ್ನಾಗಿ ಮಾಡಬಯಸುತ್ತೇನೋ. ತಂ ಋಷಿಂ ತಾವಯೇ—ಯಾರನ್ನು ಋಷಿಯನ್ನಾಗಿ ಮಾಡಬಯಸುತ್ತೇನೋ, ತಂ ಋಷಿಂ ಕೃಣೋಮಿ—ಅವನನ್ನು ಋಷಿಯನ್ನಾಗಿ ಮಾಡುತ್ತೇನೆ, ಯಂ ಸುಮೇಧಾಂ-ತಾವಯೇ—ಯಾರನ್ನು ಒಳ್ಳೆಯ ಜ್ಞಾನಿಯನ್ನಾಗಿ ಮಾಡಬಯಸುತ್ತೇನೋ, ತಂ ತಂ ಸುಮೇಧಾಂ ಕೃಣೋಮಿ-ಅವನನ್ನು ಒಳ್ಳೆಯ ಜ್ಞಾನಿಯನ್ನಾಗಿ ಮಾಡುತ್ತೇನೆ.

ಈ ಹಿಂದೆ ಈ ಅಂಭೃಣೀ ಸೂಕ್ತದ ಹಿಂದಿನ ಮಂತ್ರದ ಋಕ್‌ಗಳಿಗೆ ಅರ್ಥ ವಿವರಣೆ ಮಾಡಿದ್ದೇವೆ. ಆದುದರಿಂದ ಇಲ್ಲಿ ಈ ಋಕ್‌ದ ಅರ್ಥ ಮಾತ್ರ ಬರೆಯಲ್ಪಟ್ಟಿದೆ.

ತಾತ್ಪರ್ಯ— ಶ್ರೀ ಹರಿಯ ಅರ್ಧಾಂಗಿಯಾದ ಲಕ್ಷ್ಮಿಯ ಉದ್ಗಾರ. ಇಚ್ಛಾ ಮಾತ್ರದಿಂದಲೇ ಯಾರನ್ನು ಬೇಕಾದರು ರುದ್ರನನ್ನಾಗಲೀ ಅಥವಾ ಚತುರ್ಮುಖನನ್ನಾಗಲೀ ಋಷಿಯನ್ನಾಗಲಿ ಅಥವಾ ಒಳ್ಳೆಯ ಜ್ಞಾನಿಯನ್ನಾಗಲೀ ಮಾಡಬಲ್ಲೆ. ಆದ್ದರಿಂದ ನಾನು ಬ್ರಹ್ಮ ರುದ್ರಾದಿ ದೇವತೆಗಳಿಗಿಂತ ಶೇಷ್ಠಳು, ಆದರೆ ನನಗೆ ಕಾರಣನಾದವನು ಕ್ಷೀರ ಸಾಗರದಲ್ಲಿ ಶೇಷಶಾಯಿಯಾಗಿದ್ದಾನೆ.

॥ ೬೪ ॥

"ಏಕೋನಾರಾಯಣಆಸೀತ್‌ನಬ್ರಹ್ಮಾನಚಶಂಕರ:।"
"ವಾಸುದೇವೋವಾಇದಮಗ್ರಆಸೀನ್ನಬ್ರಹ್ಮಾನಚ
ಶಂಕರ:॥"

ಅನ್ವಯಾರ್ಥ— (ಸೃಷ್ಟಿಯಾದಿ ಕಾಲದಲ್ಲಿ) ನಾರಾಯಣ:-ಶ್ರೀ ವಿಷ್ಣುವು, ಏಕ:-ಒಬ್ಬನೇ, ಆಸೀತ್-ಇದ್ದನು, ಬ್ರಹ್ಮಾಚ-ಚತುರ್ಮುಖನೂ, ನ ಆಸೀತ್-ಇರಲಿಲ್ಲ. ಶಂಕರ: ಚ-ರುದ್ರನೂ, ನ ಆಸೀತ್-ಇರಲಿಲ್ಲ. ಇದಮಗ್ರೇ-[ಇದಂ]-ಈ ಪ್ರಪಂಚದ, ಅಗ್ರೇ-ಸೃಷ್ಟಿಯ ಪೂರ್ವಕ್ ಕಾಲದಲ್ಲಿ, ವಾಸುದೇವೋವಾ-ಶ್ರೀನಾರಾಯಣನೊಬ್ಬನೇ, ಆಸೀತ್-ಇದ್ದನು, ಬ್ರಹ್ಮಾ-ಚತುರ್ಮುಖನು.ರುದ್ರಃಚ-ಶಿವನೂ ಕೂಡ, ನ ಆಸೀತ್—ಇರಲಿಲ್ಲ.

ತಾತ್ಪರ್ಯ— ಪರಮಾತ್ಮನ ಸರ್ವೋತ್ತಮತ್ವ ಸ್ವಾತಂತ್ರ್ಯಗಳು ಈ ಎರಡು ಶ್ರುತಿಗಳಲ್ಲಿ ಸ್ಪಷ್ಟವಾಗಿ ಎದ್ದು ಕಾಣುತ್ತಿವೆ. ಪ್ರಳಯ ಕಾಲದಲ್ಲಿ ಚತುರ್ಮುಖನಾಗಲಿ ಯಾರೂ ಇರಲಿಲ್ಲ. ನಾರಾಯಣನೊಬ್ಬನೇ ಇದ್ದ ಎನ್ನುತ್ತದೆ ಈ ಶ್ರುತಿ. ವಸ್ತುತಃ ಪ್ರಳಯ ಕಾಲದಲ್ಲೂ ನಿತ್ಯರಾದ ಬ್ರಹ್ಮ ರುದ್ರಾದಿ ಜೀವರಾಶಿಗಳು, ನಿತ್ಯವಾದ ಪ್ರಕೃತಿ ತದಭಿಮಾನಿನೀ ಲಕ್ಷ್ಮೀದೇವಿ ಎಲ್ಲಾ ಇದ್ದಾರೆ. ಹಾಗಿದ್ದರೆ ನಾರಾಯಣ ನೊಬ್ಬನೇ ಇದ್ದ ಎನ್ನುವ ಮಾತಿಗೇನು ಅರ್ಥ? ರವಾ ಬ್ರಹ್ಮಾದಿಗಳಿದ್ದರೂ ಇಲ್ಲ ದಂತೆ ಎಲ್ಲರೂ ಪರತಂತ್ರರು, ಭಗವದಧೀನರೂ ಪರಮಾತ್ಮ ಸ್ವತಂತ್ರ. ಆದುದ ರಿಂದ ಇರುವವನು ಅಂದರೆ ಸ್ವತಂತ್ರವಾಗಿ ಇರುವವ ನಾರಾಯಣನೊಬ್ಬನೇತಾನೆ? ಇದು ಶ್ರುತಿಯ ನಿಗೂಢಾರ್ಥ. ಈ ರೀತಿಯಾಗಿ ಮೀಮಾಂಸಾ ನಡೆಸಿದಾಗ ಶ್ರೀಶನ ಸರ್ವೋತ್ಕರ್ಷತೆ ಸುಸ್ಪಷ್ಟವಾಗುತ್ತಿದೆ.

॥ ೬೫ ॥

"ಯದಾಪಶ್ಯ:ಪಶ್ಯತೇರುಗ್ಮವರ್ಣಂಕರ್ತಾರಮೀಶಂ
ಪುರುಷಂಬ್ರಹ್ಮಯೋನಿಮ್ ।
ತದಾವಿದ್ವಾನ್ಪುಣ್ಯಪಾಪೇವಿಧೂಯನಿರಂಜನ:
ಪರಮಂಸಾಮ್ಯಮುಪೈತಿ॥"

ಅರ್ಥ ಯದಾ-ಯಾವಾಗ, ಪಶ್ಯ:-ನೋಡ ತಕ್ಕ ಜೀವಿಯು, ರುಗ್ಮವರ್ಣಂ-(ರುಗ್ಮ)-ಬಂಗಾರದ, (ವರ್ಣಂ)-ಬಣ್ಣವುಳ್ಳ, ಕರ್ತಾರಂ-ಜಗತ್ತಿನ ಸೃಷ್ಟಿ ಕರ್ತೃನಾದ ಈಶಂ-ಸರ್ವ ಸ್ವಾಮಿಯಾದ, ಪುರುಷಂ-(ಪುರು)-ಪೂರ್ಣವಾದ, (ಷಂ)-ಷಡ್ಗುಣ ಗಳುಳ್ಳ, ಬ್ರಹ್ಮಯೋನಿಂ-(ಬ್ರಹ್ಮ)-ಚತುರ್ಮುಖನಿಗೆ, (ಯೋನಿಂ)-ಕಾರಣನಾದ, ಪರಮಂ-[ಪರ]-ಬ್ರಹ್ಮಾದಿಗಳಿಗಿಂತಲೂ ಉತ್ತಮುಳಾದ, (ಮಾಂ)-ಲಕ್ಷ್ಮಿಯು ಹೆಂಡ ತಿಯಾಗಿವುಳ್ಳ ಶ್ರೀಮನ್ನಾರಾಯಣನನ್ನು, ಪಶ್ಯತೇ-ಪ್ರತ್ಯಕ್ಷವಾಗಿ ನೋಡುತ್ತಾನೋ ತದಾ-ಆವಾಗ, ವಿದ್ವಾನ್-ಅಪರೋಕ್ಷ ಜ್ಞಾನಿಯಾದ ಜೀವಿಯು, ಪುಣ್ಯಪಾಪೇ-ಪುಣ್ಯಪಾಪಗಳನ್ನು, ವಿಧೂಯ-ಕಳಚಿಕೊಂಡು, ನಿರಂಜನ:-ಯಾವ ದೋಷವೂ ಇಲ್ಲದವನಾಗಿ, ಪರಮಂ-ಶ್ರೇಷ್ಠವಾದ, ಸಾಮ್ಯಂ-ಪರಮಾತ್ಮನ ಸಾದೃಶ್ಯವನ್ನು

(ದುಃಖಿನೂನ್ಯತೆ, ಸ್ವಯೋಗ್ಯತಾನುಸಾರವಾಗಿ ಪೂರ್ಣಾನಂದತೆ. ದುಃಖಾಪಾದಕ ದೋಷಾಭಾವಾದಿಗಳಿಂದ ಪರಮಾತ್ಮನಸಾಮ್ಯ) ಉಪೈತಿ-ಹೊಂದುತ್ತಾನೆ.

ತಾತ್ಪರ್ಯ ನಿಯತ ಸಾಧನಾನುಷ್ಠಾನ ಮಾಡತಕ್ಕ ಯೋಗ್ಯ ಜೀವನು ಬಂಗಾರದಂತೆ ಶೋಭಾಯು ಮಾನನಾದಸಕಲ ಜಗತ್ತಿಗೂ ನಿಮಿತ್ತ ಕಾರಣವಾದ, ಸರ್ವಸ್ವಾಮಿಯಾದ ನಿಖಿಲಗುಣಗಣಗಳಿಗೆ ಆಕರನಾದ ಚತುರ್ಮುಖನಿಗೂ ಸರ್ಜಕನಾದ ಲಕ್ಷ್ಮೀಪತಿಯಾದ ಶ್ರೀಮನ್ನಾರಾಯಣನನ್ನು ಸಾಕ್ಷಾತ್ ಅವಲೋಕನಮಾಡಿದಾಗ ಜನ್ಮ ಜನ್ಮಾಂತರಗಳಲ್ಲಿ ಮಾಡಿದ ಕರ್ಮಗಳ ಫಲವಾದ ಪಾಪ ಅನಿಷ್ಟ ಪುಣ್ಯಗಳಿಂದ ವಿದೂರನಾಗುತ್ತಾನೆ. ಸಮಸ್ತ ದೋಷ ಶೂನ್ಯನಾಗುತ್ತಾನೆ. ಭಗವಂತನ ಅತೀ ಸಾದೃಶ್ಯವನ್ನು ಅಂದರೆ ಸ್ವಯೋಗ್ಯತಾನುಸಾರವಾಗಿ ಮೋಕ್ಷಾನಂದವನ್ನು ಅನುಭವಿಸುತ್ತಾನೆ.

ವಿಶೇಷಾರ್ಥ ಚೇತನತ್ವವನ್ನು ಇಟ್ಟುಕೊಂಡು ಸಾಮ್ಯ ಉಪಪಾದನ ಮಾಡುವುದಾದರೆ ಸಂಸಾರ ದೆಸೆಯಲ್ಲೂ ಜೀವನಿಗೆ ಭಗವಂತನ ಸಾದೃಶ್ಯ ಇದ್ದೇ ಇದೆ, ಅದುದರಿಂದಲೇ "ಪರಮ" ಎಂಬ ಶಬ್ದದಿಂದ ಸಾದೃಶ್ಯವನ್ನು ನಿರೂಪಿಸಿದ್ದಾರೆ; ದುಃಖ ಲೇಶಾಭಾವ ಯೋಗ್ಯತಾನುಗುಣವಾಗಿ ಪೂರ್ಣ ಆನಂದ ಜ್ಞಾನಾದಿಗಳಿಂದ ಭಗವತಂನ ಸಾದೃಶ್ಯವನ್ನು ತಿಳಿಯಬೇಕು. ಭಗವಂತನಂತೆ ಜೀವನೂ ಮುಕ್ತಿಯಲ್ಲಿ ಪೂರ್ಣ ಆನಂದನು, ಪೂರ್ಣಜ್ಞಾನನು ಎಂದು ಹೇಳಿದಾಗ ಭಗವಂತನಿಗೂ ಜೀವನಿಗೂ ಏನೇನೂ ಅಂತರವಿಲ್ಲವೆಂದು ತಾರತಮ್ಯವೂ ಶೂನ್ಯ ಆಗಬೇಕೆಂದು ಶಂಕೆ ಬರಬಹುದು. ಅದಕ್ಕೋಸ್ಕರವೇ ವಿವರಣೆ ಮಾಡಿದಾಗ ಅವರವರ ಯೋಗ್ಯತೆಗನುಗುಣವಾಗಿ ಪೂರ್ಣ ಜ್ಞಾನಾನಂದವುಳ್ಳವರು ಎಂಬುದಾಗಿ ಸೃಷ್ಟೀಕರಿಸಿದ್ದೇವೆ. ! ಲೋಟವು ನೀರಿನಿಂದ ಪೂರ್ಣ ಬಾದಿಗೆಯು ಜಲಪೂರ್ಣ ಕೊಡವೂ ವಾರಿಪೂರ್ಣ, ಗುಡಾಣವೂ ಜಲಪೂರ್ಣ ನದಿ, ಸಮುದ್ರಾದಿಗಳೂ ಜಲದಿಂದ ಪೂರ್ಣಗಳೂ. ಪ್ರತಿಯೊಂದು ಪೂರ್ಣಗಳೇ, ಆದರೂ ಈ ಪೂರ್ಣತೆಗಳಲ್ಲಿ ಅದೆಷ್ಟು ಅಂತರ? ಲೋಟೆಯ ಪೂರ್ಣತೆಗಿಂತ ಕಂಬಿಗೆಯ ಪೂರ್ಣತೆ ಹೆಚ್ಚು, ಅದಕ್ಕಿಂತಲೂ ಹೆಚ್ಚು ಪೂರ್ಣತೆವುಳ್ಳ ಕೊಡ. ಹೀಗೆ ಕೆರೆ ನದೀ ಸಮುದ್ರಗಳ ಪೂರ್ಣತೆಗಳೂ ಒಂದಕ್ಕಿಂತ ಮತೊಂದು ಎಷ್ಟೊ ಪಾಲು ಹೆಚ್ಚಿನವುಗಳು. ಅದರಂತೆ ಎಲ್ಲಾ ಜೀವರೂ ಜ್ಞಾನಾನಂದಪೂರ್ಣರಾಗಿದ್ದರೂ ಅವರವರ ಪಾತ್ರಕ್ಕನುಗುಣ

ವಾಗಿಯೇ ಪೂರ್ಣರು. ಹೀಗಿರುವಾಗ ಪರಬ್ರಹ್ಮನ ಪೂರ್ಣತೆಯ ಮುಂದೆ ಈ ಜೀವರಾಶಿಯು ಪೂರ್ಣತೆ ಒಂದು ಲೇಶ ಮಾತ್ರ. ಆದುದರಿಂದ ಪರಮಾತ್ಮನ ಶರಮ ಸಾಮ್ಯವೆಂದರೆ ಜೀವ ಬ್ರಹ್ಮರಿಬ್ಬರೂ ಯೋಗ್ಯತೆಗನುಗುಣವಾಗಿ ಪೂರ್ಣಾನುದರು. ಪೂರ್ಣಜ್ಞಾನಿಗಳು ಸರ್ವಾತ್ಮನಾ ದುಃಖ ಶೂನ್ಯರು ಎಂದೇ ಇಟ್ಟು ಕೊಳ್ಳಬೇಕು. ಇದರಲ್ಲಿ ಯಾವ ಅನೌಚಿತ್ಯಕ್ಕೂ ಅವಕಾಶವಿಲ್ಲ.

2) ಕೆಲವರು ನಿರ್ಗುಣ ಬ್ರಹ್ಮನ ಸಾಕ್ಷಾತ್ಕಾರವೇ ಮೋಕ್ಷಕ್ಕೆ ಕಾರಣ. ಈ ಸಾಕ್ಷಾತ್ಕಾರ ಬ್ರಹ್ಮನಿಗೆ ಯಾವ ಧರ್ಮವನ್ನೂ ವಿಷಯೀಕರಿಸುವುದಿಲ್ಲವೆನ್ನುತ್ತಾರೆ. ಈ ವಾದಿಗಳಿಗೆ ಈ ಶ್ರುತಿಯು ಸಂಪೂರ್ಣ ವಿರುದ್ಧವಾಗಿದೆ. ಸ್ವರೂಪಾನಂದ ಆವಿರ್ಭಾವರೂಪ ಮುಕ್ತಿಗೆ ಕಾರಣವಾದ ಸಾಕ್ಷಾತ್ಕಾರದ ವಿವರಣೆಯನ್ನು ಓಷ್ಠ ಸುಂದರವಾಗಿ ನೀಡುತ್ತಿದೆ ಈ ಮಂತ್ರ. ಈ ಸಾಕ್ಷಾತ್ಕಾರವು ಭಗವಂತನನ್ನು ಸಕಲ ಗುಣಾಕರತ್ವೇನ ವಿಷಯೀಕರಿಸುತ್ತಿದೆ ರುಕ್ಮವರ್ಣತ್ವ. ಸಕಲಜಗತ್‌ಸ್ರಷ್ಟೃತ್ವ ಈ ಎಲ್ಲಾ ಧರ್ಮವನ್ನು ಭಗವಂತನಲ್ಲಿ ಪ್ರತ್ಯಕ್ಷ ಕಾಣುವಾಗ ಯಾರಾದರೂ ಹೇಗೆ ತಾನೆ ಅಭೇದೋಪಾಸನೆಯನ್ನು ಮಾಡಿಯಾರು?

3) ಭಗವಂತನ ಸಾಕ್ಷಾತ್ಕಾರ ನಿಷ್ಪ್ರಕಾರಕವಲ್ಲ. ಭಗವಂತನು ಸಕಲ ಗುಣ ಪರಿಪೂರ್ಣತೆಯಾಗೂ ಸಕಲ ಸ್ರಷ್ಟೃತ್ವದ್ದರಿಂದ ಅಭೇದವಿಲ್ಲ ಎನ್ನುವ ಪ್ರಮೇಯಗಳು ಸಿದ್ಧವಾಗುತ್ತವೆ.

4) ಪರಾ-ಪ್ರಕೃಷ್ಟಳಾದ, ಮಾ-ಲಕ್ಷ್ಮೀದೇವಿಯೇ ಪೆಂಡತಿಯಾಗಿರುಳ್ಳವ ಪರಾ ಮಾ ಯಸ್ಯ ಸಃ ಎಂದು ವಿಗ್ರಹದಿಂದ ಲಕ್ಷ್ಮೀ ಪತಿಯೆನ್ನುವ ಅರ್ಥವು ಬರುತ್ತೆ

॥ ೬೬ ॥

ಯೋ ವೇದನಿಹಿತಂ ಗುಹಾಯಾಂ ಪರಮೇವ್ಯೋಮನ್ ।
ಸೋऽ ಶ್ನುತೇಸರ್ವಾನ್‌ಕಾಮಾನ್‌ಸಹಬ್ರಹ್ಮಣಾವಿಪಶ್ಚಿತಾ।

ಅರ್ಥ ಯಃ-ಯಾವಾತನು, ಗುಹಾಯಾಂ-ಹೃದಯ ಗುಹೆಯಲ್ಲಿ, ಪರಮೇ-ಶ್ರೇಷ್ಠವಾದ,ವ್ಯೋಮನ್-ಹೃದಯಾಕಾಶದಲ್ಲಿ,ನಿಹಿತಂ-ನೆಲೆಸಿರುವ, ನಾರಾಯಣನನ್ನು ವೇದ-ತಿಳಿದಿದ್ದಾನೋ, ಸಃ-ಅಂತಹ ಜ್ಞಾನಿಯು, ವಿಪಶ್ಚಿತಾ-ಸರ್ವಜ್ಞನಾದ,

ಬ್ರಹ್ಮಣಾ-ಪರ ಬ್ರಹ್ಮನಿಂದ, ಸಹ–ಕೂಡಿಕೊಂಡು, ಸರ್ವಾನ್-ಸ್ವ ಯೋಗ್ಯವಾದ ಎಲ್ಲಾ, ಕಾಮಾನ್–ಭೋಗಗಳನ್ನು, ಅಶ್ನುತೇ-ಭೋಗಿಸುತ್ತಾನೆ.

ತಾತ್ಪರ್ಯ ಶ್ರುತಿಗಳಲ್ಲಿ ಗುಹೆಯೆಂದರೆ ಹೃದಯವೆಂದೇ ಅರ್ಥ. ಈ ಹೃದಯ ಗುಹೆಯ ಒಳಗಿನ ಶ್ರೇಷ್ಠವಾದ ಅವಕಾಶದಲ್ಲಿ ನಿಯಾಮಕನಾಗಿ ನಾರಾಯಣನು ಸದಾ ಸನ್ನಿಹಿತನಾಗಿರುತ್ತಾನೆ. ಈತನ ಸಾಕ್ಷಾತ್ಕಾರವಾದರೆ ನಮ್ಮ ಸಕಲೇಷಾ ಭೀಷ್ಟಗಳೂ ನೆರವೇರುತ್ತವೆ. ಬ್ರಹ್ಮನ ಜೊತೆಗೆನೇ ಸಕಲ ಕಾಮ್ಯಗಳೂ ಪ್ರಾಪ್ತವಾಗುತ್ತವೆ. ಪರಬ್ರಹ್ಮನ ಚಕ್ಷುರಿಂದ್ರಿಯದಿಂದಲೇ ದರ್ಶನ. ಅವನ ಕಿವಿಯಿಂದಲೇ ಕೇಳುವಿಕೆ. ಅವನ ನಾಲಿಗೆಯಿಂದಲೇ ರಸಾಸ್ವಾದನೆ. ಆತನ ಪಾದಗಳಿಂದಲೇ ಗಮನಾಗಮನಗಳು ಮುಕ್ತ ಜೀವನಿಗೆ ಲಭಿಸುತ್ತದೆ ಇದನ್ನೇ ಸಹಭೋಗವೆನ್ನುತ್ತಾರೆ. ಪರಮಾತ್ಮನ ಜೊತೆಗೆ ಭೋಗ ಎಂಬುದರಿಂದ ಜೀವ ಬ್ರಹ್ಮಕ್ಕಿಂತ ಇಲ್ಲವೆಂದ ಸಿದ್ಧವಾಯಿತು.

॥ ೬೭ ॥

ಪ್ರಫಾನ್ವಸ್ಯ ಮಹತೋ ಮಹಾನಿ ಸತ್ಯಾ ಸತ್ಯಸ್ಯ ಕರಣಾ
ನಿವ್ಯೋಚವರ್ ।
ಸತ್ಯಮೇನವನುವಿಶ್ವೇ ಮದಂತಿರಾತಿಂದೇವಸ್ಯ
ಗೃಣತೋ ಮಘೋನಃ ॥

ಅರ್ಥ ಸತ್ಯಸ್ಯ-ಪಾರಮಾರ್ಥಿಕವಾಗಿ (ಅಂದರೆ ತ್ರಿಕಾಲದಲ್ಲೂ ಸತ್ಯನಾದ, ಮಹತಃ-ಸರ್ವೋತ್ತಮನಾದ ಅಸ್ಯ-ತ್ರೀ ವಿಷ್ಣುವಿನ ಮಹಾನಿ-ಪೂಜಿಸಲು ಯೋಗ್ಯವಾದ, ಕರಣಾನಿ–ಜಗತ್ಸೃಷ್ಟ್ಯಾದಿ ವ್ಯಾಪಾರಗಳನ್ನು, ಕರಣಾನಿ-ಚಕ್ಷುರಾದಿಕರಣಗಳನ್ನು, ಸತ್ಯಸ್ಯ-ಪಾರಮಾರ್ಥಿಕ ಸತ್ಯವನ್ನಾಗಿಯೇ, ಪ್ರವೋಚವರ್ನು-ಸರಿಯಾಗಿಯೇ ಹೇಳಿದ್ದೇನೆ, ಗೃಣತಃ-ಸ್ತೋತ್ರ ಮಾಡತಕ್ಕ, ದೇವಸ್ಯ–ದೇವರಾದ, ಮಘೋನಃ-ಇಂದ್ರನಿಗೆ, ರಾತಿಂ-ಬಲಿಯಿಂದ ಕಸಿದು ತ್ರೈಲೋಕ ದಾನವನ್ನು ಮಾಡಿದ, ಏನಂ-ಭಗವಂತನನ್ನು, ಅನು-ನೋಡಿ, ಸತ್ಯಾ-ಪಾರಮಾರ್ಥಿಕ ಸತ್ಯವ

ನ್ನಾಗಿ ತಿಳಿದು, ವಿಶ್ವೇದೇವಾಃ-ಎಲ್ಲಾ ದೇವತೆಗಳು, ದುದಂತಿ-ಸಂತೋಷ ಪಡುತ್ತಾರೆ.

ತಾತ್ಪರ್ಯ ಬ್ರಹ್ಮನು ನಿತ್ಯ ಪಾಗೂ ಸತ್ಯ, ಅವನ ಜಗತ್ಸೃಷ್ಟ್ಯಾದಿ ವ್ಯಾಪಾರಗಳೂ ಪಾರಮಾರ್ಥಿಕವಾಗಿ ಸತ್ಯ. ಬ್ರಹ್ಮನೇ ದೇವೇಂದ್ರನ ತ್ರೈಲೋಕ್ಯಾಧಿಪತ್ಯವನ್ನು ಕಸಿದುಕೊಳ್ಳಲು ಯೇತ್ನಿಸಿದಂತಹ ಬಲಿಯಿಂದ ಅದನ್ನು ತಾನು ಪುನಃ ದೇವೇಂದ್ರನಿಗೆ ಉಳಿಸಿಕೊಟ್ಟ, ಇಂತಹ ಮಹಾಮಹಿಮೆ ಪರಮಾರ್ಥತಃ ಸತ್ಯ ಯೆಂಬ ಭಾವನೆಯಿಂದಲೇ ಎಲ್ಲಾ ದೇವತೆಗಳೂ ಸಂತೋಷಪಟ್ಟಿದ್ದಾರೆ. ಪರಮ ಜ್ಞಾನಿಗಳಾದ ದೇವತೆಗಳೇ ತ್ರಿಕಾಲಾಬಾಧ್ಯವೆಂದು ಜಗತ್ಸತ್ಯಾಗಲಿ ಭಗವನ್ಮಹಿಮೆಯನ್ನಾಗಲಿ ಒಪ್ಪಿದ ಮೇಲೆ ಇನ್ನೇನು ಸಂಶಯಕ್ಕವಕಾಶ?

॥ ೬೮ ॥

ಯಚ್ಚಿಕೇತಸತ್ಯಮಿತ್ತನ್ನವೋಘಂವಸುಸ್ಪಾರ್ಹಮುತ
ಜೇತೋತದಾತಾ ।
ಸತ್ಯಸ್ಸೋಅಸ್ಯಮಹಿಮಾಗೃಣೇಶವೋಯಜ್ಞೇಷು
ವಿಪ್ರರಾಜ್ಯೇ ॥

ಅರ್ಥ ಸ್ಪಾರ್ಹಂ-ಜ್ಞಾತಿಯೊಬ್ಬರಿಂದ ಅಪೇಕ್ಷಿಸಲ್ಪಡುವ, ವಸು-ತ್ರೈಲೋಕ್ಯಾಧಿಪತ್ಯ ರೂಪ ಸಂಪತ್ತನ್ನು, ಜೇತಾ-ಬಲಿಯಿಂದ ಗೆದ್ದುಕೊಂಡವ, ಉತ-ಹಾಗೆಯೇ, ದಾತಾ-ದೇವೇಂದ್ರನಿಗೆನೇ ತಿರುಗಿ ಕೊಟ್ಟವ, ಸಃ-ಆ ಭಗವಂತನು, ಯತ್-ಯಾವ ಪ್ರಪಂಚವನ್ನು, ಚಿಕೇತ-ಸೃಷ್ಟಿ ಮಾಡಿದನೋ, ತತ್-ಅದು, ಸತ್ಯಂಇತ್-ಸತ್ಯವೇ, ಮೋಘಂ ನ-ಸುಳ್ಳಲ್ಲ, ವಿಪ್ರರಾಜ್ಯೇ-ಬ್ರಾಹ್ಮಣ ಪ್ರಧಾನಕವಾದ, ಯಜ್ಞೇಷು-ಯಾಗಗಳಲ್ಲಿ, ತವ-ಸುಖವನ್ನು ಉದ್ದೇಶಿಸಿ, ಗೃಣೇ-ಭಗವಂತನಯಾವ ಮಹಿಮೆಯನ್ನು ಸ್ತೋತ್ರ ಮಾಡುತ್ತಾನೋ, ಅಸ್ಯ-ಆ ಪರಮಾತ್ಮನ ಮಹಿಮಾಸತ್ಯಃ ಪಾರಮಾರ್ಥಿಕ ಸತ್ಯ.

ತಾತ್ಪರ್ಯ ಸಮಸ್ತ ಪ್ರಪಂಚವು ಪಾರಮಾರ್ಥಿಕ ಸತ್ಯ. ತ್ರಿಕಾಲದಲ್ಲಿಯೂ

ಜಗತ್ತಿಗೆ ಎಂದೆಂದೂ ಬಾಧವಿಲ್ಲ, ಹಗ್ಗವನ್ನು ಕಂಡು ಭ್ರಮಿಸಲ್ಪಡುವ ಸರ್ಪ್ಪ ದಂತಲ್ಲ ಈ ಜಗತ್ತು. ಕಾರಣ ಸರ್ಪಭ್ರಮೆಗೆ "ಇದು ಸರ್ಪವಲ್ಲ. ಬರೀ ಹಗ್ಗ ಮಾತ್ರ" ಎನ್ನುವ ಬಾಧ ಜ್ಞಾನವಿದೆ. ಹಾಗೆಯೇ ಪ್ರಪಂಚ ವಿಷಯದಲ್ಲಿ "ಇಲ್ಲದೆ ಇದ್ದ ಜಗತ್ತನ್ನು ಕಂಡೆ" ಎಂದು ಯಾರಿಗೂ ಬಾಧ ಜ್ಞಾನವಿಲ್ಲ. ಆದುದ ರಿಂದ ಪರಮಾರ್ಥವಾಗಿಯೂ ಸತ್ಯ. ಪರಮಾತ್ಮನು ಈ ಪ್ರಪಂಚವನ್ನು ಸೃಷಿ ಮಾಡಿದ್ದಾನೆ. ಇದು ಸುಳ್ಳಾದೀತೆ? ಭಗವಂತನ ಮಹಿಮೆಯನ್ನೇ ಅಲ್ಲಗಳೆದಂತಾ ಯಿತು. ಸುಳ್ಳಾದ (ಮಿಥ್ಯಾ) ವಸ್ತುವಾದರೆ ಯಾವ ಪ್ರಯೋಜನಕ್ಕೂ ಬಾರದು. ಪರೀಕ್ಷೆ ಮಾಡಿದಾಗ ಸುಳ್ಳೆಂದು ಗೊತ್ತಾಗಿ ಬಿಡುತ್ತೆ. ಈ ಜಗತ್ತಿನಿಂದ ಸಿದ್ಧವಾದು ಪ್ರಯೋಜನವೇ ಅದರ ಸತ್ಯತೆಗೆ ಸಾಕ್ಷಿಯಾಗಿದೆ. ಈ ಪರಮಾತ್ಮನು ಬಲಿಯ ತಿರಸ್ಸನ್ನು ಕಾಲಿನಿಂದ ತುಳಿದು ದೇವ ಲೋಕ ಪದವಿಯನ್ನು ಇಂದ್ರನಿಗೆ ಅನು ಗ್ರಹಿಸಿದ. ಇಂದ್ರ ಪದವೇ ಸಾಮಾನ್ಯದ ಸಂಪತ್ತೇ? ಸರ್ವರಿಂದಲೂ ಸ್ಪೃಹಣೀಯ ತಾನೆ! ಇಂತಹ ವೇದೋಕ್ತ ಮಹಿಮೆಯನ್ನು ಹೇಗೆ ತಾನೆ ಅಪಲಾಪ ಮಾಡ ವುದು? ಋತ್ವಿಜರಿಂದ ಆವೃತ್ತವಾದ ಯಜ್ಞ ವೇದಿಕೆಯಲ್ಲಿ ಭಗವಂತನ ಮಹಿಮೆ ಯನ್ನು ವೇದದ ದ್ರಷ್ಟ್ಯ ಋಷಿಗಳು ಸದಾ ಸ್ತೋತ್ರ ಮಾಡುತ್ತಾರೆ. ಈ ಭಗ ವನ್ಮಹಿಮೆ ಸತ್ಯವೆಂದು ವೇದ ಮಂತ್ರವೇ ಘೋಷಿಸುತ್ತಿದೆ. ಜಗತ್ ಸತ್ಯತ್ವ ಸಮರ್ಥನೆಗೆ ಇದಕ್ಕಿಂತ ಮಿಗಿಲಾದ ಅಧಾರಬೇಕೆ?

॥ ೬೯ ॥

ಸತ್ಯಾಃ ವಿಷ್ಣೋಃ ಗುಣಾಃ ಸರ್ವೇ ಸತ್ಯಾ ಜೀವೇಶಯೋ ಭಿದಾ ।
ಸತ್ಯೋ ಮಿಥೋ ಜೀವಭೇದಃ ಸತ್ಯಂ ಚ ಜಗದೀದೃಶಮ್ ॥

ಅರ್ಥ ವಿಷ್ಣೋಃ-ಪರಮಾತ್ಮನ, ಸರ್ವೇ-ಎಲ್ಲಾ, ಗುಣಾಃ-ಗುಣಗಳು, ಸತ್ಯಾಃ-ಪರಮಾರ್ಥವಾಗಿ ಸತ್ಯಗಳು, ಜೀವೇಶಯೋಃ-ಜೀವ ಹಾಗೂ ಪರಮಾತ್ಮರ ಭಿದಾ-ಭೇದವು, ಸತ್ಯಾ-ಸತ್ಯವಾಗಿದೆ. ಮಿಥಃ-ಪರಸ್ಪರವಾಗಿ, ಜೀವಭೇದಃ-ಜೀವ ಜೀವರಲ್ಲಿರತೆಕ್ಕ ಭೇದವೂ, ಸತ್ಯಃ-ಸತ್ಯವಾಗಿದೆ, ಈದೃಶಂ-ಪ್ರತ್ಯಕ್ಷ ದೃಷ್ಟವಾದ,

ಜಗತ್ ಚ-ಜಗತ್ತೂ ಕೂಡಾ. ಸತ್ಯಮ್-ಸತ್ಯವಾಗಿದೆ.

ತಾತ್ಪರ್ಯ ಪರಮಾತ್ಮನ ಪ್ರತಿಯೊಂದು ಗುಣಗಳೂ ಸತ್ಯವಾಗಿದೆ. ಜೀವ ಜೀವರಲ್ಲಿ ಪರಸ್ಪರವಾಗಿರತಕ್ಕ ಭೇದವೂ ಸತ್ಯ. ಜೀವ ಮತ್ತು ಪರಮಾತ್ಮರ ಭೇದವೂ ಸತ್ಯ ಪ್ರತ್ಯಕ್ಷ ಕಾಣಿಸತಕ್ಕ ಪ್ರಪಂಚವೂ ಪಾರಮಾರ್ಥಿಕ ಸತ್ಯ.

॥ ೭೦ ॥

ಅಸತ್ಯಃ ಸ್ವಗತೋ ಭೇದೋ ವಿಷ್ಣೋರನ್ಯದಸತ್ಯಕಮ್ ।
ಜಗತ್ಪ್ರವಾಹಃ ಸತ್ಯೋಯಂ ಪಂಚಭೇದಸಮನ್ವಿತಃ ॥

ಅರ್ಥ ವಿಷ್ಣೋಃ-ಶ್ರೀ ವಿಷ್ಣುವಿಗೆ, ಸ್ವಗತಃ-(ಸ್ವ)-ತನ್ನ ಅವತಾರಗಳಲ್ಲಿ.ತನ್ನ ಅವಯವಗಳಲ್ಲಿ, ತನ್ನ ಗುಣ ಕ್ರಿಯಾದಿಗಳಲ್ಲಿ. (ಗತ)-ಇರತಕ್ಕ, ಭೇದಃ-ಭೇದವು ಅಸತ್ಯಃ-ಸುಳ್ಳಾದ್ದು, ಅನ್ಯತಃ-ಸ್ವಗತ ಭೇದಕ್ಕಿಂತ ಇತರವಾದ ಜಗತ್ತು, ಅಸತ್ಯಕಮ್-ಸುಳ್ಳಾದ್ದು.

ತಾತ್ಪರ್ಯ ಪರಮಾತ್ಮನಿಗೂ ಅವನ ಅವತಾರಗಳಿಗೂ ಭೇದ ಇಲ್ಲ. ಪರಮಾತ್ಮನ ಜ್ಞಾನಾನಂದಾದಿಗುಣಗಳಿಗೂ ಜಗತ್ತಿನ ಸೃಷ್ಟಿಯೇ ಮೊದಲಾದ ಕ್ರಿಯೆಗಳಿಗೂ ಹಸ್ತಪಾದಾದಿ ಅವಯವಗಳಿಗೂ ಪರಮಾತ್ಮನಿಗೂಪರಸ್ಪರಭೇದವಿಲ್ಲವೇ ಇಲ್ಲ. ತೋರತಕ್ಕ ಈ ಭೇದ ಪ್ರಮಾಣ ವಿರುದ್ಧವಾದುದರಿಂದ ಅಸತ್ಯ. ಜಗತ್ತಿನ ಪರಂಪರೆಯು ಮತ್ತು ಮೇಲೆ ಹೇಳಿದ ಮುಂದೆ ಹೇಳುವ ಇತರ ಪಾರಮಾರ್ಥಿಕ ಸತ್ಯ: ಮುಂದಿನ ಶ್ಲೋಕದಲ್ಲಿ ವಿವರಿಸ ತಕ್ಕ ಐದು ವಿಧವಾದ ಭೇದಗಳನ್ನೊಳಗೊಂಡ ಈ ಜಗತ್ತು ವಾಸ್ತವಾರ್ಥಿಕ ಸತ್ಯ.

॥ ೭೧ ॥

ಜೀವೇಶಯೋರ್ಭಿದಾಚ್ಚೈವ ಜೀವಭೇದಃ ಪರಸ್ಪರಮ್ ।
ಜಡೇಶಯೋರ್ಜಡಾನಾಂಚ ಜಡಜೀವಭಿದಾ ತಥಾ ॥

॥ ೭೨ ॥

ಪಂಚಭೇದಾ ಇಮೇ ನಿತ್ಯಾಃ ಸರ್ವಾವಸ್ಥಾಸು ಸರ್ವಶಃ ।
ಮುಕ್ತಾನಾಂಚ ನಹೀಯಂತೇ ತಾರತಮ್ಯಂಚ ಸರ್ವದಾ ॥

ಅರ್ಥ ಜೀವೇಶಯೋಃ-ಜೀವ ಹಾಗೂ ಪರಮಾತ್ಮರುಗಳಿಗೆ, ಭಿದಾ-ಭೇದವು, (ಅಸ್ತಿ) ಏವ-ಇದ್ದೇ ಇದೆ. ಚ-ಮತ್ತು, ಪರಸ್ಪರಂ-ಅನ್ಯೋನ್ಯವಾಗಿ, ಜೀವಭೇದಃ-ಜೀವರುಗಳಿಗೆ ಭೇದವಿದೆ. ಜಡೇಶಯೋಃ-ಜಡಗಳಿಗೂ, ಈಶ್ವರನಿಗೂ ಚ-ಮತ್ತು, ಜಡಾನಾಂ-ಅನ್ಯೋನ್ಯವಾಗಿ ಜಡಗಳಿಗೂ (ಭಿದಾ)-ಭೇದವಿದೆ, ತಥಾ-ಹಾಗೆಯೇ, ಜಡಜೀವಭಿದಾ-ಜಡ ಮತ್ತು ಜೀವರುಗಳಲ್ಲಿ ಭೇದವಿದೆ, ಇಮೇ-ಈ ಪ್ರಮಾಣ ಸಿದ್ಧವಾದ, ಸರ್ವಶಃ-ಎಲ್ಲಾ, ಪಂಚ ಭೇದಃ-ಐದು ವಿಧದ ಭೇದಗಳು, ಸರ್ವಾವಸ್ಥಾಸು-ಎಲ್ಲಾ ಕಾಲದಲ್ಲಿಯೂ, ನಿತ್ಯಾಃ-ಬಾಧ ರಹಿತಗಳು ಸುಳ್ಳಾದವುಗಳಲ್ಲ. ಮುಕ್ತಾನಾಂ ಚ-ಮುಕ್ತ ಜೀವರುಗಳಿಗೂ, ನಹೀಯಂತೇ-ಈ ಭೇದಗಳು ಇಲ್ಲ ವೆಂದಾಗುವುದಿಲ್ಲ, ಚ-ಮತ್ತು, ತಾರತಮ್ಯಂ-ಯೋಗ್ಯತೆಗನುಗುಣವಾದ ನೀಚೋಚ್ಚ ತೆಯು, ಸರ್ವದಾ- ಎಲ್ಲಾ ಕಾಲದಲ್ಲಿಯೂ ಇದೆ.

ತಾತರ್ಪ್ಯ ಒಂದು ವಸ್ತುವಿನಿಂದ ಇನ್ನೊಂದು ವಸ್ತುವಿಗೆ ಇರತಕ್ಕ ಭೇದ ಸತ್ಯ. ಈ ಭೇದಗಳು ಅನಂತಾನಂತ ಇವೆ. ಆದರೂ ಈ ಭೇದಗಳನ್ನು ಐದು ವಿಧವಾಗಿ ವಿಂಗಡಿಸಬಹುದು. 1) ಜೀವರಿಗೂ ಪರಮಾತ್ಮನಿಗೂ ಇರತಕ್ಕ ಭೇದ ಜೀವೇಶ ಭೇದ. 2) ಒಂದು ಜೀವನಿಂದ ಇನ್ನೊಬ್ಬ ಜೀವನಿಗೆ ಇರತಕ್ಕ ಭೇದ. ಪರಸ್ಪರ ಜೀವರ ಭೇದ. 3] ಜಡಗಳಿಗೂ ಪರಮಾತ್ಮನಿಗೂ ಇರತಕ್ಕ ಭೇದ ಜಡೇಶ ಭೇದ 4] ಜಡಗಳಲ್ಲಿ ಪರಸ್ಪರ ಇರತಕ್ಕ ಭೇದ ಜಡಜಡ ಭೇದ. 5) ಜಡಗಳಿಗೂ ಜೀವರಿಗೂ ಇರತಕ್ಕ ಭೇದ ಜಡಜೀವ ಭೇದ. ಈ ಐದೂ ಭೇದಗಳೂ ಸಾರ್ವಕಾಲಿಕ ಸತ್ಯ. ಎಂದೆಂದೂ ಬಾಧೆಗೊಳಗಾಗುವುದಿಲ್ಲ. ಮೋಕ್ಷ ದಲ್ಲೂ ಈ ಪಂಚ ಭೇದಗಳಿವೆ. ಅದುದರಿಂದಲೇ ಶ್ರುತ್ಯುಕ್ತವಾದ ಮುಕ್ತಿಯಲ್ಲಿಯೂ ತಾರತಮ್ಯವಾದ ನೀಚೋಚ್ಚತೆ ಅಥವಾ ತಾರತಮ್ಯ ಮೋಕ್ಷದಲ್ಲೂ ಇದೆಯೆಂಬುದು ಸಿದ್ಧಃ

॥ ೭೩ ॥ ॥ ೭೪ ॥

"ಮುಕ್ತಿಯಲ್ಲೂ ತಾರತಮ್ಯವಿದೆ"ಯೆನ್ನುವ ಸಮರ್ಥನೆ ವೇದದಲ್ಲಿ ಇದೆ.

ಕ್ಷಿತಿಪಾ: ಮನುಷ್ಯ ಗಂಧರ್ವಾ: ದೇವಾಶ್ಚ ಪಿತರಶ್ಚಿರಾ: ।
ಆಜಾನಜಾ: ಕರ್ಮಜಾಶ್ಚ ದೇವಾ ಇಂದ್ರ: ಪುರಂದರ: ॥
ರುದ್ರ: ಸರಸ್ವತೀ ವಾಯುರ್ಮುಕ್ತಾ: ಶತಗುಣೋತ್ತರಾ: ।
ಏಕೋ ಬ್ರಹ್ಮಾ ಚ ವಾಯುಶ್ಚ ವೀಂದ್ರೋ ರುದ್ರಸಮಸ್ತಥಾ ॥
ಏಕೋ ರುದ್ರಸ್ತಥಾ ಶೇಷೋ ನ ಕಶ್ಚಿದ್ ವಾಯುನಾ ಸಮ: ॥

ಮುಕ್ತೇಷು . . . . . ॥ ೭೫ ॥

ಅರ್ಥ ಮುಕ್ತಾ:-ಮೋಕ್ಷವನ್ನು ಹೊಂದಿದ, ಕ್ಷಿತಿಪಾ:-ಚಕ್ರವರ್ತಿಗಳು, ಮನುಷ್ಯಗಂಧರ್ವಾ:-ಮನುಷ್ಯ ಗಂಧರ್ವರು, ಚ-ಮತ್ತು, ದೇವಾ:-ದೇವ ಗಂಧರ್ವರು, ಪಿತರ:-ಪಿತೃ ದೇವತೆಗಳು. ಚಿರಾ:-ಉತ್ತಮ ಪಿತೃ ದೇವತೆಗಳು, ಅಜಾನಜಾ:-ದೇವತೆಗಳಿಂದ ದೇವತೆಯಾಗಿ ಸೃಷ್ಟರಾದವರು, ಚ-ಮತ್ತು, ಕರ್ಮಜಾ:-ಕರ್ಮಾಚರಣೆಯಿಂದ ದೇವತಾ ಪದವಿಯನ್ನು ಪಡೆದವರು, ದೇವಾ:-ಹುಟ್ಟು ಹಾಗೂ ಕರ್ಮವನ್ನು ಹೊರತಾಗಿ, ಸ್ವಾಭಾವಿಕ ದೇವತೆಗಳು, ಇಂದ್ರ:-ದೇವ ಗುರು ಬ್ರಹಸ್ಪತ್ಯಾಚಾರರು, ಪುರಂದರ:-ಈ ಕಲ್ಪದ ಇಂದ್ರ ಪದವೀ ಆರೂಢ ಪುರಂದರನು, ರುದ್ರ:-ತ್ರ್ಯಂಬಕನು, ಸರಸ್ವತೀ-ಶಾರದಾದೇವಿಯು, ವಾಯು:-ವಾಯುದೇವರು ಹೀಗೆ ಒಬ್ಬರು ಇನ್ನೊಬ್ಬರಿಗಿಂತ ಹಿಂದೆ ಹೇಳಿದ ಕ್ರಮ ದಂತೆ, ಶತಗುಣೋತ್ತರಾ:-ನೂರು ಪಟ್ಟು ಗುಣ ಹೆಚ್ಚು ಉಳ್ಳವರು.

ಬ್ರಹ್ಮಾ ಚ-ಚತುರ್ಮುಖ ಬ್ರಹ್ಮನೂ, ವಾಯುಶ್ಚ-ವಾಯುದೇವರೂ ಕೂಡಾ ಏಕ:-ಒಬ್ಬರೇ, ತಥಾ-ಹಾಗೆಯೇ, ವೀಂದ್ರ:-ಗರುಡನು, ರುದ್ರಸಮ:-ರುದ್ರದೇವರಿಂದ ಪರಿಸಮಾನನಾದವನು, ತಥಾ-ಹಾಗೆಯೇ, ರುದ್ರ:-ರುದ್ರನೂ ಶೇಷ:-ಶೇಷನೂ ಏಕ:-ಸಮಾನರು ಮುಕ್ತೇಷು-ಮುಕ್ತರಲ್ಲಿ, ಕಶ್ಚಿತ್-ಯಾರೂ ಕೂಡಾ, ವಾಯುನಾ-ವಾಯುದೇವರಿಂದ, ಸಮಾನ:-ಸಮಾನನು, ನ-ಇಲ್ಲ.

ತಾತ್ಪರ್ಯ ಈ ವೇದ ವಾಕ್ಯವು ಮುಕ್ತರಾದ ಸಜ್ಜೀವರ ನಾಮವನ್ನು ನಿರ್ದೇಶ ಮಾಡುತ್ತಾ ಒಂದು ಪಂಗಡದ ಮುಕ್ತನಿಂದ ಇನ್ನೊಂದು ಪಂಗಡಕ್ಕೆ

ಸೇರಿದ ಜೀವರಾಶಿಯು ಗುಣಗಳ ಅಂತರ ನೂರು ಪಾಲು ಇದೆಯೆಂದು ಸ್ಪಷ್ಟ ಪಡಿಸುತ್ತ ಇದೆ. ಮುಕ್ತಿಯಲ್ಲೇ ಈ ನೀಚೋಚ್ಚತೆ ಇದೆಯೆಂದಾದರೆ ಸಂಸಾರಾವಸ್ಥೆಯಲ್ಲಿ ಉಪಲಬ್ಧವಾಗುವ ಈ ತಾರತಮ್ಯವು ಅಪಲಪನೀಯವಲ್ಲವೆಂದಾಯಿತು. ಆದುದರಿಂದಲೇ ಇದನ್ನು ಸ್ವಾಭಾವಿಕವೆಂದು ಒಪ್ಪದೆ ಉಪಾಯವಿಲ್ಲವಷ್ಟೇ.

ಕ್ಷಿತಿಪರೆಂದರೆ ಭೂಮಿಯನ್ನು ಆಳಿದ ಪಜ್ಞೇವರೂ ಮನುಷ್ಯೋತ್ತಮರೂ ಆದ ಚಕ್ರವರ್ತಿಗಳು. ಗಂಧರ್ವರು ಎರಡು ವಿಧವಾಗಿದ್ದಾರೆ. ಮನುಷ್ಯ ಗಂಧರ್ವರು ಹಾಗೂ ದೇವ ಗಂಧರ್ವರು. ಪಿತೃ ದೇವತೆಗಳಲ್ಲೂ ದ್ವೈವಿಧ್ಯವಿದೆ. ಪಿತೃಗಳು ಚಿರ ಪಿತೃಗಳು ಎಂದು. ದೇವತೆಗಳಲ್ಲಿ ಮೂರು ವಿಧ.

1] ಅಜಾನಜ ದೇವತೆಗಳು 2] ಕರ್ಮಜ ದೇವತೆಗಳು 3] ಸ್ವಾಭಾವಿಕ ದೇವತೆಗಳು 1) ಅಜಾನಜ ದೇವತೆಗಳೆಂದರೆ ಜನನವನ್ನು ಆರಂಭಿಸಿ ದೇವತೆಗಳು ದೇವತೆಯು ಮಗನಾಗಿ ಜನಿಸಿದರೆ ಅವಾಗ ಮಾಗುವೂ ದೇವತೆಯಾಗ ಬೇಕಷ್ಟೆ. ಉದಾಹರಣೆಗಾಗಿ "ಜಯಂತ" ಈತ ಇಂದ್ರನ ಮಗನಾಗಿ ಹುಟ್ಟಿದ. ದೇವತೆಯೆನಿಸಿಕೊಂಡ. 2) ಕರ್ಮಜದೇವತೆಗಳೆಂದರೆ ಕರ್ಮವನ್ನು ಮಾಡಿ ದೇವತಾ ಪದವಿಯನ್ನು ಪಡೆದರು. ಪೃಥುವೇ ಮೊದಲಾದವರು ಕರ್ಮದೇವತೆಗಳು. ತಂದೆಯಿಂದಾಗಲೀ ಕರ್ಮದಿಂದಾಗಲೀ ದೇವತೆಯಾಗದೆ ಸ್ವಭಾವದಿಂದಲೇ ದೇವತಾ ಪದವಿಯನ್ನಲಂಕರಿಸಿದವರು ಸ್ವಾಭಾವಿಕ ದೇವತೆಗಳು.

ಮನುಷ್ಯೋತ್ತಮರಾದ ಚಕ್ರವರ್ತಿಗಳಿಂದ ನೂರು ಪಾಲು ಹೆಚ್ಚು ಗುಣ ಉಳ್ಳವರು ಮನುಷ್ಯಗಂಧರ್ವರು. ಅವರಿಗಿಂತ ನೂರಂ ಪಟ್ಟು ಹೆಚ್ಚು ಗುಣವುಳ್ಳವರು ದೇವಗಂಧರ್ವರು, ಅವರಿಗಿಂತ ನೂರು ಪಟ್ಟು ಗುಣವುಳ್ಳವರು ಪಿತೃಗಳು, ಅವರಿಗಿಂತೆ ನೂರು ಪಟ್ಟು ಗುಣವುಳ್ಳವರು ಚಿರಪಿತೃಗಳು. ಅವರಿಗಿಂತ ನೂರು ಪಟ್ಟು ಗುಣಗಳುಳ್ಳವರು ಅಜಾನಜದೇವತೆಗಳು, ಹೀಗೆಯೇ ಅಜಾನಜ ದೇವತೆಗಳು, ಕರ್ಮಜದೇವತೆಗಳು ಇತರರಾದ ಸ್ವಾಭಾವಿಕ ದೇವತೆಗಳು ದೇವಗುರು ಬೃಹಸ್ಪತ್ಯಾಚಾರ್ಯರು, ಪುರಂದರ, ರುದ್ರ, ಸರಸ್ವತೀ, ವಾಯುದೇವರು ಇವರಲ್ಲಿ ಮೊದಲು ಹೇಳಲ್ಪಟ್ಟವರಿಂದ ಅನಂತರ ಕಥಿತರು 100 ಗುಣಗಳಿಂದ ಉತ್ತಮರು. ಮುಕ್ತರಾದ ಮೇಲೂ ಇವರು ಒಬ್ಬರಿಗಿಂತ ಇನ್ನೊಬ್ಬರು ಮೂರ್ಯ ಗುಣಾಧಿಕರು ಎಂದು ಸ್ಪಷ್ಟ ಹೇಳತಕ್ಕ ಈ ಶ್ರುತಿವಾಕ್ಯವು ಮೋಕ್ಷದಲ್ಲೂ ತಾರ

ತಮ್ಮವಿದೆಯಂದು ಸಾರುತ್ತಿದೆ. ಈ ಶ್ರುತಿ ಬ್ರಹ್ಮ, ಶೇಷ, ಗರುಡರ ಹೆಸರನ್ನೇ ಹಿಡಿದಿಲ್ಲ ಯಾಕೆ? ಎಂದು ಸಂದೇಹ ಬರಬಹುದು. ಇದಕ್ಕೂ ಸಮಾಧಾನ ಈ ಶ್ರುತಿಯ ಮುಂದಿನ ಮಂತ್ರ ಸ್ಪಷ್ಟ ಪಡಿಸುತ್ತಾ ಇದೆ. ಬ್ರಹ್ಮ / ಅಂದರೆ ವಾಯು ವೆಂದರ್ಥ. ಯಾಕೆಂದರೆ ವಾಯುವೇ ಬ್ರಹ್ಮ ಪದವಿಯನ್ನು ಅಲಂಕರಿಸಿ ಬ್ರಹ್ಮ ನಾಗಿಯೇ ಮುಕ್ತನಾಗುತ್ತಾನೆ. ಮೋಕ್ಷದಲ್ಲಿ ವಾಯು ದೇವರು ಇಲ್ಲ. ವಾಯು ಎಂದರೆ ಬ್ರಹ್ಮವೆಂಬ ಅರ್ಥ ಇಟ್ಟುಕೊಂಡರೆ ಯಾವ ತೊಂದರೆಯೂ ಇಲ್ಲ. ಅದೇ ರೀತಿ ರುದ್ರನೂ ಶೇಷನಾಗಿಯೇ ಮುಕ್ತನಾಗುವುದರಿಂದ ಮುಕ್ತನಾದ ರುದ್ರ ಎಂದರೆ ಶೇಷ ಎಂಬ ಅರ್ಥ ಬರುತ್ತದೆ. ರುದ್ರನೂ ಗರುಡನೂ ಸಮಾನ ಯೋಗ್ಯತಾ ಸಂಪನ್ನರಾದುದರಿಂದ ರುದ್ರನ ಯೋಗ್ಯತೆಯನ್ನು ತಿಳಿಸಿದರೆ ಗರುಡನ ಸ್ವರೂಪವೂ ಸ್ಪಷ್ಟವಾಗಿ ತಿಳಿಯುತ್ತದೆಯೆಂಬ ಕಾರಣದಿಂದ ಪ್ರತ್ಯೇಕವಾಗಿ ಹೇಳಿಲ್ಲವೆಂಬುದಾಗಿ ಶ್ರುತಿಯೇ ತನ್ನ ಮಾತಿಗೆ ತಾನೇ ಸ್ಪಷ್ಟೀಕರಣ ನೀಡುತ್ತಿದೆ. ವಾಯುದೇವರಿಗೆ ಅಥವಾ ಬ್ರಹ್ಮದೇವರಿಗೆ ಸಮಾನರಾದವರು ಮುಕ್ತರಲ್ಲಿಯೂ ಯಾರೂ ಇಲ್ಲ.

॥ ೭೫ ॥

ಮುಕ್ತೇಷು ಶ್ರೀಸ್ತಥಾ ವಾಯೋಃ ಸಹಸ್ರಗುಣತಾ ಗುಣೈಃ।
ತತೋಽನಂತಗುಣೋ ವಿಷ್ಣುರ್ನಕಶ್ಚಿತ್ ತತ್ಸಮಃ ಸದಾ ॥

(ಇಲ್ಲಿ ಇರುವ 'ಮುಕ್ತೇಷು' ಎಂಬ ಪದವು ೭೪ನೇ ಶ್ಲೋಕದಲ್ಲಿ ಅನ್ವಿತವಾಗಿದೆ)

ಅರ್ಥ ತಥಾ–ಹಾಗೆಯೇ, ಶ್ರೀಃ–ಲಕ್ಷ್ಮೀದೇವಿಯು, ವಾಯೋಃ–ವಾಯು ದೇವರಿಗಿಂತ, ಗುಣೈಃ–ಉತ್ಕೃಷ್ಟ ಗುಣಗಳಿಂದ, ಸಹಸ್ರಗುಣತಾ–ಸಾವಿರ ಪಾಲು ಹೆಚ್ಚಿನವಳು, ತತಃ–ಆ ಲಕ್ಷ್ಮೀದೇವಿಗಿಂತಲೂ, ವಿಷ್ಣುಃ–ವಿಷ್ಣುವು, ಗುಣೈಃ–ಉತ್ಕೃಷ್ಟವಾದ ಗುಣಗಳಿಂದ, ಅನಂತಗುಣಃ–ಅನಂತ ಪಟ್ಟು ಹೆಚ್ಚಿನವನು, ಸದಾ–ಎಂದೆಂದೂ, ತತ್ಸಮಃ–ಅವನಿಗೆ ಸರಿಸಮಾನನಾದವನು ನ–ಇಲ್ಲ.

ತಾತ್ಪರ್ಯ ವಾಯುದೇವರಿಗಿಂತ ಸಾವಿರ ಪಾಲು ಅಧಿಕ ಗುಣಗಳಿಂದ ವಿರಿಪ್ಪಳು ಲಕ್ಷ್ಮೀದೇವಿ. ಶ್ರೀಮನ್ನಾರಾಯಣನು ಲಕ್ಷ್ಮೀದೇವಿಗಿಂತಲೂ ಅನಂತ ಪಟ್ಟು ಹೆಚ್ಚು ಗುಣಗಳಿಂದ ಪರಿಪೂರ್ಣನಾಗಿದ್ದಾನೆ. ಅತನಿಗೆ ಯಾರೂ ಸಮಾನರೂ ಇಲ್ಲ ಮತ್ತು

ಅವನಿಗಿಂತ ಉತ್ತಮರೂ ಇಲ್ಲ.

ಇತ್ಯಾದಿವೇದವಾಕ್ಯಂವಿಷ್ಣೋರುತ್ಕರ್ಷಮೇವವಕ್ತ್ಯುಚ್ಚೈಃ
ತಾತ್ಪರ್ಯಂ ಮಹದತ್ರೋತ್ಯುಕ್ತಂ "ಯೋ ಮಾಮಿತಿ" ಸ್ವಯಂ
ತೇನ ॥ ೭೬ ॥

ಅರ್ಥ ಇತ್ಯಾದಿ-ಇದೇ ಮೊದಲಾಗಿ, ವೇದವಾಕ್ಯಂ-ಶ್ರುತಿಗಳ ಮಾತು, ವಿಷ್ಣೋಃ-ಪರಮಾತ್ಮನ, ಉತ್ಕರ್ಷಮೇವ-ಸರ್ವೋತ್ತಮತೆಯನ್ನೇ, ಉಚ್ಚೈಃ-ಸ್ಪಷ್ಟವಾಗಿ, ವಕ್ತಿ-ಹೇಳುತ್ತಿದೆ. "ಯೋ ಮಾಮಿತಿ"-"ಯೋ ಮಾಮೇವ ಮಸಂ ಮೂಢಃ" ಇತ್ಯಾದಿ ಭಗವದ್ಗೀತೆಯ ಶ್ಲೋಕಗಳಲ್ಲಿ, ತೇನ-ಶ್ರೀಕೃಷ್ಣನಿಂದ, ಸ್ವಯಂ-ಸ್ವತಃ. ಅತ್ರ-ಈ ಸರ್ವೋತ್ತಮತ್ವ ವಿಷಯದಲ್ಲಿ, ಮಹತ್-ಬಹಳ, ತಾತ್ಪರ್ಯಂ-ತಾತ್ಪರ್ಯ ಇದೆ, ಇತಿ-ಎಂಬುದಾಗಿ, ಉಕ್ತಂ-ಹೇಳಲ್ಪಟ್ಟಿದೆ.

ತಾತ್ಪರ್ಯದಿಂದ ಹೇಳಿದ ವೇದ ವಾಕ್ಯವು ವಿಷ್ಣುವಿನ ಸರ್ವೋತ್ತಮತ್ವವನ್ನು ಸುಸ್ಪಷ್ಟವಾಗಿ ವಿವರಿಸಿದೆ. ಶ್ರೀ ಕೃಷ್ಣನು ಭಗವದ್ಗೀತೆಯ ಹದಿನೈದನೆಯ ಅಧ್ಯಾಯದಲ್ಲೂ ವಿಷ್ಣುವಿನ ಸರ್ವೋತ್ತಮತೆಯನ್ನು ತಾತ್ಪರ್ಯ ಪೂರ್ವಕವಾಗಿ ವಿವರಿಸಿದ್ದಾನೆ.

ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।
ಯೋ ಮಾಮೇವಮಸಂಮೂಢೋ ಜಾನಾತಿ ಪುರುಷೋತ್ತಮಮ್ ॥
ಸ ಸರ್ವವಿತ್ ಭಜತಿ ಮಾಂ ಸರ್ವಭಾವೇನ ಭಾರತ ।
ಇತಿ ಗುಹ್ಯತಮಂ ಶಾಸ್ತ್ರಂ ಇದಮುಕ್ತಂ ಮಯಾನಘ ॥

ಶ್ರೀ ಕೃಷ್ಣನು ಗೀತೆಯಲ್ಲಿ ಅಪ್ಪಣೆ ಕೊಡಿಸಿದ್ದಾನೆ. "ನಾನು ಕ್ಷರ ಹಾಗೂ ಅಕ್ಷರಗಳನ್ನು ಮೀರಿ ನಿಂತವನು. ಆದುದರಿಂದಲೇ ನಾನು ಪುರುಷೋತ್ತಮ ಹಾಗೂ ಪರಮಾತ್ಮನೆಂದೆನಿಸಿದ್ದೇನೆ. ನನ್ನನ್ನು ಈ ರೀತಿಯಾಗಿ ತಿಳಿದವನು ಸರ್ವಜ್ಞನಿಯಾಗುತ್ತಾನೆ. ಈ ಪ್ರಮೇಯವನ್ನು ಪ್ರತಿಪಾದಿಸುವ ಈ ಪದ್ಯವೂ ಅತ್ಯಂತ ರಹಸ್ಯ. ಇದನ್ನು ತಿಳಿದವ ಅಪರೋಕ್ಷ ಜ್ಞಾನಿಯಾಗುತ್ತಾನೆ, ಮೋಕ್ಷ ಸುಖವನ್ನು ಅನುಭವಿಸುತ್ತಾನೆ." ಸರ್ವೋತ್ತಮತ್ವವನ್ನು ತಿಳಿದವನನ್ನು ಇಲ್ಲಿ ಪ್ರಶಂಸಿಸು

೬ನೆ. ಜ್ಞಾನಿಗೆ ಫಲಗಳನ್ನು ಹೇಳುವುದರ ಮೂಲಕ ಸರ್ವೋತ್ತಮತ್ವದಲ್ಲಿ ತಾತ್ಪರ್ಯವಿದೆಯೆಂದು ಸ್ಪಷ್ಟ ತಾನೆ?

ಭೂಮೈೋಜ್ಯಾಯಸ್ತ್ವಮಿತಿಹ್ಯುಕ್ತಂಸೂತ್ರೇಷು
ನಿರ್ಣಯಾತ್ತೇನ ।ತತ್ಪ್ರೀತ್ಯೈವಚವೈೋಕ್ಷ್ಯಃಪ್ರಾಪ್ತಸ್ತೇನೈವನಾನ್ಯೇನ ॥ ೭೭ ॥

ಅರ್ಥ ತೇನ–ವೇದವ್ಯಾಸ ರೂಪಿಯಾದ ಪರಮಾತ್ಮನಿಂದ, ನಿರ್ಣಯಾತ್–ನಿರ್ಣಯವನ್ನು ಮಾಡಿ, ಭೂಮೈೋಜ್ಯಾಯಸ್ತ್ವಂ ಇತಿ-"ಭೂಮ್ನಃಕ್ರತುವಜ್ಜ್ಯಾಯಸ್ತ್ವಂ ತಥಾಹಿದರ್ಶಯತಿ" ಇದೇ ಮೊದಲಾದ, ಸೂತ್ರೇಷು-ಬ್ರಹ್ಮ ಸೂತ್ರಗಳಲ್ಲಿ, ಭೂಮ್ನಃ–ಭಗವಂತನ ಗುಣ ಪೂರ್ಣತ್ವಕ್ಕೆ, ಜ್ಯಾಯಸ್ತ್ವಂ–ಮುಖ್ಯವೃತ್ತಿಯಿಂದ ವೇದ ಪ್ರತಿಪಾದ್ಯತ್ವವು ಉಕ್ತಂ ಹಿ-ಹೇಳಲ್ಪಟ್ಟಿದೆಯಷ್ಟೇ, ತೇನವಿವ-ಭಗವಂತನ ಪ್ರೀತಿ ಪಾತ್ರನಾದವನಿಂದಲೇ, ತತ್ಪ್ರೀತ್ಯೈವ-ಪರಮಾತ್ಮನ ಪ್ರಸಾದದಿಂದಲೇ, ಮೋಕ್ಷಃ-ಮುಕ್ತಿಯು, ಪ್ರಾಪ್ತಃ-ಹೊಂದಲರ್ಹವಾಗಿದೆ ನತಅನ್ಯೇನ-ಇತರರಿಂದ ಪ್ರಾಪ್ತ ಅಲ್ಲ.

ತಾತ್ಪರ್ಯ ಸಮಸ್ತ ವೇದಾರ್ಥ ನಿರ್ಣಯಕ್ಕಾಗಿ ಶ್ರೀ ವೇದವ್ಯಾಸದೇವರು ಬ್ರಹ್ಮ ಸೂತ್ರಗಳನ್ನು ರಚನೆ ಮಾಡಿದ್ದಾರೆ. ವ್ಯಾಸರು ತನ ಈ ನಿರ್ಣಾಯಕ ವಾದ ಬ್ರಹ್ಮ ಸೂತ್ರಗಳಲ್ಲಿ ವಿಷ್ಣುವಿನ ಸರ್ವೋತ್ತಮತೆಯು ಸಕಲ ವೇದ ತಾತ್ಪರ್ಯ ವಿಷಯವೆನ್ನುವುದನ್ನು ಸಮರ್ಥಿಸಿದ್ದಾರೆ. ಭೂಮ್ನಃ ಕ್ರತುವಜ್ಜ್ಯಾಯಸ್ತ್ವಂ ತಥಾ ಹಿ ದರ್ಶಯತಿ ಎಂಬ ಸೂತ್ರದ ಅರ್ಥ ಹೀಗಿದೆ. ಭೂಮ್ನಃ-ಭೂಮಗುಣ ಅಂದರೆ ಗುಣಪೂರ್ಣತೆಗೆ ಅಥವಾ ಸರ್ವೋತ್ತಮತೆಗೆ ಜ್ಯಾಯಸ್ತ್ವಂ-ಸಕಲಗುಣ ಗಳಿಗಿಂತಲೂ ಪ್ರಾಧಾನ್ಯವಿದೆ. ಸಕಲ ಶಾಸ್ತ್ರಗಳಲ್ಲಿಯೂ ತಾತ್ಪರ್ಯವಿದೆ. ಕ್ರತುವತ್ ಸಕಲ ಕ್ರಿಯೆಗಳಲ್ಲೂ ಜ್ಯೊತಿಷ್ಟೋಮ ಹೇಗೆ. ಶ್ರೇಷ್ಠವೋ ವೇದ ತಾತ್ಪರ್ಯ ವಿಷಯೀ ಭೂತವೋ ಅದರಂತೆ. ತಥಾಹಿ ದರ್ಶಯತಿ ಈ ವಿಷಯದಲ್ಲಿ ಸರ್ವೋ ತ್ಕರ್ಷೇ ದೇವ ದೇವಸ್ಯ ಎಷ್ಣೋಃ ಮಾಹಾತಾತ್ಪರ್ಯಂ ನೈವಚಾನ್ಯತ್ರ ಸತ್ಯಂ ಇತ್ಯಾದಿ

ಸೂತ್ರಗಳು ಇದೇ ಅರ್ಥ ಸಾಧಕಗಳು.

ಹೀಗೆ ವೇದ ವೇದಾಂತಗಳಿಂದ ವಿಷ್ಣುವಿನ ಸರ್ವೋತ್ತಮತೆಯನ್ನು ಸಾಧಿಸಿ ತೋರಿಸಿ ಯುಕ್ತಿಯಿಂದಲೂ ಸಮರ್ಥಿಸುವುದಕ್ಕೋಸ್ಕರ ಉತ್ತರಾರ್ಧವನ್ನು ಈ ಶ್ಲೋಕದಲ್ಲಿ ಸೇರಿಸಿದ್ದಾರೆ. "ತತ್‌ಪ್ರೀಣನಾತ್ ವೋಕ್ಷವಾಪ್ನೋತಿ ಸರ್ವಃ" (ತತೋ ವೇದಾಃ ತತ್ಪರಾ ಏವ) ಇತ್ಯಾದಿ ಶ್ರುತಿಗಳು ಭಗವಂತನ ಪ್ರೀತಿಯಿಂದಲೇ ಮೋಕ್ಷವೆಂದು ಸಾರುತ್ತಿದೆ. ಪರಮಾತ್ಮನು ಪ್ರೀತನಾಗಬೇಕಾದರೆ ನಾವು ಆತನಲ್ಲಿ ಭಕ್ತಿ ಅಥವಾ ಸುದೃಢ ಸ್ನೇಹ ಮಾಡಬೇಕು ಹೊರತು ದ್ವೇಷದಿಂದ ಅಲ್ಲ. ಆತನು ನಮ್ಮಲ್ಲಿ ಪ್ರೀತನಾಗಬೇಕಾದರೆ ಆತನ ಮಾಹಾತ್ಮ್ಯಜ್ಞಾನ ಅತ್ಯಾವಶ್ಯಕ. ಅದುದರಿಂದ ಶ್ರುತ್ಯುಕ್ತವಾದ ಪ್ರೀತಿಗೆ ಮೋಕ್ಷೆ ಕಾರಣತ್ವವನ್ನು ಕೂಡಿಸಬೇಕಾದರೆ ಆತನ ಸರ್ವೋತ್ತಮತ್ವರೂಪ ಮಾಹಾತ್ಮ್ಯದಲ್ಲಿ ಸಕಲ ವೇದಗಳಿಗೂ ತಾತ್ಪರ್ಯವಿದೆಯೆಂದು ಒಪ್ಪಲೇಬೇಕಾಯಿತು.

ಪರಮಾತ್ಮನ ಪ್ರಾಪ್ತಿಗೆ ಪರಮಾತ್ಮನ ಪ್ರಸಾದನೇ ಕಾರಣ ಎನ್ನುವುದನ್ನು ಕಾರಕೋಪನಿಷತ್ತು ಸ್ಪಷ್ಟವಾಗಿ ಸಾರುತ್ತಿದೆ.

"ನಾಯಮಾತ್ಮಾಪ್ರವಚನೇನಲಭ್ಯೋನಮೇಧಯಾನ
ಬಹುನಾಶ್ರುತೇನ ।
ಯಮೇವೈಷ ವೃಣುತೇ ತೇನ
ಲಭ್ಯಸ್ತಸ್ಯೈಷಆತ್ಮಾವಿವೃಣುತೇ ತನುಂಸ್ವಾಮ್ ॥ ೭೪ ॥

ಅರ್ಥ ಅಯಂ–ಈ, ಆತ್ಮಾ– ಪರಮಾತ್ಮನು. ಪ್ರವಚನೇನ– ಶಾಸ್ತ್ರಗಳ ವ್ಯಾಖ್ಯಾನದಿಂದ, ನ ಲಭ್ಯಃ–ಹೊಂದಲ್ಪಡಲಾರನು, ಮೇಧಯಾ–ಪ್ರಜ್ಞಾಶಕ್ತಿಯಿಂದಲೂ, ನ ಲಭ್ಯಃ–ಹೊಂದಲ್ಪಡಲಾರನು, ಬಹುನಾ-ಬಹಳ ಸಲ, ಶ್ರುತೇನ–ಶಾಸ್ತ್ರ ಶ್ರವಣ ಮಾಡುವುದರಿಂದ, ನ ಲಭ್ಯಃ-ಪ್ರಾಪ್ತನಾಗಲಾರ, ಯಂ-ಯಾವನನ್ನು, ವೃಣುತೇ-ತನ್ನವನನ್ನಾಗಿ ಸ್ವೀಕರಿಸುತ್ತಾನೋ, ಅಂದರೆ ಯಾರ ಮೇಲೆ ಪ್ರಸನ್ನನಾಗುತ್ತಾನೋ, ತೇನ ಏವ–ಆಜೀವನಿಂದಲೇ, ಲಭ್ಯಃ–ಪರಮಾತ್ಮನು ಪ್ರಾಪ್ಯ. ಏಷಃ ಆತ್ಮಾ-ಈ ಪರಮಾತ್ಮನು, ತಸ್ಯ-ಪ್ರಸಾದ ಪಾತ್ರನಾದ ಜೀವನಿ

ಗೆನೇ, ಸ್ವಾಂ-ತನ್ನ ಸಂಬಂಧಿಯಾದ. ತನುಂ-ಸ್ವರೂಪವನ್ನು, ವಿವೃಣುತೇ-ಪ್ರದರ್ಶಿಸುತ್ತಾನೆ.

ತಾತ್ಪರ್ಯ ಈ ಕಾರಕ ಮಂತ್ರದಿಂದ ಪರಮಾತ್ಮನ ಪ್ರೀತಿಯೇ ಪರಮಾತ್ಮನ ಪ್ರಾಪ್ತಿಗೆ ಆತನ ಬಿಂಬ ರೂಪ ಸಾಕ್ಷಾತ್ಕಾರಕ್ಕೆ ನಿಮಿತ್ತವೆಂದು ಸಾರುತ್ತಿದೆ. ಕೇವಲ ಪಾಠಪ್ರವಚನದಿಂದಾಗಲೀ, ಪ್ರಜ್ಞಾಶಕ್ತಿಯಿಂದಾಗಲೀ ಶಾಸ್ತ್ರ ಶ್ರವಣದಿಂದಾಗಲೀ ದೇವರನ್ನು ಯಾರೂ ಹೊಂದಲಾರರು, ಯಾವನನ್ನು ತನ್ನವನನ್ನಾಗಿ ಆರಿಸುತ್ತಾನೋ ಯಾರ ಮೇಲೆ ಪ್ರಸಾದವನ್ನು ಮಾಡುತ್ತಾನೋ ಆತನೇ ಭಗವಂತನನ್ನು ಹೊಂದಬಲ್ಲ, ಪ್ರಸಾದ ಪಾತ್ರನಾದ ಭಕ್ತನ ಅಜ್ಞಾನದ ಪರದೆಯನ್ನು ಸರಿಸಿ ತನ್ನ ರೂಪದ ದರ್ಶನ ಕೊಡುತ್ತಾನೆ. ಆಗ ಜೀವನು ಆತನನ್ನು ಸಾಕ್ಷಾತ್ ನೋಡಬಲ್ಲ. ಭಗವಂತನ ಪ್ರಸಾದಕ್ಕಿಂತಲೂ ಮೋಕ್ಷಕ್ಕೆ ಬೇರೆ ಮಾರ್ಗ ಇನ್ನೊಂದಿಲ್ಲ.

ಇಲ್ಲಿಂದ ಆರಂಭಿಸಿ ಭಕ್ತಿಶ್ಚೈತ್ಯಾವಿಮುಕ್ತಿಯೇ (99 ನೇಶ್ಲೋಕ) ಎಂಬಲ್ಲಿಯ ತನಕ ಭವಿಷ್ಯತ್ ಪರ್ವದ ಪಾಠಗಳನ್ನು ತಮ್ಮ ಗ್ರಂಥದಲ್ಲಿ ಸೇರಿಸಿದ್ದಾರೆ. ಆಚಾರ್ಯರು ಹಿಂದೆ ನಿರೂಪಿಸಿರತಕ್ಕ ಮೋಕ್ಷ ಸಾಮಗ್ರಿಗಳು ಈ ಪುರಾಣಗಳಲ್ಲಿ ಸುಸ್ಪಷ್ಟವಾಗಿವೆ.

ವಿಷ್ಣುರ್ಹಿದಾತಾಮೋಕ್ಷಸ್ಯವಾಯುಶ್ಚತದನುಜ್ಞಯಾ ।
ಮೋಕ್ಷೋಪ್ಯೇಜ್ಞಾನಂಚಕ್ರಮಶೋಮುಕ್ತಿಗೋಭೋಗ
ಏವಚ ॥ ೭೯ ॥

ಉತ್ತರೇಷಾಂಪ್ರಸಾದೇನನೀಚಾನಾಂನಾನ್ಯಥಾಭವೇತ್ ।
ಸರ್ವೇಷಾಂಚಹರಿರ್ನಿತ್ಯಂನಿಯಂತಾತದ್ವಶಾಃಪರೇ ॥ ೮೦ ॥

ಅರ್ಥ ವಿಷ್ಣುಃ ಹಿ-ವಿಷ್ಣುವೇ, ಮೋಕ್ಷಸ್ಯ-ಮೋಕ್ಷದ, ದಾತಾ-ದಾತೃನಾಗಿದ್ದಾನೆ, (ಕೊಡತಕ್ಕವನಾಗಿದ್ದಾನೆ). ವಾಯುಶ್ಚ-ವಾಯು ದೇವರೂ ಕೂಡಾ, ತದನುಜ್ಞಯಾ-ಪರಮಾತ್ಮನ ಆಜ್ಞೆಯಿಂದ ಮೋಕ್ಷಸ್ಯದಾತಾ-ಮುಕ್ತಿ

ಯ್ತನ್ನು ಕೊಡುತ್ತಾರೆ. ಉತ್ತರೇಷಾಂ-ಉತಮಜೀವ ರಾಶಿಗಳ, ಪ್ರಸಾದೇನ-ಅನುಗ್ರಹದಿಂದ, ನೀಚಾನಾಂ-ಅಧಮ ಜೀವರಾಶಿಗಳಿಗೆ, ಮೋಕ್ಷಃ-ಮುಕ್ತಿಯು, ಜ್ಞಾನಂ ಚ-ಜ್ಞಾನವೂ. ಕ್ರಮಶಃ-ತಾರತಮ್ಯಕ್ಕೆ ಅನುಗುಣವಾದ, ಮುಕ್ತಿಗಃ-ಮುಕ್ತಿಯಲ್ಲಿರತಕ್ಕ, ಭೋಗಃ-ಸುಖಾನುಭವವು, ಭವೇತ್-ಆಗುವುದು, ಅನ್ಯಥಾ-ಇದಕ್ಕೆ ವಿರುದ್ಧವಾಗಿ, ನ ಏವ-ಇಲ್ಲವೇ ಅಲ್ಲ. ಸರ್ವೇಷಾಂ-ಎಲ್ಲ ಜೀವರಿಗೂ ಕೂಡಾ, ಹರಿಃ-ಪರಮಾತ್ಮನು, ನಿತ್ಯನಿಯಂತಾ-ಸದಾ ನಿಯಮನ ಮಾಡತಕ್ಕವನಾಗಿದ್ದಾನೆ. ಪರೇ-ಇತರರೆಲ್ಲರೂ, ತದ್ವಶಾಃ-ಆತನ ಅಧೀನರು.

ತಾತ್ಪರ್ಯ ಶ್ರೀಹರಿಯೇ ಮೋಕ್ಷವನ್ನು ಕರುಣಿಸತಕ್ಕವನು. ವಾಯುದೇವರು ಈತನ ಆಜ್ಞಾಧಾರಿಗಳಾಗಿ ಮೋಕ್ಷವೀಯುತ್ತಾರೆ. ಬಂಧ ವಿಮೋಚನೆಗೆ ಮೋಕ್ಷದಲ್ಲಿ ಆಗತಕ್ಕ ನಿತ್ಯ ಸುಖಪ್ರಾಪ್ತಿಗೆ ಭಗವಂತನ ಹಾಗೂ ವಾಯುದೇವರ ಅನುಗ್ರಹದ ಅಪೇಕ್ಷೆ ಹೇಗೆ ಇದೆಯೋ ಅದರಂತೆ ತನಗಿಂತ ಉತ್ತಮರ ಪ್ರಸಾದವೂ ಅತ್ಯಾವಶ್ಯಕ. ಅವರವರ ಯೋಗ್ಯತೆಗೆ ಅನುಗುಣವಾಗಿಯೇ ಮುಕ್ತಿಯಲ್ಲಿ ಭೋಗವಾಗುತ್ತದೆ. ಎಲ್ಲರೂ ಅವರ ಅವರ ಯೋಗ್ಯತಾ ಪ್ರಕಾರ ಆನಂದಪೂರ್ಣರು. ಬಂಧನರಹಿತರು ಆದರೂ ಎಲ್ಲರೂ ಭಗವಧೀನರು. ಶ್ರೀಹರಿಯು ಪ್ರತಿಯೊಬ್ಬರಿಗೂ ನಿಯಾಮಕನು.

ತಾರತಮ್ಯಂ ತತೋ ಜ್ಞೇಯಂ ಸರ್ವೋತ್ಕೃಷ್ಟತ್ವಂ ಹರೇಸ್ತಥಾ।
ಏತದ್ವಿನಾ ನಕಸ್ಯಾಪಿ ವಿಮುಕ್ತಿಃ ಸ್ಯಾತ್ ಕಥಂಚನ ॥೬೧॥

ಅರ್ಥ ತತಃ-ಮೋಕ್ಷಕ್ಕಾಗಿ, ತಾರತಮ್ಯಂ- ನೀಚೋಚ್ಚತೆಯು, ತಥಾ-ಹಾಗೆಯೇ, ಹರೇಃ-ಶ್ರೀಹರಿಯ, ಸರ್ವೋತ್ಕೃಷ್ಟತ್ವಂ-ಸರ್ವೋತ್ಕೃಷ್ಟತೆಯು, ಜ್ಞೇಯಂ-ತಿಳಿಯಲ್ಪಡಬೇಕು, ಏತದ್-ಇದನ್ನು, ವಿನಾ-ಹೊರತಾಗಿ, ಕಥಂಚನ-ಯಾವ ಪ್ರಕಾರದಿಂದಲೂ, ಕಸ್ಯ ಅಪಿ-ಯಾವಾತನಿಗೂ, ವಿಮುಕ್ತಿಃ-ಮೋಕ್ಷವು, ನ ಸ್ಯಾತ್-ಆಗಲಾರದು,

ತಾತ್ಪರ್ಯ ಮೋಕ್ಷಕ್ಕೆ ಜೀವರಲ್ಲಿರತಕ್ಕ ಯೋಗ್ಯತಾನುಗುಣವಾದ ನೀಚೋಚ್ಚತೆ

ಹಾಗೂ ಭಗವಂತನ ಸರ್ವೋತ್ಕೃಷ್ಟತೆ ಇವುಗಳ ಜ್ಞಾನವೇ ಮುಕ್ತಿ ಕಾರಣ. ಇವುಗಳನ್ನು ಹೊರತು ಮುಕ್ತಿಗೆ ಅನ್ಯ ಮಾರ್ಗವಿಲ್ಲ.

ವಿಶೇಷಾರ್ಥ ಇಲ್ಲಿ ಶ್ರೀ ವಾದಿರಾಜರು ತತಃ ಎಂಬುದಕ್ಕೆ ತದರ್ಥಂ ಅಂದರೆ ಮೋಕ್ಷಾರ್ಥ ಎಂಬುದಾಗಿ ಅರ್ಥ ಬರೆದಿದ್ದಾರೆ.

ಪಂಚಭೇದಾಂಶ್ಚ ವಿಜ್ಞಾಯ ವಿಷ್ಣೋಃ ಸ್ವಾಭೇದಮೇವಚ ।
ನಿರ್ದೋಷತ್ವಂ ಗುಣೋದ್ರೇಕಂ ಜ್ಞಾತ್ವಾ ಮುಕ್ತಿರ್ನ
ಚಾನ್ಯಥಾ ॥ ೮೨ ॥

ಅರ್ಥ ಪಂಚ-ಐದು ಸಂಖ್ಯಾಕಗಳಾದ, ಭೇದಾನ್ ಚ-ಭೇದಗಳನ್ನೂ ಕೂಡಾ ಜ್ಞಾತ್ವಾ-ತಿಳಿದು, ವಿಷ್ಣೋಃ-ವಿಷ್ಣುವಿಗೆ, ಸ್ವಾಭೇದಮೇವ-ಅತನ ಅವತಾರಾದಿಗಳಿಂದ ಅಭೇದವನ್ನೇ, ವಿಜ್ಞಾಯ-ತಿಳಿದು, ವಿಷ್ಣೋಃ-ಶ್ರೀಹರಿಗೆ, ನಿರ್ದೋಷತ್ವಂ-ದೋಷಾಭಾವವನ್ನು, ಗುಣೋದ್ರೇಕಂ ಚ-ಗುಣಪೂರ್ಣತೆಯನ್ನು, ಜ್ಞಾತ್ವಾ-ತಿಳಿದು (ವಿದ್ಯಮಾನಸ್ಯ)-ಇರತಕ್ಕ ಜೀವನಿಗೆ, ಮುಕ್ತಿಃ-ಮೋಕ್ಷವು ಸಿದ್ಧಿಸುತ್ತದೆ. ಅನ್ಯಥಾ-ಇದಕ್ಕೆ ವಿಪರೀತವಾಗಿ ತಿಳಿಯುವುದು, ನ ಚ-ಮೋಕ್ಷಸಾಧನವಲ್ಲ.

ತಾತ್ಪರ್ಯ ಜೀವೇಶ್ವರಭೇದಾದಿ ಪಂಚಭೇದಗಳ ಜ್ಞಾನ ಇರಬೇಕು. ಶ್ರೀಹರಿಗೂ ಅತನ ಅನಂತ ಅವತಾರಗಳಿಗೂ ಪರಸ್ಪರ ಭೇದವನ್ನು ತಿಳಿಯಲೇಬಾರದು. ಭಗವದವತಾರಗಳಿಗೆ ಅಭೇದವನ್ನೇ ಅರಿಯಬೇಕು. ಭಗವಂತನಿಗೆ ಗುಣಪೂರ್ಣತ್ವ ಮತ್ತು ನಿರ್ದೋಷತ್ವವನ್ನು ಅವಶ್ಯವಾಗಿ ನಿಶ್ಚಯ ಮಾಡಿಕೊಳ್ಳಬೇಕು. ಈ ತತ್ವ ಜ್ಞಾನವೇ ಮುಕ್ತಿಸಾಧನ. ಇದಕ್ಕೆ ವಿಪರೀತ ಜ್ಞಾನ ಮೋಕ್ಷಕ್ಕೆ ಸಾಧನವಲ್ಲ.

ಅವತಾರಾನ್ ಹರೇರ್ಜ್ಞಾತ್ವಾ ನಾವತಾರಾ
ಹರೇಶ್ಚ ಯೇ । ತದಾವೇಶಾಂಸ್ತಥಾ ಸಮ್ಯಗ್
ಜ್ಞಾತ್ವಾ ಮುಕ್ತಿರ್ನ ಚಾನ್ಯಥಾ ॥ ೮೩ ॥

ಅರ್ಥ ಹರೇ:-ಪರಮಾತ್ಮನ, ಅವತಾರಾನ್-ಅವತಾರ ರೂಪಗಳನ್ನು, ಸಮ್ಯಗ್ ಜ್ಞಾತ್ವಾ-ಸರಿಯಾಗಿ ತಿಳಿದು, ಯೇ-ಯಾವ, ಹರೇಃ-ಪರಮಾತ್ಮನ, ಅವತಾರಾಃ-ಅವತಾರಗಳೋ, ತಾನ್ ಚ-ಅವುಗಳನ್ನು, ಸಮ್ಯಗ್ ವಿಜ್ಞಾಯ-ಸರಿಯಾಗಿ ತಿಳಿದು, ಯೇ-ಯಾವು, ನ ಅವತಾರಾಃ-ಅವತಾರಗಳಲ್ಲವೋ, ತಥಾ-ಹಾಗೆಯೇ, ತದಾವೇಶಾನ್-ಪರಮಾತ್ಮನ ಆವೇಶಗಳನ್ನು, ಸಮ್ಯಗ್-ಸರಿಯಾಗಿ, ಜ್ಞಾತ್ವಾ-ತಿಳಿದು, [ವಿದ್ಯಮಾನಸ್ಯ]-ಇರತಕ್ಕಜೀವನಿಗೆ, ಮುಕ್ತಿ:-ಮೋಕ್ಷವು ಸಿಗುತ್ತದೆ. ಅನ್ಯಥಾ-ಇದಕ್ಕೆ ವಿಪರೀತ ಜ್ಞಾನದಿಂದ, ನ ಚ ಮುಕ್ತಿ:-ಮುಕ್ತಿ ಸಿಗಲಾರದು.

ತಾತ್ಪರ್ಯ ಮತ್ಸ್ಯ- ಕೂರ್ಮ ಮೊದಲಾದ ರೂಪಗಳನ್ನು ಭಗವದವತಾರಗಳೆಂದೇ ತಿಳಿಯಬೇಕು. ಶ್ರೀಹರಿಯ ಅವತಾರವಾಗದಿರತಕ್ಕ ಬ್ರಹ್ಮ ರುದ್ರಾದಿ ದೇವತೆಗಳನ್ನು ಅವತಾರವಲ್ಲವೆಂದೇ ತಿಳಿಯಬೇಕು. ಬಲಭದ್ರನು ಶ್ರೀಹರಿಯ ಅವತಾರವಲ್ಲ. ಆದರೆ ಪರಮಾತ್ಮನ ಆವೇಶ ಇದೆ. ಆದುದರಿಂದ ಬಲಭದ್ರ ಮೊದಲಾದವರನ್ನು ಪರಮಾತ್ಮನ ಆವೇಶವುಳ್ಳವರನ್ನಾಗಿ ತಿಳಿಯಬೇಕು. ಇದಕ್ಕೆ ವ್ಯತ್ಯಸ್ತವಾಗಿ ತಿಳಿದರೆ ಮುಕ್ತಿ ಸಾಧ್ಯವಾಗಲಾರದು.

ಸೃಷ್ಟಿರಕ್ಷಾಹೃತಿ ಜ್ಞಾನ ನಿಯತ್ಯ ಜ್ಞಾನ ಬಂಧನಾನ್ ।
ಮೋಕ್ಷಂಚ ವಿಷ್ಣುತಸ್ತ್ವೇವ ಜ್ಞಾತ್ವಾ ಮುಕ್ತಿರ್ನಚಾನ್ಯಥಾ
॥ ೮೪ ॥

ಅರ್ಥ ಸೃಷ್ಟಿ ... ... ಬಂಧನಾನ್-(ಸೃಷ್ಟಿ)-ಉತ್ಪತ್ತಿಯು, ರಕ್ಷಾ-ರಕ್ಷಣೆಯು, ಹೃತಿ-ಸಂಹಾರವು, ಜ್ಞಾನ-ಜ್ಞಾನವು, ಅಜ್ಞಾನ-ಅಜ್ಞಾನವು, ಬಂಧನಾನ್-ಬಂಧನಗಳಾದ ಕಾಮ ಕರ್ಮಾದಿಗಳನ್ನು, ಮೋಕ್ಷಂ ಚ-ಮುಕ್ತಿಯನ್ನೂ ಕೂಡಾ, ವಿಷ್ಣುತಃಏವ-ಶ್ರೀ ವಿಷ್ಣುವಿನಿಂದಲೇ ಆಗತಕ್ಕದ್ದನ್ನಾಗಿ, ಜ್ಞಾತ್ವಾ-ತಿಳಿದು (ವಿದ್ಯಮಾನಸ್ಯ)-ಇರತಕ್ಕ ಜೀವನಿಗೆ, ಮುಕ್ತಿಃ-ಮೋಕ್ಷವು ಆಗುವುದು, ಅನ್ಯಥಾ-ಈ ಜ್ಞಾನ ಇಲ್ಲದೆ ಹೋದ ಪಕ್ಷದಲ್ಲಿ, ನಮುಃಕ್ತಿಃ-ಮುಃಕ್ತಿಯಾಗಲಾರದು.

ತಾತ್ಪರ್ಯ ಸಕಲ ಪದಾರ್ಥಗಳಿಗೂ ಉತ್ಪತ್ತಿ, ರಕ್ಷಣೆ, ಸಂಹಾರ, ಜ್ಞಾನ, ಅಜ್ಞಾನ, ನಿಯಮನೆ, ಬಂಧನೆ, ಮೋಕ್ಷಗಳೆಲ್ಲವೂ ಶ್ರೀಹರಿಯಿಂದಲೇ ಆಗುವುದು. ಈ ಜ್ಞಾನವು ಮುಕ್ತಿಗೆ ಸಾಧನವಾಗಿದೆ.

ವಿಶೇಷ ಬಧ್ನಂತಿ ಇತಿ ಬಂಧಾಃ ಎಂದ ವಿಗ್ರಹವನ್ನು ತೋರಿಸುತ್ತಾ ಶ್ರೀ ವಾದಿರಾಜರು ಬಂಧನ ಶಬ್ದದ ಪುಲ್ಲಿಂಗಸಾಧುತ್ವವನ್ನು ಪ್ರತಿಪಾದಿಸಿದ್ದಾರೆ.

ವೇದಾಂಶ್ಚ ಪಂಚರಾತ್ರಾಣಿ ಸೇತಿಹಾಸ ಪುರಾಣಕಾನ್ ।
ಜ್ಞಾತ್ವಾವಿಷ್ಣುಪರಾನೇವಮುಚ್ಯತೇನಾನ್ಯಥಾ
ಕ್ವಚಿತ್ ॥ ೮೫ ॥

ಅರ್ಥ ಸೇತಿಹಾಸಪುರಾಣಕಾನ್-ಇತಿಹಾಸ ಹಾಗೂ ಪುರಾಣ ಗ್ರಂಥಗಳಿಂದ ಕೂಡಿದ, ವೇದಾನ್-ವೇದಗಳನ್ನು. ಪಂಚರಾತ್ರಾಣಿಚ-ಪಂಚರಾತ್ರಾಗಮವನ್ನು, ವಿಷ್ಣುಪರಾನೇವ-ಮಹಾ ವಿಷ್ಣುವನ್ನೇ ತಾತ್ಪರ್ಯ ಪೂರ್ವಕವಾಗಿ ತಿಳಿಸತಕ್ಕವುಗಳನ್ನಾಗಿ, ಜ್ಞಾತ್ವಾ-ತಿಳಿದು, (ವಿದ್ಯವಾನಃ)-ಇರತಕ್ಕ ಯೋಗ್ಯ ಜೀವನು, ಮುಚ್ಯತೇ-ಮುಕ್ತನಾಗುತ್ತಾನೆ, ಕ್ವಚಿತ್-ಎಂದೆಂದೂ, ಅನ್ಯಥಾ-ಇದಕ್ಕೆ ವಿಪರೀತವಾಗಲಾರದು.

ತಾತ್ಪರ್ಯ ಸಕಲ ವೇದ ವೇದಾಂತಗಳೂ, ಇತಿಹಾಸ ಪುರಾಣಗಳೂ, ಪಂಚರಾತ್ರಾಗಮವೂ ವಿಷ್ಣುವನ್ನೇ ತಾತ್ಪರ್ಯ ಪೂರ್ವಕವಾಗಿ ತಿಳಿಸಿ ಕೊಡುತ್ತವೆ ಯೆನ್ನುವ ಜ್ಞಾನದಿಂದಲೇ ಮುಕ್ತಿಯಾಗುವುದು ಶದ್ವಿರುದ್ಧ ಜ್ಞಾನದಿಂದ ಮುಕ್ತಿ ಯಾಗಲಾರದು.

ಮಾಹಾತ್ಮ್ಯಜ್ಞಾನಪೂರ್ವಸ್ತು ಸುದೃಢಃ ಸರ್ವತೋಽಧಿಕಃ ।
ಸ್ನೇಹೋಭಕ್ತಿರಿತಿಪ್ರೋಕ್ತಃ ತಯಾಮುಕ್ತಿರ್ನ
ಚಾನ್ಯಥಾ ॥ ೮೬ ॥

ಅರ್ಥ ಮಾಹಾತ್ಮ್ಯಜ್ಞಾನಪೂರ್ವಃ-ಸರ್ವೋತ್ತಮತ್ವಜ್ಞಾನಪೂರ್ವಕನಾದ, ಸುದೃಢಃ-ಅತ್ಯಂತದೃಢವಾದ.ಸರ್ವತಃ-ಸಕಲಆತ್ಮೀಯವಸ್ತುಗಳದೆಸೆಯಿಂದ(ಐಶ್ವರ್ಯಕ್ಕ ಸ್ನೇಹಕ್ಕಂತಲೂ), ಅಧಿಕಃ-ಮಿಗಿಲಾದ, ಸ್ನೇಹಃತು-ಪ್ರೀತಿಯೇ, ಭಕ್ತಿಃಇತಿ-ಭಕ್ತಿ ಯೆಂಬುದಾಗಿ, ಪ್ರೋಕ್ತಃ-ಹೇಳಲ್ಪಟ್ಟಿದೆ. ತಯಾ-ಆ ಭಕ್ತಿಯಿಂದಲೇ, ಮುಕ್ತಃ-ವೋಕ್ಷವು. ಅನ್ಯಥಾ ನಚ-ಇದಕ್ಕೆ ವಿಪರೀತವಾಗಲಾರದು.

ತಾತ್ಪರ್ಯ ಸರ್ವೋತ್ತಮತ್ವ, ಗುಣಪೂರ್ಣತ್ವ, ನಿರ್ದೋಷತ್ವ ಇತ್ಯಾದಿ ಭಗವಂತನ ಅಪಾರ ಮಹಿಮೆಯನ್ನರಿತು ಆತನಲ್ಲಿ ಮಾಡುವ ನಿರವಧಿಕವಾದ ಸುದೃಢವಾದ ಸ್ನೇಹಕ್ಕೆ ಭಕ್ತಿಯೆನ್ನುತ್ತಾರೆ. ಈ ಪ್ರೇಮವು ಯಾವುದೇ ಕುಂಟುನೆಪಕ್ಕೆ ಬಲಿಯಾಗಿ ಮುರಿಯಬಾರದು. ಯಾವುದೇ ವಿಧದ ಅಡ್ಡಿ ಆತಂಕಗಳಿಗೆ ಒಳಗಾಗಿ ನಾಶವಾಗ ಬಾರದು.ಕ್ರಮೇಣಹ್ರಾಸ ಹೊಂದಬಾರದು. ಕ್ಷಣಕಣ್ಣಕ್ಕೂವೃದ್ಧಿಹೊಂದುತ್ತಿರಬೇಕು. ಈ ತರಹೆ ಸ್ನೇಹ ಬೇರೆ ಯಾರಲ್ಲೂ ಯಾವುದರಲ್ಲೂ ಮಾಡಕೂಡದು. ಈ ಪರಮ ಪ್ರೇಮವೇ ಭಕ್ತಿಯೆನಿಸುತ್ತದೆ. ಇದು ಮೋಕ್ಷಕ್ಕೆ ಕಾರಣ. ಈ ಭಕ್ತಿ ಯಿಲ್ಲದ ಶುಷ್ಕಜೀವ ಮುಕ್ತಿಯನ್ನು ಖಂಡಿತವಾಗಿಯೂ ಪಡೆಯಲಾರ

ತ್ರಿವಿಧಾಃ ಜೀವಸಂಘಾಸ್ತು ದೇವಮಾನುಷದಾನವಾಃ ।
ತತ್ರದೇವಾಃ ಮುಕ್ತಿಯೋಗ್ಯಾಃ ಮಾನುಷೇಷೂತ್ತಮಾ
ಸ್ತಥಾ ॥ ೮೭ ॥

ಅರ್ಥ ಜೀವ ಸಂಘಾಃತು-ಜೀವರ ಸಮುದಾಯವಾದರೂ, ದೇವ ಮಾನುಷ ದಾನವಾಃ-ದೇವತೆಗಳು ಮಾನವರು ಹಾಗೂ ದಾನವರು ಎಂಬುದಾಗಿ, ತ್ರಿವಿಧಾಃ-ಮೂರು ರೀತಿಯಾಗಿದ್ದಾರೆ, ತತ್ರ-ಈ ಮೂವರ ಮಧ್ಯದಲ್ಲಿ, ದೇವಾಃ-ಸಕಲ ದೇವತೆಗಳು, ತಥಾ-ಹಾಗೆಯೇ, ಮಾನುಷೇಷು-ಮಾನವರಲ್ಲಿ, ಉತ್ತಮಾಃ-ಉತ್ತಮರೂ ಕೂಡಾ, ಮುಕ್ತಿಯೋಗ್ಯಾಃ-ಮೋಕ್ಷ ಹೊಂದಲು ಅರ್ಹರಾಗಿದ್ದಾರೆ.

ತಾತ್ಪರ್ಯ ದೇವತೆಗಳು, ಮನುಷ್ಯರು ಹಾಗೂ ದಾನವರು ಎಂಬುದಾಗಿ ಜೀವರು ಮೂರು ವಿಧವಾಗಿದ್ದಾರೆ. ಇವರ ಮಧ್ಯೆ ದೇವತೆಗಳು, ಮನುಷ್ಯೋತ್ತಮರು

ವೋಕ್ಷವನ್ನು ಹೊಂದುತ್ತಾರೆ. ಆದುದರಿಂದ ಇವರು ಮುಕ್ತಿಯೋಗ್ಯರೆನಿಸಿದ್ದಾರೆ.

ಮಧ್ಯಮಾಮಾನುಷಾಯೇತು ಸ್ಮೃತಿಯೋಗ್ಯಾಃ ಸದೈವಹಿ ।
ಅಧಮಾನಿರಯಾಯೈವದಾನವಾಸ್ತು ತಮೋಲಯಾಃ
॥ ೮೮ ॥

ಅರ್ಥ ಯೇ-ಯಾರು, ಮಧ್ಯಮಾಃಮಾನುಷಾಃ-ಮಧ್ಯಮ ಜೀವರೋ, ತೇತು-ಅವರಾದರೂ, ಸದೈವ-ಹಮೇವಾಗಲೂ, ಸ್ಮೃತಿಯೋಗ್ಯಾಃ-ಸಂಸಾರವನ್ನು ಹೊಂದಲರ್ಹರು, ಅಧಮಾಃ-ಮನುಷ್ಯಾಧಮರು, ನಿರಯಾಯ ಏವ-ನಿವೃತ್ತಿಶೂನ್ಯವಾದುದರಿಂದ ನಿರಯವೆಂಬ ಹೆಸರುಳ್ಳ ತಾಮಸಲೋಕಕ್ಕೋಸ್ಕರ(ವನ್ನು ಹೊಂದುತ್ತಾರೆ.) ದಾನವಾಃತು-ಅವರಿಗಿಂತಲೂ ನೀಚರಾದದಾನವರಾದರೂ, ತಮೋಲಯಾಃ-ಅಂಧತಾಮಿಸ್ರ ಎಂಬ ತಮೋಲೋಕವೇ ಆಶ್ರಯವಾಗಿ ಇರುತ್ತಾರೆ.

ತಾತ್ಪರ್ಯ ಮಧ್ಯಮಮಾನವರು ನಿತ್ಯ ಸಂಸಾರಿಗಳು, ಇವರು ಸ್ವರ್ಗ, ನರಕ, ಭೂಮಿ ಹೀಗೆ ಸುತ್ತುವರಿಯುತ್ತಾರೆ. ಮಾನವಕಲ್ಲಿ ಅಧಮ ಜೀವರಾತಿಗಳು ತಾಮಿಸ್ರವೆಂಬ ನಿತ್ಯನಿರಯದಲ್ಲಿ ವಾಸಿಸುತ್ತಾರೆ. ಅವರಿಗಿಂತಲೂ ನೀಚರಾದ ದಾನವರು ಅಂಧತಾಮಿಸ್ರದಲ್ಲಿಯೇ ಇರುತ್ತಾರೆ. ಅವರಿಗಿಂತಲೂ ನೀಚರಾದ ಕಲಿ ಪ್ರಭೃತಿ ಜೀವರು ಇನ್ನೂ ಭಯಂಕರವಾದ ದುಃಖ ಭೂಯಿಷ್ಠವಾದ ಅಂಧತಾ ಮಿಸ್ರದಲ್ಲಿ ರುತ್ತಾರೆ.

ತಾಮಿಸ್ರ-ಮತ್ತು ಅಂಧತಾಮಿಸ್ರವೆಂದು ನಿತ್ಯ ನರಕ ಲೋಕವನ್ನು ಇಬ್ಭಾಗಿಸಿದ್ದಾರೆ. ಅಂಧತಾಮಿಸ್ರವನ್ನು ಊರ್ಧ್ವ, ಮಧ್ಯಮ, ಅಧರ ಎಂದು ಮೂರು ರೀತಿಯಾಗಿ ವಿಭಾಗಿಸಿದ್ದಾರೆ ಊರ್ಧ್ವ ಅಂಧತಾಮಿಸ್ರದಲ್ಲಿ ಮನುಷ್ಯರಿಗಿಂತ ಅಧಮರಾದ ದಾನವರೂ, ಮಧ್ಯಮ ಅಂಧತಾಮಿಸ್ರದಲ್ಲಿ ಅವರಿಗಿಂತ ನೀಚರಾದ ಅಸುರರೂ ಅಧರ ಅಂಧತಾಮಿಸ್ರದಲ್ಲಿ ಕಲಿಪ್ರಭೃತಿಗಳು ವಾಸಿಸುತ್ತಾರೆ. ಭಾಷ್ಯದಲ್ಲಿ ಇದರ ಸ್ಪಷ್ಟ ವಿವರಣೆ ಇದೆ. "ತಾಮಿಸ್ರಶ್ಚ ಅಂಧತಾಮಿಸ್ರೋ ದ್ವೌ ನಿತ್ಯೌ ಸಂ ಸ್ಮೃತೌ । ಮಹಾತಮಸ್ತ್ರಿಧಾ ಪ್ರೋಕ್ತ ಮೂರ್ಧ್ವಂ ಮಧ್ಯಂ ತಥಾಧರಮ್ ॥

ಶ್ರವಣಾದೇವ ಮೂರ್ಖಾದಿದಧರಸ್ಯ ಯತೋ ಭವೇತ್। ತಸ್ಮಾನ್ನ ವಿಸ್ತರೇಣೈತತ್ ಕಥ್ಯತೇ ರಾಜಸತ್ತಮ" ಭಾಷ್ಯದಲ್ಲಿ ಶ್ರೀಮದಾಚಾರ್ಯರು ಉದಾಹರಿಸಿದ ಕೌರ್ಮ ಪುರಾಣದ ಶ್ಲೋಕ.

ಮುಕ್ತಿರ್ನಿತ್ಯಾತಮಶ್ಚೈವನಾವೃತ್ತಿ:ಪುನರೇತಯೋ: ।
ದೇವಾನಾಂನಿರಯೋನಾಸ್ತಿತಮಶ್ಚಾಪಿಕಥಂಚನ ॥ ೮೯ ॥

ಅರ್ಥ (ಯೋಗ್ಯ ಜೀವನಿಗೆ) ಮುಕ್ತಿ:–ಮೋಕ್ಷಸ್ಥಾನವು. ನಿತ್ಯಾ–ನಿತ್ಯವಾಗಿದೆ, (ಅಧಮರಿಂಗೆ,) ತಮಶ್ಚೈವ–ತಮೋಲೋಕವೂ (ನಿತ್ಯಂ)–ಶಾಶ್ವತವಾಗಿದೆ. ಏತಯೋ:–ಈ ಎರಡೂ ಲೋಕದಿಂದಲೂ, ಆವೃತ್ತಿ:–ಪುನಃ ತಿರುಗಿ ಬರುವಿಕೆಯು, ನ–ಇಲ್ಲ. ದೇವಾನಾಂ–ದೇವತೆಗಳಿಗೆ, ಕಥಂಚನ ಯಾವುದೇ ಕಾರಣದಿಂದಲೂ ಕೂಡಾ ನಿರಯಃ–ತಮಸ್ಸು, । ತಮಶ್ಚ–ಅಂಧಂತಮಸ್ಸು, ನಾಸ್ತಿ–ಇಲ್ಲ.

ತಾತ್ಪರ್ಯ ಮೋಕ್ಷವನ್ನಾಗಲಿ, ತಮಸ್ಸನ್ನಾಗಲೀ ಹೊಂದಿದ ಜೀವರಾಶಿಗಳು ಆ ಸ್ಥಾನದಿಂದ ತಿರುಗಿ ಬರಲು ಸಾಧ್ಯವಿಲ್ಲ. ಎರಡೂ ಸ್ಥಾನಗಳೂ ಜೀವರಿಗೆ ಶಾಶ್ವತಗಳು. ದೇವತೆಗಳಿಗೆ ತಮಸ್ಸು ಅಂಧಂತಮಸ್ಸು ಇಲ್ಲವೇ ಇಲ್ಲ. ಯಾವುದೇ ಅನ್ಯಾಯವು ದೇವತೆಗಳಿಗೆ ಈ ಲೋಕಗಳ ಪ್ರಾಪ್ತಿಗೆ ಕಾರಣವಾಗಲಾರದು.

॥ ೯೦ ॥

ನಾಸುರಾಣಾಂತಥಾಮುಕ್ತಿಃಕದಾಚಿತ್ ಕೇನಚಿತ್ ಕ್ವಚಿತ್ ।
ಮಾನುಷಾಣಾಂಮಧ್ಯಮಾನಾಂನಚೈತದ್ ದ್ವಯಮಾಪ್ಯತೇ

ಅರ್ಥ ತಥಾ–ಹಾಗೆಯೇ, ಅಸುರಾಣಾಂ ಅಸುರ ಜೀವರಿಗೆ, ಮುಕ್ತಿ: ಮೋಕ್ಷವು ಕದಾಚಿತ್–ಎಂದೆಂದೂ, ಕೇನಚಿತ್–ಯಾವ ಕಾರಣದಿಂದಲೂ, ನ–ಇಲ್ಲ. ತಥಾ ಹಾಗೆಯೇ, ಮಧ್ಯಮಾನಾಂ–ಮಧ್ಯಮರಾದ, ಮಾನುಷಾಣಾಂ-ಮಾನವ

ರಂಗೆ. ಏತತ್-ಹಿಂದೆ ಹೇಳಿದ ಮುಕ್ತಿ ಹಾಗೂ ನಿರಯಗಳು. ಸ್ವಯಂ-ಎರಡೂ; ಕ್ವಚಿತ್-ಎಂದೆಂದೂ ನೈವ ಆಪ್ಯತೇ-ಹೊಂದಲ್ಪಡುವುದಿಲ್ಲ.

ತಾತ್ಪರ್ಯ ಅಸುರರಿಗೆ ಎಂದೆಂದೂ ತಪಸ್ಸಿನ ಆಚರಣೆಯೇ ಮೊದಲಾದ ಯಾವುದೇ ಕಾರಣದಿಂದಲೂ ಮುಕ್ತಿಯಾಗಲಾರದು. ಮಧ್ವಮ ಜೀವರಿಗೆ ಮುಕ್ತಿ ಯಾಗಲಿ ತಮಸ್ ಆಗಲಿ ಎಂದೆಂದೂ ಲಭಿಸದು. ಅವರವರ ಯೋಗ್ಯತೆಯೇ ಈ ಸ್ಥಾನ ಪಾಪ್ತಿಗೆ ಕಾರಣ.

ಆಸುರಾಣಾಂ ತಮಃಪ್ರಾಪ್ತಿಸ್ತದಾನಿಯಮತೋ ಭವೇತ್ । ಯದಾತುಜ್ಞಾನಿಸದ್ಭಾವೇನೈವ ಗೃಹ್ಣಂತಿತತ್ಪರವರ್ ॥ ೯೧ ॥

ಅರ್ಥ ಯದ್ಯಾ-ಯಾವ ಕಾರಣದಿಂದ, ಜ್ಞಾನಿಸದ್ಭಾವೇತು-ತತ್ವಜ್ಞಾನಿ ಯಿದ್ದರೂ, ತರಂ-ಸರ್ವೋತ್ತಮನಾದ, ತತ್-ನಾರಾಯಣನೆಂಬ ವಸ್ತುವನ್ನು, ನೈವ ಗೃಹ್ಣಂತಿ-ತಿಳಿಯುವುದಿಲ್ಲವೋ, ತದಾ-ಆ ಕಾರಣ ದೆಸೆಯಿಂದ, ನಿಯಮತಃ ಖಂಡಿತವಾಗಿಯೂ, ಅಸುರಾಣಾಂ-ಅಸುರರಿಗೆ, ತಮಃ ಪ್ರಾಪ್ತಿಃ-ಅಂಧತಮಸ್ಸಿನ ಸಂಬಂಧ, ಭವೇತ್- ಆಗುವುದು.

ತಾತ್ಪರ್ಯ ಭಗವಂತನ ಮಹಿಮೆಯನ್ನು ಕೊಂಡಾಡುವ 32 ಲಕ್ಷಣ ಭರಿತರಾದ ಜ್ಞಾನಿಗಳು ಸ್ವತಃ ಬಂದು ಉಪದೇಶ ಮಾಡಿದರೂ ಈ ಅಸುರ ಜನರು ಆ ಉಪ ದೇಶಾಮೃತವನ್ನು ಕಿವಿಗೇ ಹಾಕಿ ಕೊಳ್ಳುವುದಿಲ್ಲ. ಆ ಅಸುರರ ಕಿವಿ ಕೇಳಿದರೂ ಮನಸ್ಸು ಈ ಉಪದೇಶವನ್ನು ಧರಿಸೊಲ್ಲ. ಕಾರಣ ಈ ವರ್ಗದ ಜನರಿಗೆ ಸರ್ವೋತ್ತಮನಾದ ಶ್ರೀ ಹರಿಯಲ್ಲಿ ಅಸೂಯೆ. ಆತನ ಸರ್ವೋತ್ತಮತೆಯನ್ನು ಸಹಿಸಲಾಗುವುದಿಲ್ಲ. ಆದುದರಿಂದ ಆತನ ಜ್ಞಾಗನಿಗಳ ಮೇಲೂ ಈ ಅಸುರೀ ಜನ ರಿಗೆ ವಿದ್ವೇಷ. ಆತನ ಜ್ಞಾನದಲ್ಲಿ ಅವಿಶ್ವಾಸ ಮಾಡುತ್ತಾರೆ. ಇಂತಹ ಪರಿಸ್ಥಿತಿ ಯಲ್ಲಿ ಈ ವರ್ಗದ ಜನರಿಗೆ ಅಂಧತಮಸ್ಸು ನಿಶ್ಚಿತವೆಂದು ಸ್ಪಷ್ಟವಾಗುತ್ತದೆ

ಉತ್ತಮ ಜೀವರಿಗೂ ಸತ್ಸಮಾಗಮ ಇಲ್ಲದಿದ್ದಾಗ ಜ್ಞಾನ ಇಲ್ಲದಿರಬಹುದು. ಜ್ಞಾನಿಗಳಿದ್ದರೂ ಭಗವಂತನನ್ನು ತಿಳಿಯುವಪ್ರವೃತ್ತಿ ಮಾಡುವುದಿಲ್ಲನೆಂದರೆ ಅಯೋಗ್ಯರು ತಪೋಯೋಗ್ಯರೆಂದು ಸುಸ್ಪಷ್ಟ.

ತದಾಮುಕ್ತಿಶ್ಚದೇವಾನಾಂಯದಾಪ್ರತ್ಯಕ್ಷಗೋಹರಿಃ।
ಸ್ವಯೋಗ್ಯಯೋಪಾಸನಯಾತನ್ಮಾತದ್ಯೋಗ್ಯಯಾ
ತಥಾ ॥ ೯೨ ॥

ಅರ್ಥ ಯದಾ-ಯಾವಾಗ, ಹರಿಃ-ಶ್ರೀಮನ್ನಾರಾಯಣನು, ಸ್ವಯೋಗ್ಯಯಾ ಉಪಾಸನಯಾ-ಅವರವರಯೋಗ್ಯತೆಗೆ ಅನುಗುಣವಾದ ಉಪಾಸನೆಯ ನಿಮಿತ್ತದಿಂದ ತಥಾ-ಹಾಗೆಯೇ, ತದ್ಯೋಗ್ಯಯಾ-ಆಯಾ ಜೀವರಿಗೆ ದರ್ಶನಕ್ಕೆ ಯೋಗ್ಯವಾದ, ತನ್ಮಾ-ಬಿಂಬ ರೂಪದಿಂದ, ದೇವಾನಾಂ-ದೇವಾದಿ ಉತ್ತಮ ಜೀವರಿಗೆ, ಪ್ರತ್ಯಕ್ಷಗಃ-ಪ್ರತ್ಯಕ್ಷಗೋಚರನು, ಭವತಿ-ಆಗುತ್ತಾನೋ, ತದಾ-ಆವಾಗ, ಮುಕ್ತಿಶ್ಚ-ಮುಕ್ತಿಯೂ, ಭವತಿ-ಆಗುತ್ತದೆ.

ತಾತ್ಪರ್ಯ ದೇವಾದಿ ಉತ್ತಮ ಜೀವರು ತಮ್ಮ ಯೋಗ್ಯತೆಗನುಗುಣವಾದ ಉಪಾಸನೆಯನ್ನು ಮಾಡಬೇಕು. ಉಪಾಸನೆಯು ಪರಿಪಕ್ವವಸ್ಥೆಗೆಬಂದಾಗ ಪ್ರಸನ್ನನಾದ ಭಗವಂತನು ಪ್ರತಿಬಿಂಬನಾದ ಜೀವನಿಗೆ ಆತನ ಬಿಂಬ ರೂಪವಾದ ತನ್ನ ಸ್ವರೂಪವನ್ನು ಸಾಕ್ಷಾತ್ ಪ್ರದರ್ಶಿಸುತ್ತಾನೆ. ಆವಾಗ ಆತನಿಗೆ ಮುಕ್ತಿಯೂ ಲಭಿಸುತ್ತದೆ.

॥ ೯೩ ॥

ಸರ್ವೈರ್ಗುಣೈಃಬ್ರಹ್ಮಣಾತುಸಮಮುಪಾಸ್ಯೋಹರಿಃಸದಾ
ಆನಂದೋಜ್ಞಃಸದಾತ್ಯೋತಿಹ್ಯುಪಾಸ್ಯೋಮಾನುಷ್ಯೈ
ರ್ಹರಿಃ ॥ ೯೩ ॥

ಅರ್ಥ ಹರಿ:-ಶ್ರೀಮನ್ನಾರಾಯಣನು, ಸರ್ವಗುಣೈ:-ವೇದೋಕ್ತವಾದ ಸಮಸ್ತ ಗುಣಗಳಿಂದ, ಸದಾ-ಯಾವಾಗಲೂ, ಬ್ರಹ್ಮಣಾತು-ಬ್ರಹ್ಮ ದೇವರಿಂದ, ಸಮುಪಾಸ್ಯ:-ಚೆನ್ನಾಗಿ ಉಪಾಸನೆ ಮಾಡಲಿ ಯೋಗ್ಯನಾಗಿದ್ದಾನೆ. ಹರಿ:-ಶ್ರೀ ಹರಿಯು, ಮಾನುಷೈ:-ಮಾನವರಿಂದ, "ಆನಂದ:ಆನಂದ ಸ್ವರೂಪ, ಜ್ಞ:-ಜ್ಞಾನ ಸ್ವರೂಪನು, ಸರ್ವ-ನಿರ್ದೋಷನು. ಆತ್ಮ-ಸ್ವಾಮಿಯು" ಇತಿ-ಎಂಬುದಾಗಿ, ಉಪಾಸ್ಯ:-ಉಪಾಸನೆ ಮಾಡಲ್ಪಡಬೇಕು, ಹಿ- ದು ಪ್ರಮಾಣ ಸಿದ್ಧ.

ತಾತ್ಪರ್ಯ ಹಿಂದಿನ ಶ್ಲೋಕದಲ್ಲಿ ಪ್ರಸ್ತುತವಾದ ಜೀವರ ಯೋಗ್ಯತೆಗನುಗುಣವಾದ ಉಪಾಸನೆಯನ್ನು ಇಲ್ಲಿ ವಿವರಿಸುತ್ತಾರೆ. ಸಕಲ ಜೀವೋತ್ತಮರಾದ ಚತುರ್ಮುಖ ಬ್ರಹ್ಮದೇವರು ಪರಮಾತ್ಮನನ್ನು ಅನಂತ ವೇದಗಳಿಂದ ಪ್ರತಿಪಾದ್ಯವಾದ ಸದುಪ್ತಗುಣಗಳಿಂದಲೂ ಸದಾ ಉಪಾಸನೆ ಮಾಡುತ್ತಾರೆ, ಮಾನವರು ನಾಲ್ಕೇ ಗುಣಗಳಿಂದ ಭಗವಂತನ ಉಪಾಸನೆ ಮಾಡುತ್ತಾರೆ. 1) ಭಗವಂತನು ಆನಂದ ಪೂರ್ಣನು, 2) ಜ್ಞಾನ ಪೂರ್ಣ ಸ್ವರೂಪನು. 3) ನಿರ್ದೋಷನು 4) ನಮಗೆಲ್ಲರಿಗೂ ಆತ ಸದಾ ಸ್ವಾಮಿ, ನಾನು ಆತನ ಸೇವಕ. ಈ ನಾಲ್ಕು ಗುಣಗಳನ್ನು ಮಾತ್ರ ಉಪಾಸನೆ ಮಾಡುವ ಅಧಿಕಾರ ಮಾನವರಿಗಿರುವುದು.

ಯಥಾಕ್ರಮಮುಂಗುಣೋದ್ರೇಕಾತ್ತದನ್ಯೈ ರಾಪಿ
ರಿಂಚತಃ ।
ಬ್ರಹ್ಮತ್ವಯೋಗ್ಯಾಋಜವೋನಾಮದೇವಾ:
ಪೃಥಗ್ಗಣಾಃ ॥ ೯೪ ॥

ಅರ್ಥ ತದನ್ಯೈ:-ಈ ಮಾನವರಿಗಿಂತ ಇತರರಾದ ಋಷಿ ಗಂಧರ್ವಾದಿಗಳಿಂದ, ಆ ವಿರಿಂಚತಃ-ಚತುರ್ಮುಖ ಬ್ರಹ್ಮ ದೇವರ ತನಕ, ಯಥಾ ಕ್ರಮಂ-ಅವರವರ ಯೋಗ್ಯತೆಯ ಕ್ರಮವನ್ನನುಸರಿಸಿ, ಗುಣೋದ್ರೇಕಾತ್-ಅಧಿಕ ಅಧಿಕಗುಣವನ್ನು ಅನುಸಂಧಾನ ಮಾಡಿ, ಹರಿ:ಉಪಾಸ್ಯ:-ಪರಮಾತ್ಮನು ಉಪಾಸನೆ ಮಾಡಲ್ಪಡುತ್ತಾನೆ. ಬ್ರಹ್ಮತ್ವಯೋಗ್ಯಾ:-ಚತುರ್ಮುಖ ಬ್ರಹ್ಮದೇವರ ಪದವೀ ಏರಲು ಯೊ

ಗ್ಯರಾದ, ಋಜಪೋನಾವು-ಋಜುಗಳೆಂದು ಪ್ರಸಿದ್ಧರಾದ, ಪೃಥಗ್ಗಣಾಃ-ಪ್ರತ್ಯೇಕವಾಗಿ ರಾಶಿಯಾಗಿ ಪಂಕ್ತಿ ಕಟ್ಟಿ ನಿಂತ, ದೇವಾಃ-ದೇವತೆಗಳು ಇದ್ದಾರೆ.

ತಾತ್ಪರ್ಯ ಉತ್ತಮ ಮಾನವರು 4 ಗುಣಗಳಿಂದ ಭಗವಂತನ ಉಪಾಸನೆ ಮಾಡುತ್ತಾರೆ. ಬ್ರಹ್ಮ ದೇವರು ವೇದದಲ್ಲಿ ಪ್ರತಿಪಾದ್ಯವಾದ ಅಖಿಲ ಗುಣಗಳಿಂದಲೂ ಭಗವಂತನ ಉಪಾಸನೆ ಗ್ಯೆಯುತ್ತಾರೆ. ಇವರ ಮಧ್ಯದಲ್ಲಿರತಕ್ಕ ಋಭು ಗಂಧರ್ವಾದಿಗಳು ಅವರವರ ಯೋಗ್ಯತೆಗೆ ಅನುಗುಣವಾಗಿ ಒಬ್ಬರಿಗಿಂತ ಇನ್ನೊಬ್ಬರು ಹೆಚ್ಚು ಹೆಚ್ಚು ಗುಣಗಳನ್ನು ಉಪಾಸನೆ ಮಾಡುತ್ತಾರೆ. ಅಂತಿಮ ಸೀಮೆ ಚತುರ್ಮುಖಿ ಬ್ರಹ್ಮದೇವರು. ಅವರಿಗಿಂತಲೂ ಹೆಚ್ಚು ಗುಣಗಳಿಂದ ಭಗವಂತನ್ನ ಉಪಾಸನೆ ಮಾಡತಕ್ಕ ಉಪಾಸನಾಧಿಕಾರಿಗಳೇ ಇಲ್ಲ. ಇಯತ್ ಅವಮನನಾ ಎಂಬ ಬ್ರಹ್ಮಸೂತ್ರವು ಇದನ್ನೇ ಸಮರ್ಥಿಸುತ್ತದೆ.

ಚತುರ್ಮುಖಿ ಬ್ರಹ್ಮಪಟ್ಟ ಎಲ್ಲಾ ಜೀವರಿಗೂ ಅಥವಾ ಎಲ್ಲಾ ದೇವತೆಗಳಿಗೂ ಸಿಗುವ ಸಂಪತ್ತು ಅಲ್ಲ. ಭಗವಂತನಿಗೆ ಅತ್ಯಂತ ಪ್ರಿಯರಾದ ಅತನಲ್ಲಿ ಸದಾ ಭಕ್ತರಾದ ಋಜುಗಳೆಂಬ ದೇವತಾಗಣದಿಂದ ಮಾತ್ರ ಪ್ರಾಪ್ಯ. ಆ ಋಜು ಗಣ ಅನಂತಾನಂತ ಸಂಖ್ಯೆಯಿಂದ ರಾಶಿರಾಶಿಯಾಗಿ ವ್ಯವಸ್ಥಿತವಾಗಿದೆ.

॥ ೯೫ ॥

ತ್ಯೈರೇವಾಪ್ಯಂ ಪದಂ ತತ್ತು ನೈವಾನ್ಯೈಃ ಸಾಧನೈರಪಿ ।
ಏವಂಸರ್ವಪದಾನಾಂಚಯೋಗ್ಯಾಃಸಂತಿಪೃಥಗ್ಗಣಾಃ ॥

ಪ್ರಥಮ ತತ್ತು-ಆ, ಪದಂ ತು-ಬ್ರಹ್ಮದೇವರ ಸ್ಥಾನವಾದರೂ, ತ್ಯೈಃಏವ-ಈ ಋಜು ದೇವತೆಗಳಿಂದಲೇ, ಆಪ್ಯಂ-ಹೊಂದಲ್ಪಡುತ್ತದೆ, ಅನ್ಯೈಃ-ಇತರರಿಂದ-ಸಾಧನೈಃಅಪಿ-ಇತರ ಯಜ್ಞ ಯಾಗಾದಿ ಸಾಧನಾನುಷ್ಠಾನಗಳಿಂದಲೂ, ನೈವಆಪ್ಯಂ, ಹೊಂದಲ್ಪಡಲಾರದು. ಏವಂ-ಈ ರೀತಿಯಾಗಿ, ಸರ್ವಪದಾನಾಂಚ-ಎಲ್ಲಾ ರುದ್ರೇಂದ್ರಾದಿ ಸ್ಥಾನಗಳಿಗೂ ಯೋಗ್ಯರಾದ, ಪೃಥಗ್ಗಣಾಃ-ಪ್ರತ್ಯೇಕ ಪ್ರತ್ಯೇಕವಾಗಿ ರಾಶಿ ರಾಶಿಯಾಗಿ ಇರತಕ್ಕ ದೇವತೆಗಳು, ಸಂತಿ-ಇದ್ದಾರೆ.

ತಾತ್ಪರ್ಯ ಬ್ರಹ್ಮಪದ ಯೋಗ್ಯರಾದ ಋಜು ದೇವತೆಗಳಿಂದಲೇ ಆ ಬ್ರಹ್ಮ ಪದವಿಯು ಹೊಂದಲು ಯೋಗ್ಯವಾಗಿದೆ. ಇತರ ದೇವತೆಗಳು ಯಾಗ ಯಜ್ಞಾದಿ ಗಳಿಂದ ಅಥವಾ ಇನ್ನಿತರ ಸಾಧನಅನುಷ್ಠಾನಗಳಿಂದಲೂ ಈ ಸ್ಥಾನಪಡೆಯಲಾರರು. ಇದೇ ರೀತಿಯಾಗಿ ರುದ್ರಪದ ಇಂದ್ರಪದ ಇವೇ ಮೊದಲಾದ ಕ್ಲೃಪ್ತ ಪದವಿ ಗಳಿವೆ. ಈ ಸ್ಥಾನಕ್ಕೆ ಯೋಗ್ಯರಾದ ದೇವತೆಗಳ ಸಾಲೇ ಸದಾ ಸನ್ನದ್ಧವಾಗಿದೆ.

॥ ೯೬ ॥

ತಸ್ಮಾದನಾದ್ಯನಂತಂಹಿ ತಾರತಮ್ಯಂಚಿದಾತ್ಮನಾಮರ್ ।
ತಚ್ಚನೈವಾನ್ಯಥಾಕರ್ತುಂಶಕ್ಯಂಕೇನಾಪಿಕುತ್ರಚಿತ್ ॥

ಅರ್ಥ ತಸ್ಮಾತ್–ಯೋಗ್ಯತೆಯಲ್ಲಿ ವೈವಿಧ್ಯವನ್ನು ಉಪಪಾದನೆ ಮಾಡಿದ ರಿಂದ, ಚಿದಾತ್ಮನಾಂ–ಜೀವರ, ತಾರತಮ್ಯಂ–ನೀಚೋಚ್ಚತೆಯು, ಅನಾದಿ–ಆದಿ ರಹಿತವಾದದ್ದು, ಅನಂತಂ ಹಿ–ಅಂತ್ಯ ಶೂನ್ಯವಾದದ್ದೂ ಆಗಿದೆ, ತಚ್ಚ–ಆ ತಾರ ತಮ್ಯವನ್ನು, ಅನ್ಯಥಾ–ವಿಪರೀತವಾಗಿ, ಕರ್ತುಂ–ಮಾಡಲು, ಕೇನಾಪಿ–ಯಾರಿಂ ದಲೂ, ಕುತ್ರಚಿತ್–ಎಲ್ಲಿಯೂ, ನೈವ ಶಕ್ಯಂ–ಖಂಡಿತ ಸಾಧ್ಯವಿಲ್ಲ.

ತಾತ್ಪರ್ಯ ಬ್ರಹ್ಮ ಪದವಿಯನ್ನು ಅಲಂಕರಿಸುವ ದೇವತೆಗಳು ಕ್ಲೃಪ್ತರಾಗಿದ್ದಾರೆ. ರುದ್ರಪದವೀ ಆರೋಹಣ ಮಾಡುವವರೂ ಬೇರೆಯೇ ಇದ್ದಾರೆ. ಇಂದ್ರಪದ ಯೋಗ್ಯರಾಗಿ ನಿಶ್ಚಿತರಾದ ದೇವತೆಗಳೇ ಬೇರೆ ಇದ್ದಾರೆ. ಮುಕ್ತಿಯನ್ನು ಹೊಂದುವ ಯೋಗ್ಯತೆ ಉತ್ತಮ ಜೀವರಿಗೆ ಮಾತ್ರ. ಹೀಗೆ ಜೀವರ ಯೋಗ್ಯತೆಯಲ್ಲಿ ವೈವಿಧ್ಯ ವನ್ನು ಉಪಪಾದನ ಮಾಡಿದ್ದರಿಂದ ತಾರತಮ್ಯ ನೀಚೋಚ್ಚತೆ ಸ್ವಾಭಾವಿಕ. ಅನಾದಿ ಅಂತ್ಯಶೂನ್ಯ ಎಂದು ಒಪ್ಪಲೇ ಬೇಕು. ಈ ನೀಚೋಚ್ಚತೆಯು ಜೀವರ ಸ್ವಭಾವವಾದುದರಿಂದ ಯಾರೂ ಎಂದೆಂದೂ ಯಾವುದೇ ಪ್ರಕಾರದಿಂದಲೂ ಬದ ಲಾಯಿಸಲಾರರು, ಮುಕ್ತಿಯಲ್ಲೂ ನಿಶ್ಚಿತ.

॥ ೯೭ ॥

ಅಯೋಗ್ಯಮಿಚ್ಛನ್ ಪುರುಷಃ ಪತತ್ಯೇವನಸಂಶಯಃ ।
ತಸ್ಮಾದ್ ಯೋಗ್ಯಾನುಸಾರೇಣಸೇವ್ಯೋ ವಿಷ್ಣುಃಸದೈವಹಿ ॥

ಅರ್ಥ ಅಯೋಗ್ಯಂ-ತನ್ನ ಯೋಗ್ಯತೆಗೆ ಎಟಕದ ವಸ್ತುವನ್ನು, ಇಚ್ಛನ್-ಬಯಸಿದಂತಹ, ಪುರುಷಃ-ಜೀವನು, ಪತತಿವಿವ-ಬಿದ್ದೇ ಬೀಳುತ್ತಾನೆ, ನ ಸಂಶಯಃ-ಈ ವಿಷಯದಲ್ಲಿ ಸಂದೇಹವೇ ಇಲ್ಲ. ತಸ್ಮಾತ್-ಆದುದರಿಂದ, ಯೋಗ್ಯಾನುಸಾರೇಣ-ತನ್ನ ಯೋಗ್ಯತೆಗೆ ಅನುಗುಣವಾಗಿ, ಸದಾ-ಯಾವಾಗಲೂ, ವಿಷ್ಣುಃ-ಶ್ರೀ ಹರಿಯು, ಸೇವ್ಯಃ ಹಿ-ಸೇವಿಸಲ್ಪಡಬೇಕು.

ತಾತ್ಪರ್ಯ ವಿವೇಕಿಯಾದವನು ತನ್ನ ಯೋಗ್ಯತೆಗೆ ಎಟಕದ ವಸ್ತುವಿನ ಅಭಿಲಾಷೆಯನ್ನು ಮಾಡಬಾರದು.ಬ್ರಹ್ಮರುದ್ರರ ಸ್ಥಾನದಇಚ್ಛೆ ಸಲ್ಲದು. ಇಂದ್ರಪದವಿಯನ್ನು ಬಯಸಬಾರದು, ಇಂದ್ರನ ಸಿಂಹಾಸನವನ್ನು ಬಯಸಿದ ಬಲಿ ಅಧಃಪಾತಕ್ಕೆ ಬಲಿಯಾದ.ನಹುಷಮಹಾರಾಜನು ಶಚಿಯನ್ನು ಇಚ್ಛಿಸಿ ಸರ್ಪನಾಗಿ ಭೂಮಿಯಲ್ಲಿ ಬಿದ್ದ. ಯೋಗ್ಯತೆಯನ್ನು ಏರಿ ಕಾಮಿಸಿದರೆ ಪತನವನ್ನು ಅಪ್ಪುತ್ತಾನೆಯೆಂಬುದರಲ್ಲಿ ಸಂಶಯಕ್ಕೆ ಆಸ್ಪದವಿಲ್ಲ. ಆದಂದರಿಂದ ಯೋಗ್ಯತೆಗನುಗುಣವಾದ ಉಪಾಸನೆಯನ್ನು ಮಾಡಿಯೇ ಭಗವಂತನ ಮನಸ್ಸನ್ನು ಒಲಿಸಬೇಕು.

॥ ೯೮ ॥

ಅಚ್ಛಿದ್ರಸೇವನಾಚ್ಚೈವನಿಷ್ಕಾಮಾತ್ವಾಚ್ಚಯೋಗ್ಯತಃ ।
ದ್ರಷ್ಟುಂ ಶಕ್ಯೋ ಹರಿಃ ಸರ್ವೈರ್ನಾನ್ಯಥಾ ತುಕಥಂಚನ ॥

ಅರ್ಥ ಅಚ್ಛಿದ್ರಸೇವನಾಚ್ಚ-ತೈಲಧಾರೆಯಂತೆ ಎಡಬಿಡದೆ ನಿರಂತರವಾಗಿ ಮಾಡುವ ಉಪಾಸನೆಯಿಂದಲೂ, ನಿಷ್ಕಾಮಾತ್ವಾಚ್ಚ-ಫಲ ಕಾಮನೆಯಿಲ್ಲದೆ ಭಗವತ್ ಪ್ರೀತಿ ಮಾತ್ರ ಉದ್ದೇಶದಿಂದ ಮಾಡುವ ಸಂಧ್ಯಾವಂದನೆ, ಯಜ್ಞ ಯಾಗಾದಿ ನಿತ್ಯನೈಮಿತ್ತಿಕ ಕರ್ಮಗಳಿಂದಲೂ, ಯೋಗ್ಯತಃ-ಅವರವರ ಯೋಗ್ಯತೆಗನುಗುಣವಾಗಿ, ಹರಿಃ-ಶ್ರೀ ಹರಿಯು, ಸರ್ವೈಃ-ಎಲ್ಲರಿಂದಲೂ, ದ್ರಷ್ಟುಂ-ಸಾಕ್ಷಾತ್ಕರಿ

ಸಲು, ಶಕ್ಯವಿವ-ಯೋಗ್ಯನೇ ಆಗಿದ್ದಾನೆ. ಅನ್ಯಥಾತು-ಇದಕ್ಕೆ ವಿಪರೀತವಾಗಿ. ಕಥಂಚನ-ಯಾವುದೇ ವಿಧದಿಂದಲೂ, ನ ದ್ರಷ್ಟುಂ ಶಕ್ಯಃ-ಸಾಕ್ಷಾತ್ಕರಿಸಲಶಕ್ಯನು.

ತಾತ್ಪರ್ಯ ತೈಲಧಾರೆಯಂತೆ ನಿರಂತರವಾಗಿ ಎಡೆಬಿಡದೆ ಶಾಸ್ತ್ರೋಕ್ತ ರೀತಿಯಿಂದ ಸರ್ವೋತ್ತಮನಾದ ಶ್ರೀ ಹರಿಯ ಧ್ಯಾನ ಮಾಡಬೇಕು. ಸಂಧ್ಯಾವಂದನಾದಿ ನಿತ್ಯ ಕರ್ಮಗಳನ್ನು ಹಾಗೂ ಯಜ್ಞಯಾಗಾದಿ ನೈಮಿತ್ತಿಕ ಕರ್ಮಗಳನ್ನು ಮಾಡುವಾಗ ಭಗವಂತನ ಪ್ರೀತಿ ಮಾತ್ರ ಉದ್ದೇಶ ಮಾಡಬೇಕು. ಯಾವುದೇ ಕ್ಷುದ್ರಫಲಗಳ ದುರಾಶೆಯಿಂದ ಕರ್ಮಗಳನ್ನು ಆಚರಿಸಬಾರದು, ಈ ವಿಧಿ ವಿಧಾನಗಳಿಂದ ಭಗವಂತನ ಸಾಕ್ಷಾತ್ಕಾರ ಸುಲಭ. ಇದಕ್ಕೆ ವಿರುದ್ಧವಾದ ದುರ್ಗ ಭಗವಂತನ ಕಡೆಗೆ ಖಂಡಿತವಾಗಿಯೂ ಕೊಂಡೊಯ್ಯಲಾರದು.

॥ ೯೯ ॥

ನಿಯಮೋಽ ಯಂಹರೇರ್ನಾಸ್ಯಾನ್ನೋಲ್ಲಂಘ್ಯಃ ಸರ್ವ
ಚೇತನೈಃ ।
ಸತ್ಯಸಂಕಲ್ಪತೋ ವಿಷ್ಣುರ್ನಾನ್ಯಥಾ ಚ ಕರಿಷ್ಯತಿ ॥

ಅರ್ಥ ಯಸ್ಮಾತ್-ಯಾವ ಕಾರಣದಿಂದ, ಅಯಂ-ಇದು, ಹರೇಃ-ಭಗವಂತನ ನಿಯಮಃ-ಆಜ್ಞೆಯೇ ಆಗಿರುವದೊ, ತಸ್ಮಾತ್-ಆದುದರಿಂದ, ಸರ್ವಚೇತನೈಃ-ಯಾವ ಜೀವರಿಂದಲೂ, ನ ಉಲ್ಲಂಘ್ಯಃ-ಎಂದಿಗೂ ಅಶಕ್ಯವಾದುದು, ವಿಷ್ಣುಃ-ಶ್ರೀ ಹರಿಯು, ಸತ್ಯಸಂಕಲ್ಪತಃ-ಸತ್ಯ ಸಂಕಲ್ಪನಾದುದರಿಂದ, ಅನ್ಯಥಾ-ಇದಕ್ಕೆ ವಿರುದ್ಧವಾಗಿ, ನಚ ಕರಿಷ್ಯತಿ-ಮಾಡುವುದಿಲ್ಲ.

ತಾತ್ಪರ್ಯ ಅನಾದಿಯಾದ ಬದಲಾಯಿಸಲಾಗದ ಯೋಗ್ಯತೆತತ್ವಯುಕ್ತವಾದ ಮೋಕ್ಷದಲ್ಲೂ ಸ್ಥಾಯಿಯಾದ ತಾರತಮ್ಯ, ಭಕ್ತಿಯೇ ಮೋಕ್ಷಕ್ಕೆ ಕಾರಣ. ಅಚ್ಛಿದ್ರ ಸೇವನೆ ಹಾಗೂ ನಿಷ್ಕಾಮ ಕರ್ಮವೇ ಮುಕ್ತಿಗೆ ಕಾರಣ, ಇತ್ಯಾದಿ ಹಿಂದೆ ನಿರೂಪಿತವಾದ ಪ್ರಮೇಯಗಳು ಭಗವಂತನ ನಿಯಮಕ್ಕೊಳಪಟ್ಟವುಗಳು.

ಈ ನಿಯಮವನ್ನು ಯಾವನೂ ಮೀರಿಯಲಾರ. ಭಗವಂತನೂ ಸತ್ಯ ಸಂಕಲ್ಪನಾದುದರಿಂದ ತನ್ನ ನಿಯಮಕ್ಕೆ ವಿರುದ್ಧವಾದ ಕಾರ್ಯವನ್ನು ನಡೆಸುವುದಿಲ್ಲ.

॥ ೧೦೦ ॥

दानतीर्थतपोयज्ञपूर्वाः सर्वेऽपि सर्वदा।
अंगानि हरिसेवायां भक्तिस्त्वेका विमुक्तये ॥

ಅಥ: ಸರ್ವದಾ-ಯಾವಾಗಲೂ, ದಾನತೀರ್ಥತಪೋಯಜ್ಞಪೂರ್ವಾಃ-ದಾನ ಮಾಡುವಿಕೆ, ತೀರ್ಥಯಾತ್ರಾಚರಣೆ, ತಪಸ್ಸಿನ ಅನುಷ್ಠಾನ, ಯಜ್ಞಯಾಗಾದಿ ಕರಣ ಇವೇ ಮೊದಲಾಗಿವುಳ್ಳ, ಸರ್ವೇಅಪಿ-ಎಲ್ಲಾ ಕರ್ಮಗಳೂ, ಹರಿಸೇವಾಯಾಂ-ಪರಮಾತ್ಮನ ಧ್ಯಾನದ ಹಾಗೂ ಭಕ್ತಿಯ ವಿಷಯದಲ್ಲಿ, ಅಂಗಾನಿ-ಮುಖ್ಯ ಸಾಧನಗಳು, ಭಕ್ತಿಃ-ಭಕ್ತಿಯು, ಏತಾವತಿ-ಒಂದೇ ಒಂದು, ವಿಮುಕ್ತಯೇ-ಮುಕ್ತಿಗೆ ಕಾರಣ.

ತಾತ್ಪರ್ಯ "ತ್ಯಾಗೇನೈಕೇನ ಅಮೃತತ್ವಮಾನಶುಃ" ಎಂಬ ಶ್ರುತಿ ತ್ಯಾಗದಿಂದ ಅಥವಾ ದಾನದಿಂದಲೇ ಅಮೃತತ್ವ (ಮೋಕ್ಷ) ಸಿಗುತ್ತದೆಯೆಂದು ಸಾರುತ್ತಿದೆ. ಹೀಗೆಯೇ ತೀರ್ಥಸ್ನಾನದಿಂದ ತಪಸ್ಸಿನ ಆಚರಣೆಯಿಂದ, ಯಜ್ಞಯಾಗಾದಿ ಕರ್ಮಗಳಿಂದಲೇ ಮುಕ್ತಿ ಸಿಗುತ್ತದೆಯೆಂದು ಸಾರುವ ಶಾಸ್ತ್ರವಚನಗಳು ಹೇರಳವಾಗಿ ಉಪಲಬ್ಧವಾಗುವಾಗ "ಮುಕ್ತಿಗೆ ಭಕ್ತಿಯೇ ಸಾಧನಯೆನ್ನುವ" ಮಾತಿಗೇನರ್ಥ ಎಂಬ ಪ್ರಶ್ನೆಗೆ ಉತ್ತರರೂಪವಾಗಿ ಆಚಾರ್ಯರು ಭವಿಷ್ಯಪರ್ವವಚನವನ್ನು ಉದಾಹರಿಸಿ ಶ್ರುತಿಗಳ ವಿರೋಧ ಪರಿಹಾರ ಹಾಗೂ ಸಶ್ಚಿಂದ್ಧಾಂತದ ಸ್ಥಾಪನೆ ಮಾಡುತ್ತಿದ್ದಾರೆ. ದಾನ ಧರ್ಮಾದಿಗಳಿಂದತೀರ್ಥಸ್ನಾನದಿಂದ ತಪೋಯಜ್ಞಾದಿ ಸಾಧನದಿಂದ ಮನಸ್ಸು ಶುದ್ಧವಾಗಿ ಭಕ್ತಿ ಪರಿಪಕ್ವವಾಗುತ್ತದೆ. ಉಪಾಸನೆ ಸಿದ್ಧಿಸುತ್ತದೆ. ಅದರ ಮೂಲಕ ಮುಕ್ತಿ ಹೀಗೆ ಉಪಾಸನೆಯದ್ವಾರಾ ಮುಕ್ತಿಗೆ ಸಾಧನವಾದುದರಿಂದ ಅಮುಖ್ಯ ಸಾಧನಗಳಿವು. ಮುಖ್ಯ ಸಾಧನ ಮೋಕ್ಷಕ್ಕೆ ಭಕ್ತಿಯೊಂದೇ ಎನ್ನುವುದು ಇದರ ತಾತ್ಪರ್ಯಾರ್ಥ.

ಭವಿಷ್ಯತ್‌ಪರ್ವವಚನವಿತ್ಯೇತದಖಿಲಂಪರವ್‌ ॥೧೦೦॥

ಇತ್ಯೇತತ್‌ "ವಿಷ್ಣುರ್ಹಿದಾತಾವೋಕ್ಷಸ್ಯಎಂಬಲ್ಲಿಂದ.....ಏಕಾವಿಮುಕ್ತಯೆಂತೇ ಎಂಬಲ್ಲಿ ತನಕ ಉದಾಹರಿಸಲ್ಪಟ್ಟ ಅಖಿಲಂ-ಎಲ್ಲಾ ವಾಕ್ಯಗಳೂ, ಪರಂ-ನಿರ್ದೋಷವಾನ, ಭವಿಷ್ಯತ್‌ ಪರ್ವವಚನಂ-ಭವಿಷ್ಯತ್‌ಪರ್ವದ ಅಂತರ್ಗತವಾದವುಗಳು.

ತಾತ್ಪರ್ಯ 78ನೆಯ ಶ್ಲೋಕದಿಂದ ಆರಂಭಿಸಿ 99 ಶ್ಲೋಕ ತನಕ ಆಚಾರ್ಯರು ಭವಿಷ್ಯತ್‌ ಪರ್ವದ ನುಡಿ ಮುತ್ತುಗಳನ್ನು ಉದ್ಧರಿಸಿ, ತಮ್ಮ ಗ್ರಂಥದಲ್ಲಿ ಸೇರಿಸಿ, ತನ್ನ ಪ್ರಮೇಯದ ಪುಷ್ಟೀಕರಣ ನಡೆಸಿದ್ದಾರೆ. ತಮ್ಮ ಮೂತು ತಮ್ಮ ಸಿದ್ಧಾಂತ ಸ್ವಕಪೋಲ ಕಲ್ಪಿತವಲ್ಲಿ. ತಾವು ಹೇಳುದ ಪ್ರತಿಯೊಂದು ಪ್ರಮೇಯದ ಬಗ್ಗೆ ಸ್ಮೃತಿಪುರಾಣಗಳ ಧಾರೆಯನ್ನೇ ಸುರಿಸುತ್ತಿದ್ದಾರೆ ಆಚಾರ್ಯರು.

॥ ೧೦೧ ॥

ಶೃಣ್ವೇವೀರಉಗ್ರಮುಗ್ರಂದಮಾಯಾನನ್ಯಮುನ್ಯಮತಿ
ನೇನೀಯಮಾನಃ ।
ಏಧಮಾನದ್ವಿಳುಭಯಸ್ಯರಾಜಾಚೋಷ್ಕೂಯತೇವಿಶ
ಇಂದ್ರೋಮನುಷ್ಯಾನ್‌ ॥

ಅರ್ಥ ವೀರಃ-ಅಡಬ್ಧಅಂತರ್ಗಾಮಿಯಾಗಿ ವೀರನೆನಿಸಿದ ಭಗವಂತನು, ಉಗ್ರಂ-ಉಗ್ರಂ-ಅತ್ಯಂತ ಕ್ರೂರಿಗಳಾದ ಅಸುರ ಜನರನ್ನು, ದಮಾಯನ್‌-ಅಂಧತಮಿಸ್ರನಲ್ಲಿ ದಂಡಿಸತಕ್ಕವನಾಗಿ, ಅನ್ಯಂ ಅನ್ಯಂ-ಅಸುರರಿಂದ ಇತರರಾದ ಉತ್ತಮರಾದ ಬ್ರಹ್ಮಾದಿಉತ್ತಮ ಜೀವರನ್ನು, ಅತಿನೇನೀಯಮಾನಃ-ಅತ್ಯುತ್ಕೃಷ್ಟವಾದ ಮುಕ್ತಿ ಸ್ಥಾನವನ್ನು ಹೊಂದಿಸತಕ್ಕವನಾಗಿ, ಶೃಣ್ವೇ-ಕೇಳಲ್ಪಡುತ್ತಿದ್ದಾನೆ. ಏಧಮಾನದ್ವಿಟ್‌-(ಏಧಮಾನ)-ಯೋಗ್ಯತೆಯನ್ನು ಏರಿ ಪುಣ್ಯ ಮಾಡಿದ ಜೀವನನ್ನು [ಆತನ ಅಧಿಕ ಪುಣ್ಯವನ್ನು] (ದ್ವಿಟ್‌)-ದ್ವೇಷ ಮಾಡತಕ್ಕ, ಉಭಯಸ್ಯ-ದೈತ್ಯರಿಗೂ, ದೇವತೆಗಳಿಗೂ, ರಾಜಾ-ನಿಯಾಮಕನಾದ, ಇಂದ್ರಃ-ಪರಮೈಶ್ವರ್ಯ ಸಂಪನ್ನನಾದ ಶ್ರೀ

ಹರಿಯು, ವಿಶಿಷ್ಟ-ಪ್ರಜೆಗಳಾದ ಹಾಗೂ ಸ್ವರ್ಗನರಕವನ್ನು, ಪ್ರವೇಶಿಸುವುದರಿಂದ ವಿಶಿಷ್ಟನಿಸಿದ, ಮನುಷ್ಯಾನ್-ಮಧ್ಯಮ ಜೀವರನ್ನು ಚೋಪಸ್ಥಾಯಂತೇ-ಸ್ವರ್ಗ, ಭೂಮಿ. ನರಕದಲ್ಲಿ ತಿರುಗಿಸುತ್ತಾನೆ,

ತಾತ್ಪರ್ಯ ಇದು ಋಗ್ವೇದದಲ್ಲಿ ತ್ರಿವಿಧ ಜೀವರ ಸ್ಪಷ್ಟ ಚಿತ್ರಣ ಇದೆ. ಭಗವಂತನು ಆರಂಭಿಸಿದ ಕಾರ್ಯವನ್ನು ಕೊನೆಕಾಣಿಸುವವ ವಿರಾಗ್ರೇಶರ. ಇವನು ಅತ್ಯಂತ ಕ್ರೂರ ಸ್ವಭಾವಾಪನ್ನರಾದ ಅಸುರರನ್ನು ಅಂಧಂತವುಸ್ಸಿನಲ್ಲಿ ಬಹಳ ಪರಿಪರಿಯಿಂದ ದಮನೆ ಮಾಡುತ್ತಾನೆ. ಹಿಂಸಿಸುತ್ತಾನೆ. ಇತರರಾದ ಸಜ್ಜನರನ್ನು ದೇವತೆಗಳನ್ನು ಉತ್ತಮಲೋಕಕ್ಕೆ " ಕೊಂಡೊಯ್ದು ಸುಖವನ್ನು ಉಣಿಸುತ್ತಾನೆ.' ಮಧ್ಯಜೀವರನ್ನು ಸ್ವರ್ಗ, ನರಕ, ಭೂಮಿಯಲ್ಲಿ ಸುತ್ತಾಡಿಸಿ ಸುಖ ದುಃಖ ವಿಶ್ರಗಳನ್ನು ತಿನ್ನಿಸುತ್ತಾನೆ. ಯೋಗ್ಯತೆ ವಿೀರಿ ಮಾಡಲ್ಪಟ್ಟ ಪುಣ್ಯವನ್ನು ನಾಶಮಾಡುತ್ತಾನೆ. ಆಣವಮಾಂಡವ್ಯರಿಂದ ಶಾಪ ಕೊಡಿಸಿ ಅವರ ವಿತಿವಿೀರಿದ ಪುಣ್ಯವನ್ನು ಹ್ರಾಸಗೊಳಿಸಿದ. ಬಲಿಯನ್ನು ತುಳಿದು ಪಾತಾಳಕ್ಕೆ ತಳ್ಳಿದ, ಕಾಲಿಯನ ಹೆಡೆಯನ್ನು ಮೆಟ್ಟಿ ಅಹಂಕಾರವನ್ನು ವಿಷದಜೊತೆಗೆ ದಮನೆ ಮಾಡಿದಃ ತ್ರಿವಿಧ ಚೇತನರಿಗೂ ಶ್ರೀ ಹರಿಯೇ ಸ್ವಾಮಿ ಅವರ ಅವರ ಯೋಗ್ಯತೆಗೆ ಸರಿಯಾಗಿಯೇ ಫಲ ಕೊಡುತ್ತಾನೆ.

॥ ೧೦೨ ॥

ಪರಾಪೂರ್ವೇಷಾಂಸಖ್ಯಾವೃಣಕ್ತಿವಿತರ್ತರಾಣೋ
ಅಪರೇಭಿರೇತಿ ।
ಅನಾನುಭೂತೀರವಧೂನ್ವಾನಃಪೂರ್ವೀರಿಂದ್ರಃ
ಶರದಸ್ತರ್ತರೀತಿ ॥

ಅರ್ಥ ಇಂದ್ರಃ ಪರಮೈಶ್ವರ್ಯ ಸಂಪನ್ನನಾದ ಭಗವಂತನು. ಪೂರ್ವೇಷಾಂ-ಹಿಂದಿನ ಋಕ್‌ನಲ್ಲಿ ಮೊದಲು ಹೇಳಲ್ಪಟ್ಟ ದೈತ್ಯರ, ಸಖ್ಯಾ ಮೈತ್ರಿಯನ್ನು, ಗೆಳೆ

ತನವನ್ನು, ಪರಾ ವೃಣಕ್ತಿ-ದೂರದಿಂದಲೇ ಪರಿತ್ಯಾಗ ಮಾಡುತ್ತಾನೆ, ವಿತರ್ತು ರಾಣಃ-ಅತ್ಯಂತ ವೇಗವುಳ್ಳವನಾಗಿ, ಅಪರೇಭಿಃ-ಅನಂತರ ಹೇಳಲ್ಪಟ್ಟ ದೇವತೆಗಳಿಂದ, ಸಖ್ಯಾ-ಸಖ್ಯವನ್ನು, ಏತಿ-ಹೊಂದುತ್ತಾನೆ. ಅನಾನುಭೂತೀಃ-ಶ್ರೀ ಹರಿಯ ಅನುಭವ ರಹಿತರಾದ ಮಧ್ಯಮ ಮನುಷ್ಯಕನ್ನು, ಅವಧೂನ್ವಾನಃ-(ಅವ)-ಅಧಮವಾದ ನಿತ್ಯ ಸಂಸಾರದಲ್ಲಿ, (ಧೂನ್ವಾನಃ)-ದೂಡತಕ್ಕವನಾಗಿ, ಪೂರ್ವೀಃ-ಹಿಂದಿನ, ಶರದಃ-ಸಂವತ್ಸರಗಳನ್ನು, (ಅತರತ)-ಕಳೆದನೋ, ತರ್ತರೀತಿ-ಈವಾಗಲೂ ಹಾಗೆ ಕಾಲಕಳೆಯುತ್ತಾನೆ. (ತರಿಷ್ಯತಿ)-ಮುಂದೆಯೂ ಇದೇ ರೀತಿ.

ತಾತ್ಪರ್ಯ ಇದೂ ಋಗ್ವೇದದ ಹಿಂದೆ ಹೇಳಿದ ಮಂತ್ರದ ಅನಂತರದ ಋಕ್. ಹಿಂದಿನ ಋಕ್‌ನಲ್ಲಿ ಉಗ್ರಂ ಇತ್ಯಾದಿ ಮೊದಲು ಪ್ರಸ್ತುತರು ದೈತ್ಯರು, ಅನಂತರ ಪ್ರಸ್ತುತರು ದೇವಾದಿ ಸಜ್ಜನ ವೃಂದ. ಭಗವಂತ ಮೊದಲು ಪ್ರಸ್ತುತರಾದ ಅಂದರೆ ದೈತ್ಯರಿಂದ ಸ್ನೇಹ ಬೆಳೆಸಿಕೊಳ್ಳುವುದಿಲ್ಲ. ಅವರ ಸಖ್ಯವನ್ನು ದೂರದಿಂದಲೇ ಪರಿಹರಿಸಿಕೊಳ್ಳುತ್ತಾನೆ. ಅನಂತರ ಪ್ರಸ್ತುತರಾದ ದೇವತೆಗಳಿಂದ ಅತ್ಯಂತ ಉತ್ಸಾಹದಿಂದ ಬಹು ತ್ವರೆಯಿಂದ ಮೈತ್ರಿಯನ್ನು ಬೆಳಿಸಿಕೊಳ್ಳುತ್ತಾನೆ. ತನ್ನ ಅನುಭವ ಪಡೆಯದ ಮಧ್ಯಮರನ್ನು ನಿತ್ಯ ಸಂಸಾರದಲ್ಲಿ ಬೀಳಿಸಿ ಬಳಲಿಸುತ್ತಾನೆ. ಭಗವಂತನಿಗೆ ನಿತ್ಯದಲ್ಲೂ ಒಂದೇ ರೀತಿಯಾದ ಕ್ರೀಡೆ.

ವಿ.ಸೂ ಪೂರ್ವೀಃ ಶರದಃ-ಹಿಂದಿನ ಸಂವತ್ಸರಗಳನ್ನು ಎಂದು ಭೂತ ಕಾಲವನ್ನು ತರ್ತರೀತಿ-ಎಂದು ವರ್ತಮಾನ ಕಾಲವನ್ನು ಹೇಳಿ ಭವಿಷ್ಯತ್ ಕಾಲದಲ್ಲೂ ಹೀಗೆಯೇ ಎಂದು ಸೂಚಿಸಿದ್ದಾರೆ.

॥ ೧೦೩ ॥

ತಮೇವಂವಿದ್ವಾನಮೃತಇದಭವತಿನಾನ್ಯಃಪಂಥಾಅಯ
ನಾಯವಿದ್ಯತೇ ॥
ತಮೇವಂವಿದಿತ್ವಾ ತಿಮೃತ್ಯುಮೇತಿನಾನ್ಯಃಪಂಥಾವಿದ್ಯತೇ
ಯನಾಯ ॥

ಅರ್ಥ ತಂ-ಪುರುಷ ರೂಪಿಯಾದ ಶ್ರೀ ಹರಿಯನ್ನು, ಏವಂ-ಪುರುಸೂಕ್ತದಲ್ಲಿ

ಸ್ತುತಿಸಿದಂತೆ ಸಹಸ್ರ ಶೀರ್ಷತ್ವಾದಿ ಗುಣವುಳ್ಳವನನ್ನಾಗಿ, ಇಹ-ಈ ಲೋಕದಲ್ಲಿ ವಿದ್ವಾನ್-ತಿಳಿದ ಜ್ಞಾನಿಯು, ಇಹ-(ಆಂತೆ)-ಕೊನೆಯಲ್ಲಿ, ಅಮೃತಃ-ಮುಕ್ತನ್ನು ಭವತಿ-ಆಗುತ್ತಾನೆ. ಅಯನಾಯ-ಮೋಕ್ಷಕ್ಕೋಸ್ಕರ ಅನ್ಯಾ-ಜ್ಞಾನಕ್ಕಿಂತ ಬೇರೆಯಾದ, ಪಂಥಾ-ಮಾರ್ಗವು ನವಿದ್ಯತೇ-ಇಲ್ಲ.

ತಂ.ಆ ವಿಷ್ಣುವನ್ನು, ವಿದಿತ್ವಾ ವಿವ ತಿಳಿದ ಮೇಲೆಯೇ, ಅತಿಮೃತ್ಯುಂ. ಮೃತ್ಯು ವನ್ನು ಜಯಿಸಿದ ಮೋಕ್ಷ ಸ್ಥಾನವನ್ನು, ಏತಿ-ಹೊಂದುತ್ತಾನೆ. ಅಯನಾಯ-ಮೋಕ್ಷಕ್ಕೋಸ್ಕರ, ಅನ್ಯಃ-ಬೇರೆಯಾದ, ಪಂಥಾ-ಮಾರ್ಗವು, ನ ವಿದ್ಯತೇ-ಇಲ್ಲ.

ತಾತ್ಪರ್ಯ ಯಜುರ್ವೇದ ಪುರುಷ ಸೂಕ್ತದ ಮಂತ್ರ ಭಾಗವನ್ನು, ಅದಕ್ಕೆ ಸರಿ ಸಮಾನವಾದ ಅರ್ಥವನ್ನು ಕೊಡುವ ಋಗ್ ಭಾಗವನ್ನು ಉದಾಹರಿಸುತ್ತಾ ಜ್ಞಾನ ವೇ ಮೋಕ್ಷ ಸಾಧನ ಎಂಬುದನ್ನು ಶ್ರುತಿಯ ಆಧಾರದಿಂದ ಸಾಧಿಸುತ್ತಿದ್ದಾರೆ. ಪುರುಷಸೂಕ್ತದಲ್ಲಿ ಕೊಂಡಾಡಿದ ಮಹಿಮೋಪೇತನಾದ ಭಗವಂತನ ಸಾಕ್ಷಾತ್ಕಾರವೇ ಮೋಕ್ಷ ಸಾಧನವೆನ್ನುತ್ತದೆ ಈ ಶ್ರುತಿ. ಗುಣಪೂರ್ಣತ್ವ ಸಾಕ್ಷಾತ್ಕಾರದ ಮೋಕ್ಷಕ್ಕೆ ಸಾಧನವೆನ್ನುವುದು ಸ್ಪಷ್ಟವಾಗುತ್ತದೆ ಈ ಶ್ರುತಿಯಿಂದ. ನಿರ್ಗುಣ ಉಪಾಸನೆ ಮೋಕ್ಷ ಸಾಧನ ಅಲ್ಲ ನಾನ್ಯಪಂಥಾ ವಿದ್ಯತೇ ಅಯನಾಯ ಎಂದೂ ಸಪೂರ್ಣಿತವಾಯ್ತು.

॥ ೧೦೪ ॥

ಯಸ್ಯ ದೇವೇಪರಾ ಭಕ್ತಿರ್ಯಥಾ ದೇವೇ ತಥಾ ಗುರೌ ।
ತಸ್ಯೈತೇ ಕಥಿತಾ ಹ್ಯರ್ಥಾಃ ಪ್ರಕಾಶಂತೇ ಮಹಾತ್ಮನಃ ॥

ಅರ್ಥ ಯಸ್ಯ-ಯಾವಾತನಿಗೆ, ದೇವೇ-ಶ್ರೀಹರಿಯಲ್ಲಿ, ಪರಾ-ಸರ್ವೋತ್ಕೃಷ್ಟವಾದ, ಭಕ್ತಿಃ-ಭಕ್ತಿಯು ಇದೆಯೋ, ಯಥಾ-ಹೇಗೆ, ದೇವೇ-ದೇವರಲ್ಲಿ ಶ್ರೇಷ್ಠವಾದ ಭಕ್ತಿಯೋ, ತಥಾ-ಹಾಗೆ ಗುರೌ-ಗುರುಗಳಲ್ಲಿ, ಭಕ್ತಿಃ-ಅವರ ಯೋಗ್ಯತೆಗನುಗುಣವಾದ ಭಕ್ತಿಯು ಇದೆಯೋ, ತಸ್ಯ-ಆದಾವ, ಮಹಾತ್ಮನಃ-ಶ್ರೇಷ್ಠ ಜೀವಿಗೆ, ಏತೇ-ಈ, ಕಥಿತಾ-ಹಿಂದೆ ಹೇಳಿದ ಅರ್ಥಾಃ-

ಪ್ರಮೇಯಗಳು, ಪ್ರಕಾಶಂತೆ–ತಿಳಿಯುತ್ತವೆ ಪ್ರಸಿದ್ಧ.

ತಾತ್ಪರ್ಯ ಶ್ರೀಹರಿಯಲ್ಲಿ ಸರ್ವೋತ್ಕೃಷ್ಟವಾದ ಭಕ್ತಿಯು ಕರ್ತವ್ಯ. ಇತರ ದೇವತೆಗಳಲ್ಲಿ ಅವನ ತಾರತಮ್ಯವನ್ನು ಅನುಸರಿಸಿ ಭಕ್ತಿ ಅವಶ್ಯಕ. ಹಾಗೆಯೆ ಗುರುಗಳಲ್ಲೂ ಅವರಯೋಗ್ಯತೆಗನುಗುಣವಾದಭಕ್ತಿಯನ್ನೆಮಾಡತಕ್ಕದ್ದು ಈರೀತಿಯಭಕ್ತಿಯಿಂದಲೇ ಪ್ರಕೃಷ್ಟಪ್ರಮೇಯವಾದ ಪ್ರಕಾಶವಾದೀತು. ಗುರುಗಳ ಅನುಗ್ರಹಕ್ಕೆ ಪಾತ್ರನಾಗದೆ ಹೋದಜನನಿಗೆ ಈ ಪ್ರಮೇಯದ ಜ್ಞಾನ ಬಾರದು. ಈ ವಾಕ್ಯವೂ ಶ್ರುತಿಯಿಂದ ಉದ್ಧೃತ.

ವಿಶೇಷಾಂಶ ಇಲ್ಲಿ ಯಥಾ ತಥಾ ಶಬ್ದಗಳನ್ನು ನೋಡುವಾಗ ಪರಮಾತ್ಮನಲ್ಲಿ ಹೇಗೋ ಹಾಗೆಯೇ ಗುರುಗಳಲ್ಲೂ ಸರಿಸಮಾನ ಭಕ್ತಿ ಮಾಡಬೇಕೆಂದು ಭ್ರಾಂತಿ ಬರುತ್ತದೆ, ಇತರ ಪ್ರಮಾಣಗಳನ್ನು ಅನುಸರಿಸಿ ಈ ಮೇಲೆ ವಿವರಿಸಿದಂತೆ ತಿಳಿಯಬೇಕು. ಮತ್ತು ಪರಮಾತ್ಮನಭಕ್ತಿಯುಜ್ಞಾನಕ್ಕೆ ಅತ್ಯವಶ್ಯಕ, ಅದರಂತೆ ಗುರುಭಕ್ತಿಯೂ ಅವರ್ಜನೀಯ. ಇಷ್ಟು ಅಂಶದಲ್ಲಿ ಸಾಮ್ಯ ಇಟ್ಟುಕೊಳ್ಳಬೇಕು.

॥ ೧೦೫ ॥ ॥ ೧೦೬ ॥

ಭಕ್ಯರ್ಥಾನ್ಯಖಿಲಾನ್ಯೇವಭಕ್ತಿರ್ಮೋಕ್ಷಾಯ
ಕೇವಲಾ ।
ಮುಕ್ತಾನಾಮಪಿಭಕ್ತಿರ್ಹಿನಿತ್ಯಾನಂದಸ್ವರೂಪಿಣೀ ॥

ಜ್ಞಾನಪೂರ್ವಃಪರಃಸ್ನೇಹೋನಿತ್ಯೋ
ಭಕ್ತಿರಿತೀರ್ಯತೇ ।
ಇತ್ಯಾದಿವೇದವಚನಂಸಾಧನಪ್ರವಿಧಾಯಕಮ್ ॥

ಅರ್ಥ ಅಖಿಲಾನಿ-ಎಲ್ಲಾ ಸಾಧನೆಗಳೂ, ಭಕ್ಯರ್ಥಾನ್ಯೇವ–ಭಕ್ತಿಯೇ ಪ್ರ

ಯೋಜನವುಳ್ಳವುಗಳು, ಕೇವಲಾಭಕ್ತಿಃ-ಭಕ್ತಿಯೊಂದೇ, ಮೋಕ್ಷಾಯ-ಮೋಕ್ಷಕ್ಕೆ ಮುಖ್ಯ ಸಾಧನ, ಮುಕ್ತಾನಾಮಪಿ-ಮುಕ್ತರಾದ ಪುರುಷರಿಗೂ. ನಿತ್ಯಾನಂದಸ್ವರೂಪಿಣೇ-ಶಾಶ್ವತ ಆನಂದ ಸ್ವರೂಪ ಭೂತವಾದ, ಭಕ್ತಿಃ-ಭಕ್ತಿಯು, ಅಸ್ತಿ ಹಿ-ಇದೆ ಯಷ್ಟೇ, 106) ಜ್ಞಾನಪೂರ್ವಃ-ಮಾಹಾತ್ಮ್ಯಜ್ಞಾನ ಪೂರ್ವಕವಾದ, ಪರಃ-ಪತ್ನೀ ಪುತ್ರರ ಸ್ನೇಹಕ್ಕಿಂತಲೂ ಮಿಗಿಲಾದ, ನಿರ್ವ್ಯಾಜವಾದ, ನಿತ್ಯಃ-ಅವಿಚ್ಛಿನ್ನವಾದ, ಸ್ನೇಹಃ-ಪರವು ಪ್ರೇಮವೇ, ಭಕ್ತಿಃಇತಿ-ಭಕ್ತಿಯೆಂಬುದಾಗಿ, ಈರ್ಯತೇ ಹೇಳಲ್ಪಡುತ್ತದೆ. ಇತ್ಯಾದಿ-ಇದೇ ಮೊದಲಾದ, ವೇದವಚನಂ-ವೇದ ವಾತು, ಸಾಧನಪ್ರವಿಧಾಯಕಮ್-ಮೋಕ್ಷ ಸಾಧನೆಯನ್ನು ಹೇಳತಕ್ಕದ್ದು ಇದೆ,

ತಾತ್ಪರ್ಯ ಶ್ರೀಮದಾಚಾರ್ಯರು ವೇದದ ಒಂದೂವರೆ ಶ್ಲೋಕವನ್ನು ಉದ್ಧರಿಸುತ್ತಾ ಭಕ್ತಿಯ ಶ್ರೇಷ್ಠತೆಯನ್ನು ಮೋಕ್ಷ ಸಾಧನೆಗಳಲ್ಲಿ ಅದರ ಮಹತ್ತರ ಪಾತ್ರವನ್ನು ವಿವರಿಸುತ್ತಿದ್ದಾರೆ. ಕರ್ಮಾಚರಣೆ ತೀರ್ಥಯಾತ್ರೆ ಇತ್ಯಾದಿ ಸಕಲ ಸಾಧನೆಗಳೂ ಭಕ್ತಿಗಾಗಿ, ಭಕ್ತಿ ದಾಸ್ಯ ಮೋಕ್ಷಕ್ಕಾಗಿದೆ. ಭಕ್ತಿಯು ಜೀವಿಯ ಸ್ವರೂಪ ಭೂತವಾಗಿದೆ. ಆದುದರಿಂದ ನಿತ್ಯವೂ ಹೌದು. ಮೋಕ್ಷದಲ್ಲೂ ಸ್ಥಿರವಾಗಿರುತ್ತದೆ; ಮುಕ್ತಿಯು ತನಕ ಭಕ್ತಿಯು ಮುಕ್ತಿಗೆ ಸಾಧಕವಾಗಿದ್ದರೆ, ಅನಂತರಕಾಲಿಕವಾದ ಈ ಭಕ್ತಿಯು ಮುಕ್ತನ ಸ್ವಭಾವವಾಗುವುದು. ಮುಕ್ತಿಯು ಸ್ವತಃಪುರುಷಾರ್ಥ. ಆದುದರಿಂದ ಮೋಕ್ಷ ಕಾಲಿಕ ಈ ಭಕ್ತಿಯು ಆನಂದ ಸ್ವರೂಪವಾಗಿರುತ್ತದೆ. ಮಾಹಾತ್ಮ್ಯ ಜ್ಞಾನದಿಂದ ಉಂಟಾದಂತಹ, ಎಂದೆಂದೂ ವಿಚ್ಛೇದ ಉಂಟಾಗದಿರತಕ್ಕ ಅತ್ಯಾತ್ಮೀಯ ಸಕಲ ವಸ್ತುಗಳಲ್ಲಿರತಕ್ಕ ಸ್ನೇಹವನ್ನು ಏರೀಸುವ ಸಾದ್ಯಡ ಪ್ರೇಮ ಸ್ರವಾಹವೇ ಭಕ್ತಿ ಎನ್ನುತ್ತದೆ ಈ ವೇದವಾಕ್ಯ;

॥ ೧೦೭ ॥

"ನಿಶ್ಶೇಷಧರ್ಮಕರ್ತಾऽಪ್ಯಭಕ್ತಸ್ತೇ ನರಕೇ ಹರೇ ।
ಸದಾ ತಿಷ್ಠತಿ ಭಕ್ತಶ್ಚೇತ್ಬ್ರಹ್ಮಹಾಪಿ ವಿಮುಚ್ಯತೇ ॥"

["ಪ್ಯ ಭಕ್ತಶ್ಚೇತ್ ನರಕೇ ಹರೇ:" ಎಂದು ಪಾಠಾಂತರ]

ಅರ್ಥ ಹರೇ–ಎಲೋ ಪರಮಾತ್ಮನೇ, ತೇ–ನಿನ್ನ, ಅಭಕ್ತಃ–ಭಕ್ತನಾಗದೆ ಇದ್ದವನು, ನಿಶ್ಕೇಪಧರ್ಮಕರ್ತಾಅಪಿ–ಸಕಲ ಧರ್ಮ ಕಾರ್ಯಗಳನ್ನು ಮಾಡಿದವನಾದರೂ, ಸದಾ–ಯಾವಾಗಲೂ, ನರಕೇ–ನರಕದಲ್ಲಿ, ತಿಷ್ಠತಿ–ಇರುತ್ತಾನೆ, ತೇ–ನಿನ್ನ, ಭಕ್ತಶ್ಚೇತ್–ಭಕ್ತಿವುಳ್ಳವನಾದರೆ, ಬ್ರಹ್ಮಹಾಅಪಿ–ಬ್ರಹ್ಮ ಹತ್ಯೆ ಮಾಡಿದವನಾದರೂ, ವಿಮುಚ್ಯತೇ–ವಿಮುಕ್ತನಾಗುತ್ತಾನೆ.

ತಾತ್ಪರ್ಯ ಈ ಶ್ರುತಿಯಿಂದ ಭಗವಂತನ ಭಕ್ತಿಯ ಮಹತ್ವವನ್ನು ಎತ್ತಿ ತೋರಿಸುತ್ತದೆ. ಪರಮಾತ್ಮನಲ್ಲಿ ಭಕ್ತಿಯಿಲ್ಲದೆ ಯಾವುದೇ ಯಜ್ಞಾಗ ಯಾಜನ ದಾನ ಧರ್ಮ ಮಾಡಿದರೂ ಅವೆಲ್ಲ ನೀರಲ್ಲಿಹೋಮಮಾಡಿದಂತೆ. ಅತನಿಗೆನರಕವೇ ಖಂಡಿತ, ಹರಿಯಲ್ಲಿ ಭಕ್ತಿ ಇದ್ದ ಮಹಾತ್ಮನಾಗಿದ್ದರೆ ಆತ ಏನೇ ಮಾಡಲಿ ಬ್ರಹ್ಮ ಹತ್ಯೆಯನ್ನೇ ಮಾಡಲಿ ಆತನಿಗೆ ಮೋಕ್ಷವು ಖಂಡಿತ.

॥ ೧೦೮ ॥

"ಧರ್ಮೋ೯ಭವತ್ಯಧರ್ಮೋ೯s ಪಿಕೃತೋಭಕ್ತ್ಯೃಸ್ತವಾಚ್ಯುತ
ಪಾಪಂಭವತಿಧರ್ಮೋ೯s ಪಿಯೋನಭಕ್ತ್ಯೃಕೃತೋಹರೇ ॥"

ಅರ್ಥ ಅಚ್ಯುತ–ಎಲೋ ಅಚ್ಯುತನೇ, ತವ–ನಿನ್ನ, ಭಕ್ತ್ಯೃಃ–ಭಕ್ತರಿಂದ, ಕೃತಃ–ಮಾಡಲ್ಪಟ್ಟಿದ್ದು, ಅಧರ್ಮೋ೯sಪಿ–ಲೋಕ ದೃಷ್ಟಿಯಿಂದ ಅಧರ್ಮವಾಗಿದ್ದರೂ, ಧರ್ಮಃ–ಧರ್ಮವು, ಭವತಿ ಆಗುತ್ತದೆ, ಯಃ–ಯಾವುದು, ತವ–ನಿನ್ನ, ನಭಕ್ತ್ಯೃಃ–ಅಭಕ್ತರಿಂದ, ಕೃತಃ–ಮಾಡಲ್ಪಟ್ಟಿದೆಯೋ, (ಸಃ)ಅದು, ಧರ್ಮೋ೯sಪಿ–ಲೋಕ ದೃಷ್ಟಿಗನುಸಾರವಾಗಿ ಧರ್ಮವಾದರೂ, ಪಾಪಂ–ಪಾಪಕ್ಕೆ ಕಾರಣವಾದದ್ದು ಭವತಿ ಆಗುತ್ತದೆ.

ತಾತ್ಪರ್ಯ ಹಿಂದಿನ ಶ್ರವೇಯವನ್ನೇ ಸಾರುವ ಮತ್ತೊಂದು ಶ್ರುತಿ ಉದಾಹರಿಸಲ್ಪಟ್ಟಿದೆ. ಪಾಮರ ವರ್ಗಕ್ಕೆ ಸೇರಿದ ನಮಗೆ ಅಧರ್ಮವೆಂತೆ ಭಾಸವಾಗಬಹುದು. ಆದರೆ ಅದನ್ನು ಭಗವದ್ಭಕ್ತರು ಮಾಡಿದರೂ ಧರ್ಮ ಅಥವಾ ಪುಣ್ಯ

ಸಾಧನೆಯೇ ಆಗುತ್ತೆ. ನಮ್ಮ ದೃಷ್ಟಿಯಿಂದ ಧರ್ಮಕಾರ್ಯವಾಗಿದ್ದರೂ ಭಗವಂತನ ಭಕ್ತನಾಗದವನು ಆ ಕಾರ್ಯವೆಸಗಿದರೆ ಅದು ಪಾಪಸಾಧನವೇ ಆಗುತ್ತೆ. ಪುಣ್ಯ ಈತನಿಗೆ ಲಭಿಸದು.

॥ ೧೦೯ ॥

'ಭಕ್ತ್ಯಾತ್ವನನ್ಯಯಾಶಕ್ಯಅಹಮೇವಂವಿಧೋಽ ರ್ಜುನ ।
ಜ್ಞಾತುಂದ್ರಷ್ಟುಂಚತತ್ತ್ವೇನಪ್ರವೇಷ್ಟುಂಚಪರಂತಪ ॥'

ಅರ್ಥ ಪರಂತಪ-ಮಹಾತಪಸ್ವಿಯಾದ, ಅರ್ಜುನ-ಎಲೋ ಅರ್ಜುನನೇ,

ಏವಂ ವಿಧಃ:-ಈ ರೀತಿಯಾಗಿರತಕ್ಕ ಅಂದರೆ ವಿಶ್ವರೂಪನಾದ, ಅಹಂ-ನಾನು ಅಂದರೆಶ್ರೀಕೃಷ್ಣನು, ಅನನ್ಯಯಾ- (ನನಗಿಂತ)ಹರಿಗಿಂತಇತರರನ್ನು ವಿಷಯೀಕರಿಸದೆ,ಹರಿಯನ್ನು ಮಾತ್ರ ವಿಷಯೀಕರಿಸುವ, ಭಕ್ತ್ಯಾ-ಭಕ್ತಿಯಿಂದಲೇ, ತತ್ತ್ವೇನ-ಯಥಾರ್ಥವಾಗಿ, ಜ್ಞಾತುಂ-ತಿಳಿಯಲು, ದ್ರಷ್ಟುಂ-ಸಾಕ್ಷಾತ್ಕಾರಗಿ, ನೋಡಲು ಪ್ರವೇಷ್ಟುಂ ಚ-ಮೋಕ್ಷದಲ್ಲಿ ಪ್ರವೇಶಿಸಲೂ, ಶಕ್ಯ:-ಯೋಗ್ಯನಾಗಿದ್ದಾನೆ.

ತಾತ್ಪರ್ಯ ತನ್ನ ಪರಮ ಪ್ರೇಮಾಸ್ಪದನಾದ ಅರ್ಜುನನಿಗೆ, ಶ್ರೀ ಕೃಷ್ಣ ತನ್ನ ಅದ್ಭುತ ಗೀತೆಯಿಂದ ಸ್ಫೂರ್ತಿಯನ್ನೀಯುತ್ತಾ, ಭಕ್ತಿಯ ಶ್ರೇಷ್ಠತೆಯನ್ನು ವಿಶದೀಕರಿಸುತ್ತಿದ್ದಾನೆ. ಎಲೋ ಅರ್ಜುನ! ನನ್ನ ವಿಶ್ವ ರೂಪತತ್ತ್ವದ ಸಾಕ್ಷಾತ್ಕಾರವನ್ನು ಭಕ್ತ ಮಾತ್ರ ಪಡೆಯಬಲ್ಲ. ನನ್ನ ಮಾತಿನ ಅರ್ಥದ ಜ್ಞಾನ ಭಕ್ತನಿಗೆ ಆದೀತು. ಕೇವಲ ಭಕ್ತ ಮಾತ್ರ ನನ್ನ ಉದರವನ್ನು ಪ್ರವೇಶಿಸಿ ಮುಕ್ತ ಸುಖಿವನ್ನು ಅನುಭವಿಸಬಲ್ಲ. ಭಕ್ತಿಯ ಮಹಿಮೆ ಅಪಾರ.

॥ ೧೧೦ ॥

ಭಗವಂತನ ದ್ವೇಷ, ಭಕ್ತಿಗಳ ಸ್ವರೂಪ ಹಾಗೂ ಫಲಗಳನ್ನು "ಅನಾದಿ ದ್ವೇಷಿಣೋ ಎಂಬಲ್ಲಿಂದ ಆರಂಭಿಸಿ "ಸರ್ವೇಭ್ಯಃ ಪರಮುಸ್ತತಃ" ಎಂಬ 120ನೇ ಪದ್ಯದ ತನಕ ಪುರಾಣ ವಾಕ್ಯಗಳಿಂದಲೇ ಶ್ರೀಮದಾಚಾರ್ಯರು ಸ್ಪಷ್ಟ ಪಡಿಸುತ್ತಿ

ದ್ವಾರೆ.

ಅನಾದಿ ದ್ವೇಷಿಣೋ ದೈತ್ಯಾ ವಿಷ್ಣೌ ದ್ವೇಷೋ ವಿವರ್ದ್ಧಿತಃ ।
ತಮಸ್ಯಂಧೇ ಪಾತಯತಿ ದೈತ್ಯಾನಂತೇ ವಿನಿಶ್ಚಯಾತ್ ॥

ಅರ್ಥ ದೈತ್ಯಾಃ-ದೈತ್ಯ ಜೀವರು, ವಿಷ್ಣೌ:-ಭಗವಂತನಲ್ಲಿ,ಅನಾದಿ ದ್ವೇಷಿಣಃ-ಅನಾದಿ ಕಾಲದಿಂದಲೂ ದ್ವೇಷವುಳ್ಳವರು. ಈ ರೀತಿಯಾಗಿ,ವಿವರ್ಧಿತಃ-ಬೆಳೆದು ಪರಿ ಪಕ್ವಾವಸ್ಥೆಗೆ ತಲುಪಿದ, ದ್ವೇಷಃ-ಹರಿ ದ್ವೇಷವು, ದೈತ್ಯಾನ್-ದೈತ್ಯರನ್ನು ವಿನಿಶ್ಚಯಾತ್-ನಿಸ್ಸಂದೇಹವಾಗಿ, ಅಂಕೇ-ಪ್ರಳಯ ಕಾಲದಲ್ಲಿ, ಅಂಧೇ ತಮಸಿ-ಅಂಧಾ ತಮಸ್ಸಿನಲ್ಲಿ, ಪಾತಯತಿ-ಬೀಳಿಸುತ್ತದೆ.

ತಾತ್ಪರ್ಯ ಹರಿಯಲ್ಲಿ ದ್ವೇಷ-ಮಾಡುವುದೇ ದೈತ್ಯರ ಸ್ವಭಾವ.'ಆದುದರಿಂದ ಅನಾದಿ-ಕಾಲದಿಂದಲೂ ಬೆಳೆಸಿಕೊಂಡು ಬಂದ ಈ ದ್ವೇಷವು ಈ ದೈತ್ಯ ಸಂತಾನವನ್ನು ಪ್ರಳಯ ಕಾಲದಲ್ಲಿ ನಿಸ್ಸಂದೇಹವಾಗಿ ಅಂಧಂತಮಸ್ಸಿನಲ್ಲಿ ಬೀಳಿಸುತ್ತತೆ.

॥ ೧೧೧ ॥

ಪೂರ್ಣದುಃಖಾತ್ಮಕೋದ್ವೇಷಃಸೋನಂತೋ ಹ್ಯವತಿಷ್ಠತೇ ।
ಪತಿತಾನಾಂತಮಸ್ಯಂಧೇನಿಶ್ಶೇಷಸುಖವರ್ಜಿತೇ ॥

ಅರ್ಥ ನಿಶ್ಶೇಷ ಸುಖವರ್ಜಿತೇ-ಸುಖ ಲೇಶವೂ ಇಲ್ಲದಿರತಕ್ಕ, ಅಂಧೇತಮಸಿ ಅಂಧಂತಮಸ್ಸಿನಲ್ಲಿ, ಪತಿತಾನಾಂ-ಬಿದ್ದಿರತಕ್ಕ ದೈತ್ಯರ, ಸಃ-ಅನಾದಿ ಕಾಲದಿಂದ

ಬೆಳೆದು ಬಂದ. ದ್ವೇಷ:-ಸ್ವರೂಪ ದ್ವೇಷವು. ಅನಂತಃಸನ್- ನಾಶ ಶೂನ್ಯವಾಗಿ, ಪೂರ್ಣ-ದುಃಖಾತ್ಮಕಃ ಸನ್-ಸರ್ವಥಾ ದುಃಖ ಸ್ವರೂಪವುಳ್ಳದ್ದಾಗಿ-ಖಂಡಿತವಾಗಿಯೂ ಜಿಜ್ಞಾಸ್ಯತೇ-ಸ್ಥಾಯಿಯಾಗಿರುತ್ತೆ.

ತಾತ್ಪರ್ಯ ಅನಂತವಾದ ವಸುವಿಗೆ ನಾಶವಿಲ್ಲ. ಆದುದರಿಂದಲೇ ದೈತ್ಯರ ಅನಾದಿಯಾದ ಹಾಗೂ ಸ್ವರೂಪ ಭೂತವಾದ ಆ ದ್ವೇಷವೂ ನಿತ್ಯವೆಂದಾಯಿತು. ಈ ದ್ವೇಷ ಪ್ರಳಯ ಕಾಲದ ತನಕ ಬೆಳೆಯುತ್ತಾ ಬೆಳೆಯುತ್ತಾ ಪರಿ ಪಕ್ವಾವಸ್ಥೆಗೆ ಬಂದು, ನಂತರ ದೈತ್ಯರನ್ನು ಸುಖ ಲೇಶವೂ ಇಲ್ಲದಿರತಕ್ಕ ಅಂಧಂತಮಸ್ಸಿನಲ್ಲಿ ಬೀಳಿಸುತ್ತದೆ. ಅನಂತರ ಆ ದ್ವೇಷವಾದರೂ ಪರಿ ಪೂರ್ಣ ದುಃಖ ಸ್ವರೂಪದಿಂದ ಅನಂತ ಕಾಲದ ತನಕವೂ ಅಸ್ತಿತ್ವವನ್ನು ಪಡೆಯುತ್ತದೆ.

॥ ೧೧೨ ॥ ॥ ೧೧೩ ॥

ಜೀವಾಭೇದೋನಿರ್ಗುಣತ್ವಮಪೂರ್ಣಗುಣತಾತಥಾ ।
ಸಾಮ್ಯಾಧಿಕ್ಯೇತದನ್ಯೇಷಾಂ,ಭೇದಸ್ತದ್ಗತಏವಚ ॥
ಪ್ರಾದುರ್ಭಾವವಿಪರ್ಯಾಸಸ್ತದ್ಭಕ್ತದ್ವೇಷಏವಚ ।
ತತ್ಪ್ರಮಾಣಸ್ಯನಿಂದಾಚದ್ವೇಷಾಪತೇಖಿಲಾಮತಾ: ॥

ಅರ್ಥ (1) ಜೀವಾಭೇದ:-ಪರಮಾತ್ಮನಿಗೆ ಜೀವರಿಗಿಂತ ಅಭೇದವನ್ನು ತಿಳಿಯುವುದು. (2) ನಿರ್ಗುಣತ್ವಂ-ಭಗವಂತನಿಗೆಯಾವ ಗುಣವೂ ಇಲ್ಲ. ಅತನು ನಿರ್ಗುಣ ಎಂಬ ಜ್ಞಾನ. (3) ತಥಾ-ಹಾಗೆಯೇ, ಅಪೂರ್ಣ ಗುಣತಾ-ಪರಿಪೂರ್ಣ ಗುಣವಿಲ್ಲದವನು ಕೆಲವೇ ಗುಣಗಳುಳ್ಳವನು ಎಂದು ತಿಳಿಯುವುದು. (4) (5) ತದನ್ಯೇಷಾಂ-ಭಗವದಿತರರಿಗೆ, ಸಾಮ್ಯಾಧಿಕ್ಯೇ-ಪರಮಾತ್ಮನಿಂದ ಸಾಮ್ಯ ಅಥವಾ ಅಧಿಕ್ಯವನ್ನು ತಿಳಿಯುವುದು. (6) ತದ್ಗತಃ ಭೇದ ಏವಚ-ಪರಮಾತ್ಮನ ಅವಯವಗಳಲ್ಲಿ ಅಥವಾ ಅವತಾರಗಳಲ್ಲಿ ಪರಸ್ಪರವಾಗಿ ಭೇದವನ್ನು ಚಿಂತನ ಮಾಡುವುದು. (7) ಪ್ರಾಭುರ್ಭಾವ ವಿಪರ್ಯಾಸ:-ಪರಮಾತ್ಮನ ಅವ

ತಾರಗಳಲ್ಲಿ ವಿಪರೀತ ಜ್ಞಾನ. (8) ತದ್ಭಕ್ತ-ದ್ವೇಷ ವಿವಚ-ಪರಮಾತ್ಮನ ಭಕ್ತ ರಲ್ಲಿ ದ್ವೇಷವಾಡುವಿಕೆ. (9) ತತ್ಪ್ರಮಾಣಸ್ಯ-ಭಗವಂತನ-ಮಹಿಮೆಯನ್ನು ತಿಳಿಸುವ ಪ್ರಮಾಣ ಗ್ರಂಥಗಳ, ನಿಂದಾ ಚ-ನಿಂದೆಯು, ಏತೇ-ಈ ರೀತಿಯಾಗಿ ಒಂಭತ್ತು ವಿದ ವಾದ, ಅಖಿಲಾ:-ಎಲ್ಲಾ ದೋಷಗಳೂ ದ್ವೇಷಾ:-ಭಗವದ್ವೇಷ ಎಂಬುದಾಗಿ ಮಾತ್ರ ತಿಳಿಯಲ್ಪಟ್ಟವೆ.

ತಾತ್ಪರ್ಯ ಭಗವಂತನ ಏಕೈಕಾಂಶಕ್ಕೆ ಕಾರಣವಾದ ದ್ವೇಷ ನವ ವಿಧವಾಗಿದೆ.

[1] ಜೀವ ಬ್ರಹ್ಮರ ಅಭೇದ ಜ್ಞಾನ ಒಂದು ರೀತಿಯ ದ್ವೇಷ.
[2] ಹರಿಯು ಯಾವ ಗುಣವೂ ಇಲ್ಲದವ, ನಿರ್ಗುಣನು ಎನ್ನುವ ಜ್ಞಾನ. ಇನ್ನೊಂದು ರೀತಿಯ ದ್ವೇಷ. [3] ಹರಿಗೆ 8 ಗುಣಗಳು ಅಥವಾ ಇಷ್ಟೇ ಗುಣಗಳು. ಗುಣ ಪರಿ ಪೂರ್ಣನಲ್ಲಯೆನ್ನುವಕಲ್ಪನೆ . ಮತ್ತೊಂದು ರೀತಿಯ ದ್ವೇಷ, [4] ಜೀವರಿಗೂ ಬ್ರಹ್ಮನಿಗೂ ಸಾಮ್ಯ ಜ್ಞಾನ. ಇನ್ನೊಂದು ದ್ವೇಷ, [5] ಅಥವಾ ಜೀವರಾದ ನಾವೇ ಭಗವಂತ ನಿಗಿಂತ ಅಧಿಕರು. ಉತ್ಕೃಷ್ಟರು ಎನ್ನುವ ಭ್ರಾಂತಿ. ಅನ್ಯ ವಿಧವಾದ ದ್ವೇಷ. [6] ಪರಮಾತ್ಮನಿಗೂ ಆತನ ಅವಯವಗಳಿಗೂ, ಅವತಾರಗಳಿಗೂ, ಗುಣಕ್ರಿಯೆಗಳಿಗೂ ಭೇದ ಜ್ಞಾನ. ಒಂದು ರೀತಿಯ ದ್ವೇಷ. (7) ಪರ ಮಾತ್ಮನ ಅವತಾರವಲ್ಲದ ಬಲರಾಮಾದಿಗಳನ್ನು ಪರಮಾತ್ಮನ ಅವತಾರವೆಂದು ಕಲ್ಪಿಸುವುದು. ಪರಮಾತ್ಮನ ಅವತಾರವಾದ ವೇದವ್ಯಾಸಾದಿಗಳನ್ನು ಪರಮಾತ್ಮನ ಅವತಾರವಲ್ಲವೆಂದು ಭಾವಿಸುವುದು. ಪರಮಾತ್ಮನ ಅವತಾರಗಳಿಗೆ ನಮ್ಮಂತೇ ಜನಿ ಮೃತಿಗಳೂ, ದು:ಖಾದಿ ದೋಷಗಳಿವೆಯೆಂದೂ, ಆತನ ದೇಹ ನಮ್ಮಂತೆ ಪ್ರಾಕೃತ ಪಾಂಚ ಭೌತಿಕವೆಂದೂ ತಿಳಿಯುವುದೂ ಇವೆಲ್ಲಾ ಮಹಾದ್ವೇಷಗಳೇ ಸರಿ.

(8) ಭಗವಂತನ ಭಕ್ತರನ್ನು ದೂಷಿಸಿ, ನಿಂದಿಸಿ, ದ್ವೇಷಿಸುವುದು ಪರಮಾತ್ಮನ ದ್ವೇಷವೇ ಆಗುತ್ತೇ. (9) ಭಗವಂತನ ಗುಣಗಾನವನ್ನು ಮಾಡುವ, ಆತನ ಸ್ತುತಿಗ್ರಂಥವ, ಆತನ ಪರಿಚಯವನ್ನೀಯುವ ಆತನ ಅಸ್ತಿತ್ವವನ್ನು ನಮಗೆ ಮನ ಮುಟ್ಟುವಂತೆ ತಿಳಿಸುವ ಪ್ರಮಾಣಗಳನ್ನು ದೂಷಿಸುವುದೂ ಮಹಾ ದೊಡ್ಡ ದ್ವೇಷವೇ ಸರಿ.

॥ ೧೧೪ ॥

ಏತೈರ್ವಿಹೀನಾ ಯಾ ಭಕ್ತಿಃ ಸಾ ಭಕ್ತಿರಿತಿ ನಿಶ್ಚಿತಾ ।
ಅನಾದಿಭಕ್ತಿರ್ದೇವಾನಾಂಕ್ರಮಾದ್ವೃದ್ಧಿಂಗತೈವಸಾ ॥

ಅರ್ಥ: ಏತೈಃ-ಈ ನವ ವಿಧವಾದ ದ್ವೇಷಗಳಿಂದ, ವಿಹೀನಾ-ರಹಿತವಾದ, ಯಾ-ಯಾವ, ಭಕ್ತಿಃ-ಸುದೃಢವಾದ ಸ್ನೇಹವಿದೆಯೋ, ಸಾ-ಇದು, ಭಕ್ತಿಃಇತಿ-ಭಕ್ತಿಯೆಂಬುದಾಗಿ, ನಿಶ್ಚಿತಾ-ನಿಶ್ಚಯಿಸಲ್ಪಟ್ಟಿದೆ, ದೇವಾನಾಂ-ದೇವತೆಗಳಿಗೆ, ಅನಾದಿ ಭಕ್ತಿ-ಅನಾದಿ ಕಾಲದಿಂದಲೂ ಭಕ್ತಿಯಿದೆ, ಸಾ-ಆ ಭಕ್ತಿಯು, ಕ್ರಮಾತ್-ಕಾಲ ಕ್ರಮದಿಂದ, ವೃದ್ಧಿಂ-ಅಧಿಕ್ಯವನ್ನು, ಗತೈವ-ಹೊಂದಿಯೇ ಹೊಂದುತ್ತೆ.

ತಾತ್ಪರ್ಯ ಹಿಂದೆ ವಿವರಿಸಿದ ನವ ವಿಧವಾದ ದ್ವೇಷ ಲೇಶ ಶೂನ್ಯವಾದ ಶ್ರೀ ಹರಿಯ ಮಹಾತ್ಮ್ಯ ಜ್ಞಾನದಿಂದ ವ್ಯಕ್ತವಾದ ಸುದೃಢ ಸ್ನೇಹವೇ ಭಕ್ತಿಯೆನಿಸುತ್ತದೆ. ಇಂತಹ ಭಕ್ತಿಯು ದೇವತೆಗಳ ಸ್ವರೂಪಭೂತವಾದದ್ದು ಹೌದು. ಮತ್ತು ದಿನದಿಂದ ದಿನಕ್ಕೆ ಅಭಿವೃದ್ಧಿ ಹೊಂದುತ್ತೆ. ಕ್ಷಣಕ್ಷಣಕ್ಕೂ ಹ್ರಾಸಹೊಂದತಕ್ಕದ್ದಲ್ಲ,

॥ ೧೧೫ ॥

ಅಪರೋಕ್ಷದೃಶೇಹೇ೯ತುಃಮುಕ್ತಿಹೇತುಶ್ಚಸಾಪುನಃ ।
ಸೈವಾನಂದಸ್ವರೂಪೇಣ ನಿತ್ಯಾ ಮುಕ್ತೇಷುತಿಷ್ಠತಿ ॥

ಅರ್ಥ ಸಾ-ಆಭಕ್ತಿಯು, ಅಪರೋಕ್ಷದೃಶೇಃ-ಪ್ರತ್ಯಕ್ಷಜ್ಞಾನಕ್ಕೆ ಹೇತುಃ-ಕಾರಣವಾಗಿದೆ, ಪುನಃ-ಅನಂತರ ಮಾಡತಕ್ಕ ಭಕ್ತಿಯು, ಮುಕ್ತಿಹೇತುಶ್ಚ-ಮೋಕ್ಷಕ್ಕೂ ಕಾರಣವಾಗಿದೆ, ಅನಂತರ ಸೈವ-ಆದೇ ಭಕ್ತಿಯು, ಮುಕ್ತೇಷು-ಮುಕ್ತಿ ಹೊಂದಿದ ಪುರುಷರಲ್ಲಿ, ನಿತ್ಯಾ-ನಾಶಶೂನ್ಯವಾಗಿ, ಆನಂದ ಸ್ವರೂಪೇಣ-ಆನಂದಾತ್ಮಕವಾಗಿ, ತಿಷ್ಠತಿ-ಸ್ಥಿರವಾಗಿರುತ್ತೆ.

ತಾತ್ಪರ್ಯ ಶ್ರೀ ಹರಿಯಲ್ಲಿ ಮೂಡತಕ್ಕ ಭಕ್ತಿಯೇ, ಶ್ರೀ ಹರಿಯು ಸಾಕ್ಷಾತ್ಕಾರಕ್ಕೆ ನಿಮಿತ್ತ: ಸಾಕ್ಷಾತ್ಕಾರವಾದ ಬಳಿಕವೂ ಅನುವೃತ್ತವಾದ ಈ ಭಕ್ತಿಯಿಂದ ಪ್ರಸನ್ನ ನಾಗಿ ಭಗವಂತ ಮುಕ್ತಿಯನ್ನು ಕರುಣಿಸುತ್ತಾನೆ. ಮುಕ್ತಿಯು ಬಳಿಕವೂ ಈ ಭಕ್ತಿ ನಾಶ ಹೊಂದಲಾಪದು. ಅನಂತರದ ಭಕ್ತಿಯು ಫಲ ಸಾಧನೆಯಾಗದಿದ್ದರೂ ಫಲಾತ್ಮಕವಾಗಿದೆ. ಅನಂದ ಸ್ವರೂಪವಾಗಿ ನಿತ್ಯ ಸ್ಥಿತಿಯನ್ನು ಹೊಂದುತ್ತದೆ.

॥ ೧೧೬ ॥

ಯಥಾಶೌಕ್ಲ್ಯಾದಿಕಂರೂಪಂಗೋರ್ಭವತ್ಯೇವಸರ್ವದಾ ।
ಸುಖಜ್ಞಾನಾದಿಕಂ ರೂಪಮೇವಂ ಭಕ್ತೇರ್ನಚಾನ್ಯಥಾ ॥

ಅರ್ಥ ಯಥಾ-ಯಾವ ರೀತಿಯಲ್ಲಿ. ಸರ್ವದಾ-ಯಾವಾಗಲೂ ಇರತಕ್ಕ, ಶೌಕ್ಲ್ಯಾದಿಕಂ-ಬಿಳಿಯೇ ಮೊದಲಾದ ಬಣ್ಣವು. ಗೋ:-ಆಕಳಿನ, ರೂಪಂ-ಸ್ವರೂಪವು, ಭವತ್ಯೇವ-ಆಗುತ್ತದೆಯೋ. ಏವಂ-ಇದೇ ರೀತಿಯಾಗಿ, ಸುಖಜ್ಞಾನಾದಿಕಂ-ಸುಖಜ್ಞಾನವೇ, ಮೊದಲಾಗಿವುಳ್ಳ ಗುಣಗಳೂ. ಭಕ್ತಿಯ ರೂಪಂ-ಸ್ವರೂಪವು, ಭವತ್ಯೇವ-ಆಗಿಯೇ, ಆಗುತ್ತ, ಅನ್ಯಥಾ-ಇದಕ್ಕೆ ವಿಪರೀತವಾಗಿ, ನಚ-ಆಗುವುದಿಲ್ಲ.

ತಾತ್ಪರ್ಯ ಗೋವಿಗೂ ಅದರ ಬಿಳಿ, ಕೆಂಪು, ಮೊದಲಾದ ಬಣ್ಣಗಳಿಗೂ ಭೇದವಿಲ್ಲ. ಅಭೇದವಿದೆ. ಅದರಂತೆ ಜೀವನ ಭಕ್ತಿಗೂ ಅತನ ಜ್ಞಾನಾನಂದಾದಿಗಳಿಗೂ ಭೇದ ಶೂನ್ಯವಾದ ಅಭೇದವಿದೆ. ಆದುದರಿಂದ ಭಕ್ತಿಯು ಆನಂದ ಸ್ವರೂಪಭೂತವಾದುದು. ಮುಕ್ತಿಯಲ್ಲಿದೆಯೆನ್ನುವ ಮಾತು ಅಪಾರ್ಥಕವಲ್ಲ.

॥ ೧೧೭ ॥

ಭಕ್ತ್ಯೈವ ತುಷ್ಟಿಮಭ್ಯೇತಿ ವಿಷ್ಣುರ್ನಾನ್ಯೇನ ಕೇನಚಿತ್ ।
ಸ ಏವ ಮುಕ್ತಿದಾತಾ ಚ ಭಕ್ತಿಸ್ತತ್ರೈಕ ಕಾರಣಮ್ ॥

ಅರ್ಥ ವಿಷ್ಣುಃ-ಶ್ರೀ ಹರಿಯು, ಭಕ್ತ್ಯೈವ-ಕೇವಲ ಭಕ್ತಿಯಿಂದಲೇ, ತುಷ್ಟಿಂ-ಸಂತೋಷವನ್ನು, ಆಭ್ಯೇತಿ-ಹೊಂದುತ್ತಾನೆ, ಅನ್ಯೇನ-ಭಕ್ತಿಯಿಂದಬೇರೆಯಾದ ಕೇನಚಿತ್-ಯಾವ ಕಾರಣದಿಂದಲೂ, ನ-ತುಷ್ಟಿ ಹೊಂದಲಾರ. ಸ ಏವ-ಆ ವಿಷ್ಣುವೇ, ಮುಕ್ತಿದಾತಾ ಚ-ಮುಕ್ತಿಯನ್ನು ಕೊಡತಕ್ಕವನೂ ಹೌದು. ತತ್ರ-ಮುಕ್ತಿಯನ್ನು ಕರುಣಿಸುವ ವಿಷಯದಲ್ಲಿ, ಭಕ್ತಿ:-ಭಕ್ತಿಯು, ಏಕಕಾರಣವರ್-ಮುಖ್ಯ ನಿಮಿತ್ತವಾಗಿದೆ.

ತಾತ್ಪರ್ಯ ಭಕ್ತಿಯಿಂದಲೇ ಶ್ರೀ ಹರಿಯು ಪ್ರಸನ್ನನಾಗುತ್ತಾನೆ. ಪ್ರಸಾದಕ್ಕೆ ಬೇರೆ ಯಾವುದೂ ಮುಖ್ಯ ಕಾರಣವಲ್ಲ, ಕೃಪಾದವೊಂದೇ ಪ್ರಧಾನ ಕಾರಣ. ಈ ರೀತಿಯಿಂದ ~~ಪರಿಪಕ್ವ~~ ಭಕ್ತಿಯಿಂದ ಪ್ರಸನ್ನನಾದ ಶ್ರೀ ಹರಿಯು ಮುಕ್ತಿಯನ್ನು ಕರುಣಿಸುತ್ತಾನೆ.

॥ ೧೭೮ ॥

ಬ್ರಹ್ಮಾದೀನಾಂಚಮುಕ್ತಾನಾಂತಾರತಮ್ಯಂತುಕಾರಣವರ್ ।
ತಾರತಮ್ಯಸ್ಥಿತಾನಾದಿರ್ನಿತ್ಯಾಭಕ್ತಿರ್ನಚೇತರತ್ ॥

ಅರ್ಥ ತಾರತಮ್ಯಸ್ಥಿತಾ-ಯೋಗ್ಯತೆಗನುಗುಣವಾಗಿ ನೀಚೋಚ್ಚಭಾವವನ್ನು ಹೊಂದಿದವ, ಅನಾದಿನಿತ್ಯಾ-ಉತ್ಪತ್ತಿ ವಿನಾಶ ಶೂನ್ಯವಾದ, ಭಕ್ತಿಃತು-ಭಕ್ತಿಯೇ, ಬ್ರಹ್ಮಾದೀನಾಂ-ಚತುರ್ಮುಖನೇ ಮೊದಲಾದ, ಮುಕ್ತಾನಾಂಚ-ಮುಕ್ತರಿಗೂ ಕೂಡಾ, ತಾರತಮ್ಯೇ-ನೀಚೋಚ್ಚತೆಯ ವಿಷಯದಲ್ಲಿ, ಕಾರಣವರ್-ನಿಮಿತ್ತವಾಗಿದೆ, ಇತರತ್-ಸ್ವರೂಪ ಭೂತ ಭಕ್ತಿಗಿಂತ ಬೇರೆಯಾದದ್ದು, ನ-ನಿಮಿತ್ತವಾಗಲಾರದು.

ತಾತ್ಪರ್ಯ ಭಕ್ತಿಯು ಜೀವನ ಸ್ವರೂಪ ಭೂತವಾದುದು ಆದುದರಿಂದ ಅನಾದಿ ನಿತ್ಯವೂ ಆಗಿದೆ. ಜೀವರ ಯೋಗ್ಯತೆಯನ್ನು ಅನುಸರಿಸಿ ಭಕ್ತಿಯೂ ತಾರತಮ್ಯೋಪೇತವಾಗಿದೆ. ಬ್ರಹ್ಮಾದಿ ಜೀವರಿಗೆ ಮುಕ್ತಿಯಲ್ಲಿ ತಾರತಮ್ಯಕ್ಕೆ, ಈ ತರತಮ

ಭಾವೋಪಪನ್ನವಾದ ಭಕ್ತಿಯೇ ಕಾರಣ.

॥ ೧೧೯ ॥

ಮಾನುಷೇಷ್ವಧಮಾ:ಕಿಂಚಿತ್ದ್ವೇಷಯುಕ್ತಾ:ಸದಾ
ಹರೌ ।
ದು:ಖನಿಷ್ಠಾಸ್ತತಸ್ತೇಽಪಿನಿತ್ಯಮೇವನಸಂಶಯ: ॥

ಅರ್ಥ ಮಾನುಷೇಷು ಮಾನವರಲ್ಲಿ, ಅಧಮಾ:-ಅಧಮರಾದವರು, ಹರೌ-ಶ್ರೀಹರಿಯಲ್ಲಿ, ಸದಾ-ಯಾವಾಗಲೂ, ಕಿಂಚಿತ್ ದ್ವೇಷಯುಕ್ತಾ:-ಕಲಿಯುದೆಸೆಯಿಂದ ಸ್ವಲ್ಪವಾದ ದ್ವೇಷದಿಂದ ಕೂಡಿದ್ದಾರೆ. ತತಃ ಆ ಕಾರಣಂದಿದ, ತೇಽಪಿ-ಅಧಮ ಮನುಷ್ಯರೂ, ನಿತ್ಯಂ ನಿರಂತರವಾಗಿ ದು:ಖನಿಷ್ಠಾ:-ಏವ-ದು:ಖದಲ್ಲಿಯೇ ಮುಳುಗಿರುತ್ತಾರೆ. ನ ಸಂಶಯ:-ಇದರಲ್ಲಿ ಸಂದೇಹವಿಲ್ಲ.

ತಾತ್ಪರ್ಯ ಅಧಮ ಮಾನವರೂ ನಿತ್ಯವು ನಿರಂತರವಾಗಿ ಶ್ರೀ ಹರಿಯಲ್ಲಿ ಸ್ವಲ್ಪವಾದರೂ ದ್ವೇಷ ಮಾಡುತ್ತಲೇ ಇದ್ದಾರೆ. ದ್ವೇಷವು ಅವರ ಸ್ವಭಾವ. ನಿತ್ಯದಲ್ಲೂ ಭಗವದ್ದ್ವೇಷ ಮಾಡಿದ ಫಲವಾಗಿ ಅವರು ನಿತ್ಯ ದು:ಖವನ್ನು ಭೋಗಿಸುವರು. ಇದರಲ್ಲಿ ಸಂದೇಹ ಇಲ್ಲವೇ ಇಲ್ಲ.

॥ ೧೨೦ ॥

ಮಧ್ಯಮಾಮಿಶ್ರಭೂತತ್ವಾನ್ನಿತ್ಯಂಮಿಶ್ರಫಲಾಃ
ಸ್ಮೃತಾ: ।
ಕಿಂಚಿದ್ಭಕ್ತಿಯುತಾನಿತ್ಯಮುತ್ತಮಾಸ್ತೇನವೈ ಮೋಕ್ಷಿಣಃ ॥

ಅರ್ಥ ಮಧ್ಯಮಾ:-ಮಧ್ವಮ ಜೀವರಾಶಿಗಳು, ಮಿಶ್ರಭೂತತ್ವಾತ್-ಹರಿಯ

ಸರ್ವೋತ್ಕರ್ಷದಲ್ಲಿ ಸಂದೇಹವುಳ್ಳವರಾಗಿ ವಿಶ್ರ ಜ್ಞಾನವೇ ಸ್ವರೂಪವುಳ್ಳವರಾದು ದರಿಂದ, ನಿತ್ಯಂ-ಯಾವಾಗಲೂ, ವಿಶ್ರ ಫಲಾಃ–ಸುಖ ದುಃಖಗಳ ವಿಶ್ರಣವೇ ಫಲವಾಗಿವುಳ್ಳವರೆಂದು ಸ್ಪೃತಾಃ–ಪ್ರಸಿದ್ಧರಾಗಿದ್ದಾರೆ. ಉತ್ತಮಾಃ-ಉತ್ತಮ ಮಾನವರು ನಿತ್ಯಂ-ಯಾವಾಗಲೂ ಕಿಂಚಿತ್ ಭಕ್ತಿಯುತಾಃ-ಸ್ವಲ್ಪ ಭಕ್ತಿಯಿಂದ ಕೂಡಿದವರು. ಆ ಕಾರಣದಿಂದ, ಅವರು ಮೋಕ್ಷಿಣಃ ಮುಕ್ತಿಯ ಆನಂದ ಅನುಭವವುಳ್ಳವರಾಗುತ್ತಾರೆ.

ತಾತ್ಪರ್ಯ ಮಧ್ಯಮ ಜೀವರಾಶಿಗಳು ಶ್ರೀ ಹರಿಯು ಸರ್ವೋತ್ಕರ್ಷ ವಿಷಯದಲ್ಲಿ ಸಂದೇಹವುಳ್ಳವರು. ಆದುದರಿಂದ ಅವರು ವಿಶ್ರಜ್ಞಾನಿಗಳು. ಅದರ ಫಲವಾಗಿ ~~ಅವರು ಸುಖ ದುಃಖ ವಿಶ್ರವಾದ ನಿತ್ಯ ಸಂಸಾರವನ್ನು ಅನುಭವಿಸುತ್ತಾರೆ. ಇಲ್ಲಿ~~ ವಿಶ್ರ ಭೂತಯೆಂಬುದಕ್ಕೆ ಭಕ್ತಿ ಹಾಗೂ ದ್ವೇಷಗಳ ವಿಶ್ರ ಭೂತರಾದವರು ಮಧ್ಯಮ ಮಾನವರೆಂದರ್ಥ ಮಾಡ ಕೂಡದು. ಅಜ್ಞಾನಿಗಳಾದ ರಾಜಸತಾಮಸರಿಗೂ ಹರಿ ದ್ವೇಷ ಇಲ್ಲವೆಂದು ಗೀತಾ ತಾತ್ಪರ್ಯದಲ್ಲಿ ಶ್ರೀ ಮದಾಚಾರ್ಯರೇ ಪ್ರಮಾಣದ ಆಧಾರದಿಂದ ಸ್ಪಷ್ಟ ಪಡಿಸಿದ್ದಾರೆ. "ತ್ರೈವಿಧ್ಯ ಮಾತ್ರಂ ವಿಷ್ಣೋರ್ಯೋ ಸರ್ವಾಧಿಕ್ಯೇ ಸಸಂಶಯಾಃ। ಅನಾಧಿಕ್ಯಂ ನಮನ್ಯಂತೇ ಶ್ರೀಶಾತ್ ರಾಜಸರಾಜಸಾಃ। ಅಜ್ಞಾ-ವಿಷ್ಣೋ ದ್ವೇಷ ಹೀನಾಃಸರ್ವೇ ರಾಜಸತಾಮಸಾಃ"

ಉತ್ತಮ ಜೀವರು ಸದಾ ಶ್ರೀ ಹರಿಯಲ್ಲಿ ಭಕ್ತಿಯುಳ್ಳವರು. ಈ ಭಕ್ತಿ ಬ್ರಹ್ಮ ದೇವರ ಭಕ್ತಿಯ ಮುಂದೆ ಅತ್ಯಲ್ಪ ಸದಾತನವಾದ ಭಕ್ತಿವುಳ್ಳವಾದುದರಿಂದ ಭಗವಂತ ಅವರಿಗೆ ನಿತ್ಯಾನಂದ ರೂಪನಾದ ಮುಕ್ತಿಯನ್ನು ಕರುಣಿಸಿದ್ದಾನೆ.

॥ ೧೨೧ ॥

"ಬ್ರಹ್ಮಣಃಪರಮಾಭಕ್ತಿಃಸರ್ವೇಭ್ಯಃಪರಮಸ್ತತಃ" ।
ಇತ್ಯಾದೀನಿಚವಾಕ್ಯಾನಿಪುರಾಣೇಷುಪೃಥಕ್ ಪೃಥಕ್ ॥

ಅರ್ಥ ಬ್ರಹ್ಮಣಃ–ಚತುರ್ಮುಖನ, ಭಕ್ತಿಃ- ಶ್ರೀಹರಿಭಕ್ತಿಯು, ಪರಮಾ ಉತ್ಕಷ್ಟವಾಗಿದೆ. ಅಂದರೆ ಎಲ್ಲಾ ಜೀವಿಗಳ ಭಕ್ತಿಯನ್ನು ಮೀರಿ ನಿಂತಿದೆ. ತತಃ

ಆ ಕಾರಣದಿಂದ, ಚತುರ್ಮುಖನು, ಸರ್ವೇಭ್ಯಃ-ಎಲ್ಲಾ ಜೀವಿಗಳಿಂದಲೂ, ಪರಮಃ-ಉತ್ಕೃಷ್ಟನಾಗಿದ್ದಾನೆ, ಇತ್ಯಾದೀನಿ-ಇದೇ ಮೊದಲಾದ, ವಾಕ್ಯಾನಿಚ ವಾಕ್ಯಗಳೂ, ಪುರಾಣೇಷು-ಪುರಾಣ ಗ್ರಂಥಗಳಲ್ಲಿ, ಪೃಥಕ್‌ಪೃಥಕ್-ಪ್ರತ್ಯೇಕ ಪ್ರತ್ಯೇಕವಾಗಿ, (ಸಂತಿ)-ಇವೆ.

ತಾತ್ಪರ್ಯ ಬ್ರಹ್ಮ ದೇವರು ಎಲ್ಲ ಜೀವರಿಗಿಂತಲೂ ಅತ್ಯಧಿಕ ಹರಿ ಭಕ್ತಿ ಮಾಡುವವರು. ಆದುದರಿಂದ ಅವರೇ ಜೀವೋತ್ತಮರು. ಅನಾದಿ ದ್ವೇಷಿಣೋ ದೈತ್ಯಾಃ ಎಂಬಲ್ಲಿಂದ ಆರಂಭಿಸಿ ಸರ್ವೇಭ್ಯಃ ಪರಮಸ್ತತಃ ಎಂಬಲ್ಲಿ ತನಕ ಪುರಾಣ ವಾಕ್ಯಗಳನ್ನೇ ಉದ್ಧರಿಸಿ ತಮ್ಮ ಗ್ರಂಥದಲ್ಲಿ ಸೇರಿಸಿದ್ದಾರೆ ಶ್ರೀವಾದಿರಾಜಾಚಾರ್ಯರು. ಭಕ್ತಿಯ ಮಹಿಮೆಯನ್ನು ದ್ವೇಷದ ಲಘುತ್ವವನ್ನು ಅವುಗಳ ಸ್ವರೂಪವನ್ನು ಪ್ರತಿಪಾದನೆ ಮಾಡತಕ್ಕ ಪ್ರಮಾಣ ವಾಕ್ಯಗಳು ಸಾಕಷ್ಟು ಬೇರೆ ಬೇರೆ ಪುರಾಣಗಳಲ್ಲಿ ವಿಪುಲವಾಗಿ ಉಪಲಬ್ಧವಾಗಿದೆ.

ಯಥಾ ದೇವೇ ತಥಾ ಗುರೌ ಎಂಬಲ್ಲಿ ಪ್ರಕೃತನಾದ ಗುರುವಿನ ಲಕ್ಷಣ ಅವನ ಮಹಿಮೆಯನ್ನು ಪಂಚರಾತ್ರ ಪ್ರಮಾಣದಿಂದ ವಿಶದೀಕರಿಸಿದ್ದಾರೆ.

"ಷಣ್ಣವತ್ಯಂಗುಲೋ ಯಸ್ತು ನ್ಯಗ್ರೋಧ ಪರಿಮಂಡಲಃ
ಸಪ್ತಪಾದಶ್ಚತುರ್ಹಸ್ತೋ ದ್ವಾತ್ರಿಂಶಲ್ಲಕ್ಷ್ಣೈರ್ಯುತಃ॥
ಅಸಂಶಯಃ ಸಂಶಯಚ್ಛಿತ್ ಗುರುರುಕ್ತೋ
ಮುನೀಷ್ವಿಭಿಃ ॥"

ಅರ್ಥ ಯಸ್ತು-ಯಾವ ಪುರುಷನು, ಷಣ್ಣವಂತ್ಯಗುಲಃ-96 ಅಂಗುಲದಷ್ಟು ಉನ್ನತವಾಗಿದ್ದಾನೋ, ನ್ಯಗ್ರೋಧ ಪರಿಮಂಡಲಃ-48 ಅಂಗುಲದಷ್ಟು ಎದೆಯ ಸುತ್ತಳತೆ ಉಳ್ಳವನೋ, ಸಪ್ತಪಾದಃ-ತನ್ನ ಏಳು ಪಾದ ತಲದಷ್ಟು ಉನ್ನತನಾಗಿದ್ದಾನೋ, ಚತುರ್ಹಸ್ತಃ-4 ಕೈಯುಳತೆಯಷ್ಟು ಉನ್ನತನೋ, ದ್ವಾತ್ರಿಂಶಲ್ಲಕ್ಷಣೈಃ-

12 ಲಕ್ಷಣಗಳಿಂದ, ಯುತಃ-ಕೂಡಿದ್ದಾನೋ, ಅಸಂಶಯಃ-ತತ್ತ್ವದ ಬಗ್ಗೆ ಸಂಶಯ ಶೂನ್ಯನು. ಸಂಶಯಚ್ಛಿತ್-ಇನ್ನೊಬ್ಬರ ಸಂದೇಹವನ್ನು ಪರಿಹಾರ ಮಾಡುವವನೊ ಃ-ಅವನು, ಮನೀಷಿಭಿಃ-ಜ್ಞಾನಿಗಳಿಂದ, ಗುರುಃ-ಗುರು ಎಂಬುದಾಗಿ, ಉಕ್ತಃ-ಹೇಳಲ್ಪಡತ್ತಾನೆ.

ವಿಶೇಷ ಯಸ್ತು-ಯಾವ ಪುರುಷನು ಪಣ್ಣವತ್ಯಂಗುಲಃ-ಪಾದವನ್ನು ಆರಂಭಿಸಿ ಕೇಶದವರೆಗೆಎತ್ತರವನ್ನು ಅಳತೆ ಮಾಡುವಾಗ[96] ತನ್ನ ಬೆರಳಿನತೊಂಭತ್ತಾರು ಬೆರಳು ಗಳ ಅಳತೆಯುಳ್ಳವನೋ ಇನ್ನೆರಡುಅಂಗುಲಪರಿಮಾಣಕ್ಕೆ ವಿತಸ್ತಿನಾತ್ತಳತೆಯಿಂದ(ಗೇಣಾ) ಎಂದು ಹೆಸರು. ಎಂಟು ವಿತಸ್ತಿ (ಗೇಣಾ) ಉದ್ದವಿರಬೇಕು. ನ್ಯಗ್ರೋಧ ಪರಿ ಮಂಡಲಃ-ನ್ಯಗ್ರೋಧವೆಂಬ ಸಂಜ್ಞೆಯಿಂದ ಅಂದರೆ 48 ಅಂಗುಲಗಳಿಂದ ಹೊಟ್ಟೆ ಯುಬೆನ್ನುಷಕ್ಕಗಳಸುತ್ತಲೂಮಂಡಲಾಕಾರವುಳ್ಳವನೋ ಎತ್ತರಕ್ಕಿಂತ ಅರ್ಧಪ್ರಮಾಣ ದಿಂದ ಮಂಡಲಾಕಾರವುಳ್ಳವನಾಗಬೇಕು. ಸಪ್ತಪಾದಃ-ಇದೇ ಪರಿಮಾಣವನ್ನುಪಾದ ದಿಂದ ಅಳತೆ ಮಾಡುವಾಗ ಏಳು ಪಾದಗಳುಳ್ಳವನೋ ಚತುರ್ಹಸ್ತಃ ಹಸ್ತವೆಂದರೆ ಎರಡು ಗೇಣು ಒಂದು ಮೊಳ. ಈ ಎತ್ತರ ಪರಿಮಾಣವನ್ನು ಹಸ್ತದಿಂದ ಅಳತೆ ಮಾಡುವಾಗ ನಾಲ್ಕು ಹಸ್ತಗಳುಳ್ಳವನೋ. ದ್ವಾತ್ರಿಂಶಲ್ಲಕ್ಷಣೈರ್ಯುತಃ-ಮುಂದೆ ತ್ತೆರಡು ಲಕ್ಷಣಗಳಿಂದ ಕೂಡಿರುವವನೋ, ಅವನು ಜ್ಞಾನಿಗಳಿಂದ ಗುರುವೆಂದು ಹೇಳಲ್ಪಟ್ಟವನು ಶರೀರದ ಎತ್ತರವನ್ನು ಪಾದದಿಂದ ಅಳತೆ ಮಾಡುವಾಗ ಏಳು ಪಾದಗಳುಳ್ಳವನು ಹೇಗೆ ಅಂದರೆ ಪುರುಷನು ತನಗನುಗುಣವಾಗಿ ಪಾದಗಳು ತನಗೆ ಯೋಗ್ಯವಾದ ದೃಢ್ಯವುಳ್ಳವುಗಳಾಗಬೇಕು, ಅತ್ಯಂತ ಗಿಡ್ಡನಾದ ಗಿಡ್ಡ ಪಾದ ಗಳುಳ್ಳ, ಗಿಡ್ಡ ಕೈಗಳುಳ್ಳ ಪುರುಷನು ಲಕ್ಷಣ ಶೂನ್ಯನಾಗುವನು. ಮುಂದೆ ಹತ್ತೆ ರಡು ಲಕ್ಷಣಗಳು-ಬಾಹುಗಳು, ಕಣ್ಣುಗಳು, ದವಡೆ, ಮೊಣಕಾಲು, ಉಗುರು ಗಳು ಈ ಐದರಲ್ಲಿ ದೈರ್ಘ್ಯವಿರಬೇಕು, ಚರ್ಮ, ಕೇಶ, ಬೆರಳುಗಳ ಗಂಟುಗಳಲ್ಲಿ [ಪರ್ವ] ಸೂಕ್ಷ್ಮತ್ವವಿರಬೇಕು. ಎರಡು ಹಸ್ತ ತಲಗಳಲ್ಲಿ, ಎರಡು ಪಾದ ತಳ ಗಳಲ್ಲಿ, ಕಣ್ಣುಗಳ ತುದಿಯಲ್ಲಿ. ತಾಲುಸ್ಥಾನದಲ್ಲಿ, ನಾಲಿಗೆಯಲ್ಲಿ, ಕೆಳ ತುಟಿಗಳಲ್ಲಿ, ಉಗುರುಗಳಲ್ಲಿ ಹೀಗೆ ಏಳು ಸ್ಥಾನಗಳಲ್ಲಿ ಕೆಂಪು ಬಣ್ಣವಿರಬೇಕು, ಎದೆ, ಹೊಟ್ಟೆ, ಜಣೆ, ಭುಜ, ಕೈ, ಮುಖ ಈ ಆರು ಸ್ಥಾನಗಳು ಎತ್ತರವಾಗಿರಬೇಕು. ಹಣೆ, ಕಟಿಪ್ರದೇಶ, ವಕ್ಷಸ್ಥಳ ಈ ಮೂರು ಸ್ಥಾನಗಳು ವಿಶಾಲವಾಗಿರಬೇಕು. ಮೊಣ

ಕಾಲುಗಳಲ್ಲಿಯೂ, ಕುತ್ತಿಗೆಯಲ್ಲಿಯೂ ಗುರ್ತಿಸ್ಥಾನ ಈ ಮೂರರಲ್ಲಿ ಹೃಸ್ವತ್ವವಿರ ಬೇಕು. ಸ್ವರ, ಬಲ, ಹೊಕ್ಕಳು ಈ ಮೂರರಲ್ಲಿ ಗಾಂಭೀರ್ಯವಿರಬೇಕು.

॥ ೦೨೩ ॥ ॥ ೧೨೪ ॥

तस्माद्ब्रह्मगुरुवर्ग्यः सर्वेषामेव सर्वदा ।
अन्येऽपि स्वात्मनोमुख्याः क्रमाद्गुरवः ईरिताः ॥

क्रमाल्लक्षणहीनाश्चलक्षणालक्षणैः समाः ।
मानुषाः मध्यमाः सम्यक् दुर्लक्षणयुतः कलिः ॥

ಅರ್ಥ ತಸ್ಮಾದ್-ಆ ಕಾರಣದಿಂದ(ಹಿಂದೆ ಹೇಳಿದ ಲಕ್ಷಣ ಪೂರ್ಣನು ಗುರು ಆದುದರಿಂದ, ಆ ಎಲ್ಲಾ ಲಕ್ಷಣಗಳೂ ಚತುರ್ವರ್ಗಿನಲ್ಲಿರುವುದರಿಂದ) ಸರ್ವೇಷಾಂ ಎಲ್ಲಾ ಜೀವರಾಶಿಗೂ ಸರ್ವದಾ-ಯಾವಾಗಲೂ. ಬ್ರಹ್ಮ-ಚತು ರ್ವರ್ಗಿ ಬ್ರಹ್ಮ ದೇವರು, ಮುಖ್ಯ: ಅತಿ ಪ್ರಧಾನರಾದ ಗುರುಃ-ಗುರುಗಳೆನಿಸಿದ್ದಾರೆ. ಸ್ವಾತ್ಮನ:-ತನಗಿಂತ, ಮುಖ್ಯಾ:-ಶ್ರೇಷ್ಠರಾದ, ಅನ್ಯೇಽಪಿ ಶೇಷಾದಿ ಇತರರೂ ಕೂಡಾ, ಕ್ರಮಾತ್-ಕ್ರಮದಿಂದ, ಲಕ್ಷಣಹೀನಾಃ-ಲಕ್ಷಣಗಳಿಂದ ರಹಿತರು. ಚ-ಮತ್ತು ಸ್ವಾತ್ಮನ:-ತನಗಿಂತ, ಮುಖ್ಯಾಃ-ಶ್ರೇಷ್ಠರಾದ ಕ್ರಮಾತ್-ಕ್ರಮದಿಂದ, ಗುರವಃ-ಗುರುಗಳೆಂಬುದಾಗಿ ಈರಿತಾಃ-ಜ್ಞಾನಿಗಳಿಗಿಂತ ಹೇಳಲ್ಪಟ್ಟಿದ್ದಾರೆ. ಮಾಧ್ಯಮಾಃ-ಮಾನುಷಾಃ-ಮಧ್ಯಮ ಜೀವರಾಶಿಗಳು, ಲಕ್ಷಣಾಲಕ್ಷಣೈ:-ಒಳ್ಳೆಯ ಲಕ್ಷಣಗಳು, ಮತ್ತು ದುರ್ಲಕ್ಷಣಗಳು. ಇವುಗಳಿಂದ, ಸಮಾ:-ಸಮಾನರಾಗಿದ್ದಾರೆ, ಕಲಿ:-ಕಲಿಪುರುಷನು, ಸಮ್ಯಕ್-ಸರಿಯಾಗಿ, ದುರ್ಲಕ್ಷಣಯುತ:-ದುರ್ಲಕ್ಷಣಗಳಿಂದ ಕೂಡಿದವನು.

ತಾತ್ಪರ್ಯ ಬ್ರಹ್ಮ ದೇವರಲ್ಲಿ ಮೂವತ್ತೆರಡು ಲಕ್ಷಣಗಳೂ ತುಂಬಿ ತುಳುಕುತ್ತಿವೆ. ಪಣ್ಣವ ತ್ಯಂಗುಲದಷ್ಟು ಜಿನ್ನತ್ಯ ಪಡೆದಿದ್ದಾರೆ. ಸ್ವಯಂ ಸಂಶಯ ರಹಿತರು. ಇತರ ಸರ್ವ ಸಂದೇಹ ನಿವಾರಕರು. ಈ ರೀತಿಯಾದ ಗುರುವಿನ ಲಕ್ಷಣ ಬ್ರಹ್ಮ ದೇವರಲ್ಲಿದೆಯೆಂದು ಆವರನ್ನು ಮುಖ್ಯ ಗುರುಗಳೆಂದು ಒಪ್ಪಲೇ ಬೇಕು. ಶೇಷ, ಇಂದ್ರ ಹೀಗೆ ಒರ ಬರುತ್ತಾ ಮನುಷ್ಯೋತ್ತಮರ ತನಕ ಗುರು ಲಕ್ಷಣ ಗಳಿಗೆ ಗುಣ ಮಾಟ್ಟ ಇಳಿಯುತ್ತಾ ಬರುತ್ತದೆ. ಆಂತೂ ಈ ಎಲ್ಲಾ ಮುಕ್ತಿಯೋಗ್ಯ ರಲ್ಲೂ ಗುರು ಲಕ್ಷಣ ಕಾಣಬಹುದು. ಅವರೆಲ್ಲರೂ ಕ್ರಮದಿಂದ ಗುರುಗಳೇ ಆದರೆ ಅವರ ಲಕ್ಷಣಕ್ಕನುಗುಣವಾಗಿ ಗುರು ಸ್ಥಾನದ ಮಟ್ಟವೂ ಇಳಿ ಮುಖವಾಗುತ್ತದೆ. ನಿತ್ಯ ಸಂಸಾರ ಯೋಗ್ಯರಾದ ಮಧ್ಯಮ ಜೀವರಾಶಿಗಳಲ್ಲಿ ಒಳ್ಳೆಯ ಲಕ್ಷಣ ಗಳೂ, ದುಷ್ಟ ಲಕ್ಷಣಗಳೂ, ಸಗ ಸಮಾನವಾಗಿ ಹಂಚಿ ಹೋಗಿವೆ. ಆಧ ಮಾಧಮನಾದ ಕಲಿಯಲ್ಲಿ ದುರ್ಲಕ್ಷಣಗಳೆಲ್ಲವೂ ಪರಿಯಾಗಿ ತುಂಬಿ ತುಳುಕುತ್ತವೆ.

॥ ೧೨೫ ॥

ಸಮ್ಯಕ್ಲಕ್ಷಣಸಂಪನ್ನೋಯದ್ದದ್ಯಾತ್ಸುಪ್ರ
ಸನ್ನಧೀಃ ।
ಶಿಷ್ಯಾಯುಸತ್ಯಂಭವತಿತತ್ಸರ್ವಂನಾತ್ರಸಂಶಯಃ ॥

ಅರ್ಥ ಸಮ್ಯಗ್ ಲಕ್ಷಣ ಸಂಪನ್ನಃ-ಹಿಂದೆ ಹೇಳಿದ ಸಲ್ಲಕ್ಷಣಗಳೆಂಬ ಸಂಪತ್ತಿ ನಿಂದ ಕೂಡಿದ ಗುರುವು, ಸುಪ್ರಸನ್ನಧೀಃ-ಪ್ರಸನ್ನವಾದ ಮನಸ್ಸುಳ್ಳವನಾಗಿ, ಯ ತ್-ಏನನ್ನು, ಶಿಷ್ಯಾಯ-ಶಿಷ್ಯನಿಗೆ, ದದ್ಯಾತ್-ಕೊಡುತ್ತಾನೋ, ತತ್ ಸರ್ವಂ-ಅದೆ ಲ್ಲವೂ, ಸತ್ಯಂ ಭವತಿ-ಸತ್ಯವಾಗುತ್ತೆ, ಫಲಿಸುತ್ತದೆ, ಅತ್ರ-ಈ ವಿಷಯದಲ್ಲಿ, ನ ಸಂಶಯಃ-ಸಂದೇಹವಿಲ್ಲ.

ತಾತ್ಪರ್ಯ ಹಿಂದೆ ಹೇಳಿದ ಲಕ್ಷಣ ಸಂಪನ್ನರೇ ನಿಜವಾದ ಗುರುಗಳು. ಇಂತಹ ಗುರುಗಳು ಪ್ರಸನ್ನಚಿತ್ತರಾಗಿ ಹರಸಿದರೆ, ಆಶೀರ್ವದಿಸಿದರೆ ಅವರ ಮಾತು ಶಿಷ್ಯ

ನಿಗೆ ಫಲಿಸುತ್ತದೆ. ಶಿಷ್ಯನ ಅಭ್ಯುನ್ನತಿಗೆ ಇದಕ್ಕಿಂತ ಸುಲಭ ಪಥ ಬೇರೊಂದಿಲ್ಲ. ಇದರಲ್ಲಿ ಸಂದೇಹವೂ ಇಲ್ಲ.

॥ ೧೨೬ ॥

ಅಗಮ್ಯತ್ವಾದ್ಧರಿಸ್ತಸ್ಮಿನ್ನಾವಿಷ್ಟೋವಮುಕ್ತಿದೋಭವೇತ್ ॥
ನಾತಿಪ್ರಸನ್ನಹೃದಯೋಯತ್ ದದ್ಯಾತ್ ಗುರುರಪ್ಯಸೌ ॥
ನತತ್ ಸತ್ಯಂಭವೇತ್ ತಸ್ಮಾದರ್ಚನೀಯೋಗುರುಃ
ಸದಾ ॥

ಅರ್ಥ ಹರಿಃ-ಶ್ರೀ ಹರಿಯು, ಅಗಮ್ಯತ್ವಾತ್-ಅಪ್ರಾಪ್ಯನಾದುದರಿಂದ ತಸ್ಮಿನ್ ಗುರುಗಳಲ್ಲಿ, ಆವಿಷ್ಟಃಸನ್-ಪ್ರವೇಶ ಮಾಡಿದವನಾಗಿ, ಮುಕ್ತಿದಃ-ಮುಕ್ತಿಪ್ರದನು, ಭವೇತ್-ಆಗುತ್ತಾನೆ. ನಾತಿಪ್ರಸನ್ನಹೃದಯಃ-ಅಶಂತಃಪ್ತನಾದ ಹೃದಯವುಳ್ಳ. ಅಸೌ-ಆತನು, ಗುರುರಪಿ-ಗುರುವಾಗಿದ್ದರೂ, ಯತ್-ಏನನ್ನು, ದದ್ಯಾತ್-ಕೊಡುತ್ತಾನೋ, ತತ್-ಅದು, ಸತ್ಯಂನಭವೇತ್-ಶಿಷ್ಯನಿಗೆ ಫಲಿಸದು. ತಸ್ಮಾದ್-ಆ ಕಾರಣದಿಂದಾಗಿ, ಗುರುಃ-ಗುರುಗಳು, ಸದಾ-ಯಾವಾಗಲೂ, ಅರ್ಚನೀಯಃ-ಸೇವಿಸಲ್ಪಡಬೇಕು.

ತಾತ್ಪರ್ಯ ಶ್ರೀ ಹರಿಯು ನವಗೆ ಸುಲಭನಲ್ಲ. ಆದುದರಿಂದ [illegible] ಹಿತನಾಗಿಯೇಭಕ್ತಕೋಟಿಗೆಜ್ಞಾನವನ್ನಿತ್ತು ಮುಕ್ತಿಯನ್ನೀಯುತ್ತಾನೆ. ಅವರಸ್ಮದಾದಿಗಳಿಗಾಗಿ ಗುರುಗಳ ಆಶೀರ್ವಾದ ಗುರುಗಳ ಪ್ರಸಾದಕ್ಕಾಗಿ ಸದಾ ಅವರ ಮನಸ್ಸೊಲಿಸುವ ಪ್ರಯತ್ನವೆಸಗಬೇಕು. ಚತುರ್ಮುಖ ಬ್ರಹ್ಮ ದೇವರು ತನ್ನ ಕಡೆಗೆ ಅಧ್ಯಯನಕ್ಕಾಗಿ ಬಂದ ಇಂದ್ರ ಹಾಗೂ ವಿರೋಚನರಿಗೆ ಒಂದೇ ರೀತಿಯ ಉಪದೇಶ ಮಾಡಿದ್ದಾರೆ. "ಯ ಏಷೋರಂತರಕ್ಷಣಿಪುರುಷೋ ದೃಶ್ಯತೇ. ಏಷ ಆತ್ಮೇತಿ ಹೋವಾಚ" ಅತಿ ಪ್ರಸನ್ನನಾಗಿ ಬ್ರಹ್ಮ ಇಂದ್ರನಿಗೆ ಉಪದೇಶವಿತ್ತ ಕಾರಣ ಆತ

ನಿಗೆ ಶ್ರೀ ಹರಿ ಸ್ವಾಮಿ ನಿಯಾಮಕ ಎನ್ನುವ ಜ್ಞಾನ ದೃಢವಾಯಿತು. ಅಪ್ರಸನ್ನನಾಗಿ ವಿರೋಚನನಿಗೆ ಉಪದೇಶವಿತ್ತ ಕಾರಣ ಆತನಿಗೆ 'ನಾನೇ ಬ್ರಹ್ಮ' ಎನ್ನುವ ವಿಪರೀತ ಜ್ಞಾನ ದೃಢವಾಯ್ತು. ಅಪ್ರಸನ್ನನಾದ ಗುರುವಿನ ಪ್ರಭಾವ ಶಿಷ್ಯನ ಮೇಲೆ ಪ್ರತಿ ಫಲಿಸುವ ಕ್ರಮಕ್ಕೆ ಇದೇ ಪ್ರಬಲ ಉದಾಹರಣೆಯಾಗಿದೆ.

ಸ್ವಾವರಾಣಾಂಗುರುತ್ವಂತುಭವೇತ್ಕಾರಣತಃಕ್ವಚಿತ್ ।
ಮುರ್ಯಾದಾರ್ಥಂತೇऽಪಿಪೂಜ್ಯಾಃನತುಯದ್ವತ್ಪರೋ
ಗುರುಃ ॥

ಇತ್ಯೇತತ್ಪಂಚರಾತ್ರೋಕ್ತಂಪುರಾಣೇಷ್ವನುಮೋ
ದಿತವ್ ॥

ಅರ್ಥ ಸ್ವಾವರಾಣಾಂ-ತನಗಿಂತ ಯೋಗ್ಯತಾದಿಂದ ಅಧಮರಿಗೆ, ಕಾರಣತಃ-ಯಾವುದೋ ಒಂದು ನೆಪದಿಂದ, ಕ್ವಚಿತ್-ಒಮ್ಮೊಮ್ಮೆ ಗುರುತ್ವಂತು-ಗುರುಸ್ಥಾನವೂ ಭವೇತ್-ಪ್ರಾಪ್ತವಾದೀತು. ತೇऽಪಿ-ಅಂತಹ ಗುರುಗಳೂ, ಮುರ್ಯಾದಾರ್ಥಂ-ಸತ್ ಸಂಪ್ರದಾಯವನ್ನು ಸಂರಕ್ಷಿಸುವುದಕ್ಕಾಗಿ, ಪೂಜ್ಯಾಃ-ಪೂಜಿಸಲ್ಪಡಬೇಕು. ಪರಃ-ಯೋಗ್ಯತಾಪೇಕ್ಷಯಾ ಉತ್ಕೃಷ್ಟನಾದ - ಗುರುಃ-ಗುರುಗಳು, ಯದ್ವತ್-ಯಾವರೀತಿಯಾಗಿ, ಪೂಜ್ಯಃ-ಪೂಜ್ಯರಾಗಿರುವರೋ ನತದ್ವತ್-ಅರೀತಿಯರಾಗಿ ಅಲ್ಲ. ಇತ್ಯೇತತ್-ಪಣ್ಣಿ ವತ್ಸಂಗಾಲೋ ಯಸ್ಯ...ಪರೋ ಗುರುಃ ಎಂಬ ವಾತು ಪಂಚರಾತ್ರೋಕ್ತಂ-ಪಂಚರಾತ್ರ ಆಗಮದಲ್ಲಿ ಹೇಳಲ್ಪಟ್ಟಿದ್ದು, ಪುರಾಣೇಷು-ಪುರಾಣಗಳಲ್ಲಿ ಅನುಮೋದಿತವ್-ಅಂಗೀಕರಿಸಲ್ಪಟ್ಟಿವೆ.

ತಾತ್ಪರ್ಯ ದೇವೇಂದ್ರನಿಗೆ ಬೃಹಸ್ಪತ್ಯಾಚಾರ್ಯರು ಗುರುಗಳಾದಂತೆ ಸ್ವಯೋಗ್ಯತಾಪೇಕ್ಷಯಾ ಅವರರೂ ಗುರುಗಳು ಆಗುವುದಿದೆ. "ಗುರುಗಳಿಗೆ ಪೂಜೆ ಮಾಡಬೇಕು" ಎನ್ನುವ ಶಿಷ್ಟಾಚಾರದ ಸೀಮೆಯನ್ನುಳಿಸುವುದಕ್ಕೋಸ್ಕರ ಸ್ವಾವರರಾಗಿದ್ದರೂ ಗುರು

ಗಳಿಗೆ ಗುರುತ್ವ ನಿಮಿತ್ತಕವಾದ ಗೌರವ ಪಲ್ಲಲೇಬೇಕು. ಆದರೆ ಸ್ವೋತ್ಪವಾಗುದು ಗಳಿಗೆ ಪಲ್ಲುವ ಪೂಜೆಯು ಸಾವ್ಯ ಈ ಅಧಮ ಗುರುಗಳಿಗೆ ಪಲ್ಲದು. "ಪಣ್ಣವಂ ತ್ಯಂಗುಲೋ ಯಸ್ತು.....ನತು ಯುದ್ಧತ್ ಪರೋಗುರು" ಎಂಬಲ್ಲಿಯವರೆಗೆ ಪಂಚ ರಾತ್ರದ ವಾಕ್ಯಗಳನ್ನೇ ಉದ್ಧರಿಸಿ ತನ್ನ ಗ್ರಂಥದಲ್ಲಿ ಸೇರಿಸಿದ್ದಾರೆ. ಈ ಪ್ರಮೇಯವು ಪ್ರತಿಪಾದನ ಮಾಡತಕ್ಕ ಪುರಾಣಗಳು ವಿಪುಲವಾಗಿ ಉಪಲಬ್ಧವಾಗಿವೆ.

"ಯದಾಮುಕ್ತಿಪ್ರದಾನಸ್ಯಸ್ವಯೋಗ್ಯಂಪಶ್ಯತಿ

ಧ್ರುವಮ್ ।

ರೂಪಂಹರೇಸ್ತದಾತಸ್ಯಸರ್ವಪಾಪಾನಿಭಸ್ಮಸಾತ್ ॥

ಯಾಂತಿಪೂರ್ವಾಣ್ಯುತ್ತರಾಣಿನಶ್ಲೇಷಂಯಾಂತಿ

ಕಾನಿಚಿತ್ ।

ಮೋಕ್ಷಶ್ಚನಿಯತಸ್ತಸ್ಮಾತ್ಸ್ವಯೋಗ್ಯಹರಿದರ್ಶನೇ ॥"

ಅರ್ಥ ಯದಾ-ಯಾವಾಗ, ಮುಕ್ತಿಪ್ರದಾನಸ್ಯ-ಮುಕ್ತಿಯನ್ನೀಯಲು, (ವ್ಯಕ್ತಂ)-ಅಭಿವ್ಯಕ್ತವಾದಂತಹ, ಸ್ವಯೋಗ್ಯಂ-ಆಯಾಯ ಜೀವರಿಗೆ ಯೋಗ್ಯವಾದ, ಬಿಂಬ ಭೂತನಾದ, ಹರೇಃ-ಶ್ರೀ ಹರಿಯ, ರೂಪಂ-ಸ್ವರೂಪವನ್ನು, ಪಶ್ಯತಿ-ನೋಡುತ್ತಾನೋ, ತದಾ-ಆವಾಗ, ತಸ್ಯ-ಬಿಂಬ ಸಾಕ್ಷಾತ್ಕಾರ ಪಡೆದ ಜೀವಿಯ, ಪೂರ್ವಾಣಿ-ಹಿಂದೆ ಮಾಡಿರತಕ್ಕ ಹಾಗೂ ಆಪ್ರಾರಬ್ಧವಾದ, ಸರ್ವ ಪಾಪಾನಿ-ಸಮಸ್ತ ಪಾಪ ಕರ್ಮಗಳು, ಧ್ರುವಂ-ನಿಶ್ಚಯವಾಗಿಯೂ, ಭಸ್ಮಸಾತ್-ಭಸ್ಮವಾಗಿ, ಯಾಂತಿ,ಹೋಗುತ್ತದೆ, ಉತ್ತರಾಣಿ-ಸಾಕ್ಷಾತ್ಕಾರದ ಉತ್ತರ ಕಾಲದಲ್ಲಿ ಮಾಡಿದ, ಕಾನಿಚಿತ್-ಕೆಲವು ಅಂದರೆ ತಮಾಗಿತ ಉಕ್ತವುರಿಗೆಸಗಿದ ಪಾಪಕ್ಕಿಂತ ಅತಿರಿಕ್ತವಾದ, ಪಾಪಾನಿ-ಪಾಪಗಳೆಲ್ಲವೂ, ಶ್ಲೇಷಂ-ನರಕಾದ್ಯನರ್ಥ ಫಲ ಕೊಡುವ ಸಾಮರ್ಥ್ಯವನ್ನು, ನ ಯಾಂತಿ-ಹೊಂದುವುದಿಲ್ಲ, ತಸ್ಮಾತ್-ಆದುದರಿಂದ

ಪ್ರಯೋಗ್ಯಹರಿದರ್ಶನೇ-ಅವಾವ ಜೀವರಿಗೆ, ಯೋಗ್ಯನಾದ ಬಿಂಬ ರೂಪಿ ಪರ ವಾಸುದೇವನ ಸಾಕ್ಷಾತ್ಕಾರವಾದಾಗ, ಮೋಕ್ಷಶ್ಚ-ಮೋಕ್ಷವು, ನಿಯತಃ-ನಿಯಮದಿಂದ ಆಗುತ್ತದೆ.

ತಾತ್ಪರ್ಯ ಶ್ರೀ ಹರಿಯು ಯೋಗ್ಯ ಜೀವರಾಶಿಗೆ ಮುಕ್ತಿಯನ್ನು ಕರುಣಿಸುವುದ ಕ್ಕೋಸ್ಕರ ಬಿಂಬ ರೂಪದ ದರ್ಶನವನ್ನು ಕೊಡುತ್ತಾನೆ. ಈ ಜ್ಞಾನ ಎಂಬಅಗ್ನಿ ಜೀವರಿಂದ ಹಿಂದೆ ಮಾಡಲ್ಪಟ್ಟ ಎಲ್ಲ ಪಾಪವನ್ನು ಸುಟ್ಟು ಬೂದಿ ಮಾಡುತ್ತೆ. ಆದರೆ ಮಾತ್ರ ಯಾವುದಾದರೊಂದು ಕರ್ಮ ಫಲ ಕೊಡಲು ತೊಡಗಿದ್ದರೆ ಜ್ಞಾನ ದಿಂದ ನಾಶವಾಗಲಾರದು. ಫಲ ಭೋಗದಿಂದಲೇ ಆ ಪ್ರಾರಬ್ಧ ಕರ್ಮಕ್ಕೆ ನಾಶ, ಹಾಗೆಯೇ ಬಿಂಬ ಸಾಕ್ಷಾತ್ಕಾರವಾದ ನಂತರವೂ ಮಾಡಿದ ಪಾಪಕರ್ಮವೂ ದುಃಖ ಫಲವನ್ನೀಯುವುದಿಲ್ಲ. ಆದರೆ ತನಗಿಂತ ಉತ್ತಮರಿಗೆ ಅಪರಾಧ ಮಾಡಿದರೆ ಅದರ ಫಲವನ್ನನುಭವಿಸಲೇ ಬೇಕು. ಜ್ಞಾನಿಯು ಪೂರ್ವಕರ್ಮಕ್ಕೆ ವಿನಾಶ, ಉತ್ತರ ಕರ್ಮಕ್ಕೆ ಅಶ್ಲೇಷ. ಹೀಗೆ ಅದಕ್ಕೂ ಇದೆ ನಿಯಮ. ಈ ಪ್ರಮೇಯದನ್ನು ಭವಿಷ್ಯತ್ ಪರ್ವತದ 2 ಶ್ಲೋಕಗಳು ಸಾರಿವೆ.

॥ ೧೩೦ ॥

ಭವಿಷ್ಯತ್ ಪರ್ವ ವಚನಮಿತ್ಯೇತತ್ ಸೂತ್ರಗಂ ತಥಾ ।
ಶ್ರುತಿಶ್ಚತತ್ಪರಾತದ್ವತ್"ತದ್ಯಥೇ"ತ್ಯವದತ್ ಸ್ಫುಟಮ್ ॥

ಅರ್ಥ ಇತ್ಯೇತತ್-ಹಿಂದೆ ಹೇಳಿದ 2 ಶ್ಲೋಕಗಳು, ಭವಿಷ್ಯತ್ಪರ್ವದಚ ಸಂ-ಭವಿಷ್ಯತ್ ಪರ್ವ ಪುರಾಣದ ವಾಕ್ಯಗಳು, ತಥಾ-ಹಾಗೆಯೇ, ಸೂತ್ರಗಂ-ಹಿಂದಿನ ಶ್ಲೋಕದಲ್ಲಿ ಹೇಳಿದ ಪ್ರಮೇಯಗಳು, "ತದಧಿಗಮೆ" ಇತ್ಯಾದಿ ಸೂತ್ರ ದಿಂದಲೂ ಪ್ರತಿಪಾದ್ಯವಾಗಿದೆ, ತತ್ಪರಾ-ಹಿಂದಿನ ಶ್ಲೋಕ ಸೂಕ್ತ ಪ್ರಮೇಯ ಯದಲ್ಲಿ ತಾತ್ಪರ್ಯವುಳ್ಳ, ತದ್ಯಥೇತಿ-"ತದ್ಯಥಾಪುಷ್ಕರಪಲಾಶೆ" ಇತ್ಯಾದಿ ಶ್ರುತಿಗಳು ತದ್ವತ್-ಸೂತ್ರ ಪುರಾಣದಂತೆ ಮುಕ್ತರ ಕರ್ಮದ ವಿಚಾರವನ್ನು, ಸ್ಫುಟಮ್-ಸ್ಪಷ್ಟವಾಗಿ, ಅವದತ್-ಹೇಳಿದೆ.

ತಾತ್ಪರ್ಯ "ಯದಾ ಮುಕ್ತಿ ಪ್ರದಾನಶ್ಚ" ಎಂಬ ಎರಡೂ ಶ್ಲೋಕಗಳೂ "ಭವಿಷ್ಯತ್ ಪರ್ವ"ವೆಂಬ ಪುರಾಣಾಂತರ್ಗತವಾದವುಗಳು.

ತದಾಧಿಗಮೇ ಉತ್ತರ ಪೂರ್ವಾಘಯೋಃ ಅಶ್ಲೇಷ ತದ್ವ್ಯಪದೇಶಾತ್ ಎಂಬ ಬ್ರಹ್ಮ ಸೂತ್ರವೂ ಬ್ರಹ್ಮನ ಅಧಿಗಮವಾದಾಗ ಜ್ಞಾನೋತ್ತರ ಅಘಕ್ಕೆ (ಪಾಪಕ್ಕೆ) ಅಶ್ಲೇಷವನ್ನೂ ಬ್ರಹ್ಮ ಜ್ಞಾನಕ್ಕಿಂತ ಪೂರ್ವದ ಅಘಕ್ಕೆ ವಿನಾಶವನ್ನು ಶ್ರುತಿಯ ಆಧಾರದಿಂದ ಸುಸ್ಪಷ್ಟವಾಗಿ ಸಾಧಿಸಿದೆ, "ತದ್ಯಥಾ ಪುಷ್ಕರ ಪಲಾಶೇ ಆಪೋ ನ ಶ್ಲಿಷ್ಯಂತ ಏವಮೇವಂ ವಿದಿ ಪಾಪಂ ಕರ್ಮ ನ ಶ್ಲಿಷ್ಯತೇ", "ತದ್ಯಥೇಷೀಕಾತೂಲಮಗ್ನೌ ಪ್ರೋತಂ ಪ್ರದೂಯೇತೈವಂ ಹೈವಾಸ್ಯ ಸರ್ವೇ ಪಾಪ್ಮಾನಃ ಪ್ರದೂಯಂತೇ" ಎಂಬ ಛಾಂದೋಗ್ಯದ ಎರಡೂ ಶ್ರುತಿಗಳೂ ಕಮಲ ಎಲೆಯ ಮೇಲೆ ಬಿದ್ದ ನೀರಿನಂತೆ ಜ್ಞಾನಿಗೆ ಪಾಪಕರ್ಮಗಳ ಸಂಬಂಧವಿಲ್ಲ. ಏಷೀಕಾ ಎಂಬ ಹುಲ್ಲು ಹಾಗೂ ಹತ್ತಿಯನ್ನು ಸುಡುವ ಅಗ್ನಿಯಂತೆ ಜ್ಞಾನವು ಜೀವಿಯ ಸಮಸ್ತ ಪೂರ್ವಾರ್ಜಿತ ಪಾಪವನ್ನು ಸುಟ್ಟು ಬೂದಿ ಮಾಡುತ್ತದೆ- ಎಂದು ಕರ್ಮವಿವೇಕವನ್ನು ಸುಸ್ಪಷ್ಟವಾಗಿ ಘೋಷಿಸುತ್ತಿದೆ.

ಮುಕ್ತಾಸ್ತು ಮಾನುಷಾದೇವಾನ್, ದೇವಾ ಇಂದ್ರಂ, ಸ
ಶಂಕರಮ್ ।
ಸಬ್ರಹ್ಮಾಣಂ ಕ್ರಮೇಣೈವ ತೇನಯಾಂತ್ಯಖಿಲಾ ಹರಿಮ್ ॥

ಅರ್ಥ ಮುಕ್ತಾಃ-ಮಾನುಷಾಸ್ತು-ಮುಕ್ತಿ ಯೋಗ್ಯರಾದ ಮಾನವರಾದರೂ ದೇವಾನ್-ದೇವತೆಗಳನ್ನು ಯಾಂತಿ-ಹೊಂದುತ್ತಾರೆ. ದೇವಾಃ-ದೇವತೆಗಳು, ಇಂದ್ರಂ ಇಂದ್ರನನ್ನು, ಕ್ರಮೇಣ ಕ್ರಮದಿಂದ ಯಾಂತಿ-ಹೊಂದುತ್ತಾರೆ. ಸಃ-ಇಂದ್ರನು, ಶಂಕರಂ-ರುದ್ರನನ್ನು, ಯಾತಿ ಹೊಂದುತ್ತಾನೆ. ಸಃ-ಶಂಕರನು ಅಂದರೆ ಶೇಷನು ಬ್ರಹ್ಮನನ್ನು, ಯಾತಿ ಹೊಂದುತ್ತಾನೆ. ಸಃ-ಆ ಬ್ರಹ್ಮನಿಂದ ಕೂಡಿಕೊಂಡು, ತೇನ ಅಖಿಲಾಃ-ಎಲ್ಲರೂ, ಹರಿಂ-ಶ್ರೀಹರಿಯನ್ನು ಯಾಂತಿ-ಹೊಂದುತ್ತಾರೆ.

॥ ೧೩೨ ॥

ಉತ್ತರೋತ್ತರವಶ್ಯಾಶ್ಚ ಮುಕ್ತಾಃರುದ್ರಪುರಸ್ಸರಾಃ ।
ನಿರ್ದೋಷಾಃನಿತ್ಯಸುಖಿನಃಪುನರಾವತ್ತಿವರ್ಜಿತಾಃ ॥
ಸ್ವೇಚ್ಛಯೈವ ರಮಂತೇs ತ್ರನಾನಿಷ್ಟಂತೇಷುಕಿಂಚನ ॥

ಅರ್ಥ ರುದ್ರಪುರಸ್ಸರಾಃ-ಶೇಷನೇ ಮೊದಲಾದ ಎಲ್ಲಾ, ಮುಕ್ತಾಃಚ-ಮುಕ್ತರೂ ಕೂಡಾ, ಉತ್ತರೋತ್ತರವಶ್ಯಾಃ-ತನಗಿಂತ ಉತ್ಕೃಷ್ಟರಾದ ಮುಕ್ತರ ಅಧೀನರು. ನಿರ್ದೋಷಾಃ-ಯಾವ ದುಃಖಾಪಾದಕದೋಷವೂ ಇಲ್ಲದವರು, ನಿತ್ಯಸುಖಿನಃ. ಯಾವಾಗಲೂ ಆನಂದ ಪೂರ್ಣರು, ಪುನಃ ಆವೃತ್ತಿವರ್ಜಿತಾಃ-ತಿರುಗಿ ಸಂಸಾರಕ್ಕೆ ಬರತಕ್ಕವರಲ್ಲ, ಸ್ವೇಚ್ಛಯೈವ-ತಮ್ಮ ಇಚ್ಛೆಯಿಂದಲೇ, ರಮಂತೇ-ಕ್ರೀಡಿಸುತ್ತಾರೆ, ಅತ್ರ-ಮುಕ್ತಿಅವಸ್ಥೆಯಲ್ಲಿ, ತೇಷು-ಮುಕ್ತರಲ್ಲಿ, ಕಿಂಚನ-ಯಾವುದೇ ಒಂದು ರೀತಿಯ, ಅನಿಷ್ಟಂ-ಅನಿಷ್ಟವು, ನ-ಇಲ್ಲ,

ತಾತ್ಪರ್ಯ ಶೇಷಾದಿ ಸಮಸ್ತ ಮುಕ್ತರೂ ಕೂಡಾ. ತಮಗಿಂತ ಉತ್ತಮರಾದ ಮುಕ್ತರ ಅಧೀನಕ್ಕೊಳ ಪಟ್ಟಿದ್ದಾರೆ. ಇದರಿಂದ ಅವರಿಗೆ ಅನಿಷ್ಟ ಇದೆ ಎಂದು ಅರ್ಥವಲ್ಲ. ಪ್ರತಿಯೊಬ್ಬ ಮುಕ್ತನೂ ಅಷ್ಟನ ಅವನ ಯೋಗ್ಯತಾ ಪ್ರಕಾರ ಆನಂದ ಪೂರ್ಣನು. ಮನ ಬಂದಂತೆ ವಿಹಾರ ಮಾಡಬಹುದು, ಅವನ ಇಚ್ಛೆಗೆ ವಿರುದ್ಧವಾದುದು ಅಲ್ಲಿ ಇಲ್ಲವೇ ಇಲ್ಲ. ಪ್ರತಿಯೊಬ್ಬರು ದುಃಖಪ್ರಾಪಕದೋಷ ಶೂನ್ಯರು. ಪಾರತಂತ್ರ್ಯಾದಿ ದೋಷಗಳಿವೆ. ಆದರೆ ಅವುಗಳಿಂದ ದುಃಖವಾಗುವುದಿಲ್ಲ. ಸಂಸಾರಕ್ಕೆ ಯಾರೂ ಮರಳಿ ಬರುವುದಿಲ್ಲ.

॥ ೧೩೩ ॥

ಅಸುರಾಃಕಲಿಪರ್ಯಂತಾಃಏವಂದುಃಖೋತ್ತರೋ
ತ್ತರಾಃ ।

ಕಲಿರ್ದುಃಖಾಧಿಕಸ್ತೇಷುತೇ ऽಪ್ಯೇವಂಬ್ರಹ್ಮವದ್
ಗಣಾಃ ॥

ಅಥ- ಏವಂ-ಇದೇ ರೀತಿಯಾಗಿ (ದೇವತೆಗಳು ಉತ್ತರೋತ್ತರ-ಸುಖಾಧಿಕರಾ ದಂತೆ), ಕಲಿಪರ್ಯಂತಾಃ-ಮನುಷ್ಯಾಧಮರನ್ನು ಆರಂಭಿಸಿ ಕಲಿಯ ತನಕ, ಅಸುರಾಃ- ಎಲ್ಲಾ ಆಸುರೀ ಸ್ವಭಾವದ ಜೀವಿಗಳು, ದುಃಖೋತ್ತರಾಃ-ಒಬ್ಬರಿಗಿಂತ ನಂತರ ದವರು ಹೆಚ್ಚು ಹೆಚ್ಚು ದುಃಖಿಷ್ಠರು, ತೇ ऽ-ಆ ದೈತ್ಯರಲ್ಲಿ, ಕಲಿಃ-ಕಲಿಯು, ಏವಂ-ಬ್ರಹ್ಮ ದೇವರು ಸುಖಾಧಿಕರಂತೆ, ದುಃಖಾಧಿಕಃ-ಎಲ್ಲರಿಗಿಂತಲೂ ಅತ್ಯಧಿಕ ವಾದ ದುಃಖ ಭೋಕ್ತೃ ಆಗಿದ್ದಾನೆ. ಬ್ರಹ್ಮವತ್ ಚತುರ್ಮುಖಿ ಪದವಿಗೆ ಬರ ತಕ್ಕ ಋಜುಗಳಂತೆ, ತೇ ऽಪಿ-ಆ ಕಲಿಯ ಸ್ಥಾನಕ್ಕೆ ಬರತಕ್ಕ ಜೀವಿಗಳೂ, ಗಣಾಃ- ಸಮೂಹ ರೂಪರಾಗಿ, (ಸಂತಿ-ಇದ್ದಾರೆ.)

ತಾತ್ಪರ್ಯ ಮನುಷ್ಯೋತ್ತಮರನ್ನು ಆರಂಭಿಸಿ ಚತುರ್ಮುಖಿನ ತನಕ ಎಲ್ಲಾ ಸಜ್ಜೀವಿಗಳು ಮೊದಲಿನವರಿಗಿಂತ ಅನಂತರದವರು ಹೆಚ್ಚು ಹೆಚ್ಚು ಸುಖಿವುಳ್ಳ ವರು. ಅದರಂತೆ ಮನುಷ್ಯಾಧಮರನ್ನಾರಂಭಿಸಿ ಅಸುರರ ತನಕ ಎಲ್ಲಾ ಅಧಮ ಜೀವರಾಶಿಗಳು ಮೊದಲಿನವರಿಗಿಂತ ಅನಂತರದವರು ಅಧಿಕಾಧಿಕ ದುಃಖಿ ಭೋಕ್ತೃಗಳು. ದೇವತೆಗಳಲ್ಲಿ ಚತುರ್ಮುಖಿನು ಅತ್ಯಧಿಕ ಸುಖಿ ಹೊಂದುವವ ನಾದರೆ ಕಲಿಯೇ ದುಃಖಭಾಜರಿಗೆ ಮೂರ್ಧನ್ಯ. ಅಂದರೆ ಕಲಿಗೆ ಅತ್ಯಧಿಕ ದುಃಖವು ಅವನಿಗಿಂತ ಹೆಚ್ಚಿನ ದುಃಖ ಬೇರೆ ಯಾರಿಗೂ ಇಲ್ಲ. ಚತುರ್ಮುಖಿಬ್ರಹ್ಮ ಪದವಿಯನ್ನಲಂಕರಿಸಲು ಋಜು ಜೀವಿಗಳ ಅನಂತಾನಂತ ವೃಂದವೇ ಸಾಲುಗಟ್ಟಿ ನಿಂತಿದೆ.ಅದರಂತೆ ಕಲಿಯ ಸ್ಥಾನಕ್ಕೆ ಬರತಕ್ಕ ದೈತ್ಯ ಸಂತತಿಯೂ ಅಕ್ಷಯವಾಗಿದೆ.

ತಥಾನ್ಯೇ ऽಪ್ಯಸುರಾಃಸರ್ವೇಗಣಾಃಯೋಗ್ಯತಯಾಸದಾ ।
ಬಹ್ವೃವಂಸರ್ವಜೀವೇಭ್ಯಃಸದಾಸರ್ವಗುಣಾಧಿಕಃ ॥

ಅರ್ಥ ತಥಾ-ಅದೇ ರೀತಿಯಾಗಿ. (ಕಲಿಯ ಸ್ಥಾನಕ್ಕೆ ಆಗಮಿಸುವ ದೈತ್ಯ ಸಂತತಿಯು ಅಕ್ಷಯವಾದಂತೆ) ಅನ್ಯೇs-ದ್ವಾಪರ"ರಂತಹ" ಇತರ. ಸರ್ವೇಪಿ-ಎಲ್ಲಾ ಅಸುರಾಃ-ಅಸುರರೂ, ಯೋಗ್ಯತೆಯ-ಸ್ವಭಾವದಿಂದಲೇ, ಗಣಾಃ-ಸಮುದಾಯರಾಗಿ ಸದಾ-ಯಾವಾಗಲೂ ಇದ್ದಾರೆ. ಏವಂ-ಈ ರೀತಿಯಾಗಿ, ಸರ್ವಜೀವೇಭ್ಯಃ-ಎಲ್ಲಾ ಜೀವರಿಂದಲೂ, ಬ್ರಹ್ಮಾ-ಚತುರ್ಮುಖ ಬ್ರಹ್ಮ ದೇವರು, ಸರ್ವಗುಣಾಧಿಕಃ-ಎಲ್ಲ ಗುಣಗಳಲ್ಲೂ ಅತ್ಯಧಿಕರಾಗಿದ್ದಾರೆ.

ತಾತ್ಪರ್ಯ ಕಲಿಯ ಸ್ಥಾನದಂತೆ ದ್ವಾಪರವೇ ಮೊದಲಾದ ಅಸುರರ ಸ್ಥಾನಕ್ಕೂ ಬರತಕ್ಕ ಅಸುರ ಸ್ವಭಾವದ ಜೀವಿಗಳ ಸಂಘವೇ ಸದಾ ಸಿದ್ಧವಾಗಿರುತ್ತದೆ. ಎಂದೆಂದೂ ಯಾವ ಕಲ್ಪದಲ್ಲೂ ಸ್ಥಾನ ಬರಿದಾಗದು. ಆದುದರಿಂದ ಎಲ್ಲಾ ಜೀವರಿಗಿಂತಲೂ ಚತುರ್ಮುಖನೇ ಸರ್ವ ಗುಣ ಸಂಪನ್ನ ಹಾಗೂ ಸರ್ವ ಶ್ರೇಷ್ಠ.

॥ ೧೩೫ ॥

ಮುಕ್ತೋೀs ಪಿಸರ್ವಮುಕ್ತಾನಾಮಾಧಿಪತ್ಯೇೀಸ್ಥಿತಃ
ಸದಾ ।
ಆಶ್ರಯಸ್ತಸ್ಯ ಭಗವಾನ್ ಸದಾನಾರಾಯಣಃ ಪ್ರಭುಃ ।

ಅರ್ಥ (ಬ್ರಹ್ಮಾ-ಚತುರ್ಮುಖನು,) ಮುಕ್ತೋೀsಪಿ-ಮುಕ್ತನಾದರೂ ಕೂಡಾ ಸರ್ವ ಮುಕ್ತಾನಾಂ-ಎಲ್ಲಾ ಮುಕ್ತರ ಆಧಿಪತ್ಯೇ-ಅಧಿ ಪತಿಯ ಸ್ಥಾನದಲ್ಲಿ, ಸದಾ-ಯಾವಾಗಲೂ, ಸ್ಥಿತಃ-ಇರುತ್ತಾನೆ. ತಸ್ಯ ಆ ಬ್ರಹ್ಮನಿಗೆ ಸದಾ-ಯಾವಾಗಲೂ ಭಗವಾನ್-ಐಶ್ವರ್ಯಸಂಪನ್ನನಾದ, ಪ್ರಭುಃ-ಸಮರ್ಥನಾದ, ನಾರಾಯಣಃ-ಶ್ರೀ ಮನ್ನಾರಾಯಣನು. ಆಶ್ರಯಃ-ಆಶ್ರಯದಾತ ಆಗಿದ್ದಾನೆ.

ತಾತ್ಪರ್ಯ ಚತುರ್ಮುಖ ಬ್ರಹ್ಮ ದೇವರು ಮುಕ್ತಿಯನ್ನು ಹೊಂದಿದವರಾದರೂ ಕೂಡಾ ಎಲ್ಲಾ ಮುಕ್ತರಿಗೂ ನಿಯಾಮಕರಾಗಿಯೇ ಸದಾ ಇರುತ್ತಾರೆ. ಇಂತಹ

ಮುಕ್ತ ಬ್ರಹ್ಮನಿಗೂ ಶ್ರೀ ಹರಿಯೇ ನಿಯಾಮಕನು

॥ ೧೩೬ ॥

ಇತ್ಯೃಗ್ಯಜುಃಸಾಮಾಥರ್ವಪಂಚರಾತ್ರೇತಿಹಾಸತಃ ।
ಪುರಣೇಭ್ಯಸ್ತಥಾನ್ಯೇಭ್ಯಃಶಾಸ್ತ್ರೇಭ್ಯೋನಿರ್ಣಯಃ
ಕೃತಃ ॥

ಆರ್ಥ ಇತಿ-ಈ ರೀತಿಯಾಗಿ, ಋಗ್ಯಜುಃಸಾಮಾಥರ್ವಪಂಚರಾತ್ರೇತಿಹಾ

ಸತಃ-ಋಗ್ವೇದ, ಯಜುರ್ವೇದ, ಸಾಮವೇದ, ಅಥರ್ವವೇದ, ಪಂಚರಾತ್ರ, ಮಹಾ ಭಾರತಾದಿ ಇತಿಹಾಸಗಳಿಂದ, ಪುರಾಣೇಭ್ಯಃ-ಪುರಾಣಗಳಿಂದ ತಥಾ-ಹಾಗೆ ಅನ್ಯೇಭ್ಯಃ-ಶಾಸ್ತ್ರೇಭ್ಯಃ-ಇತರ ಶಾಸ್ತ್ರಗಳ ಆಧಾರದಿಂದಲೂನಿರ್ಣಯಃ-ಈಸಿದ್ಧಾಂತವು ಕೃತಃ-ಮಾಡಲ್ಪಟ್ಟಿದೆ.

ತಾತ್ಪರ್ಯ ನಾಲ್ಕು ವೇದಗಳನ್ನೂ, ಇತಿಹಾಸಗಳನ್ನೂ ಹಾಗೂ ಬೇರೆ ಬೇರೆ ಶಾಸ್ತ್ರ ಸಂದರ್ಭಗಳನ್ನು ವಿಮರ್ಶ ಮಾಡಿ ಶ್ರೀವಾದಿರಾಜಾಚಾರ್ಯರು ಸರ್ವ ಶಾಸ್ತ್ರಗಳ ಸಾರ ಸಂಗ್ರಹಿಸಿದ್ದಾರೆ.

॥ ೧೩೭ ॥ ॥ ೧೩೮ ॥

ವಿಷ್ಣ್ವಜ್ಞಯೈವವಿದುಷಾತತ್ಪ್ರಸಾದಬಲೋನ್ನತೇಃ ।
ಆನಂದತೀರ್ಥಮುನಿನಾಪೂರ್ಣಪ್ರಜ್ಞಾಭಿಧಾಯುಜಾ ॥

ತಾತ್ಪರ್ಯಂಶಾಸ್ತ್ರಾಣಾಂಸರ್ವೇಷಾಮುತ್ತಮುಂಮುಯಾ
ಪ್ರೋಕ್ತವ್ ।
ಪ್ರಾಪ್ಯಾನುಜ್ಞಾಂವಿಷ್ಣೋರೇತತ್ ಜ್ಞಾತ್ವೈವವಿಷ್ಣು
ರಾಪ್ಯೋಕ ಸೌ ॥

ಅರ್ಥ ವಿಷ್ಣೋಃ-ಶ್ರೀಹರಿಯ, ಆಜ್ಞಯೈವ-ಆಜ್ಞೆಯಿಂದಲೇ. ತ
ಸಾದಬಲೋನ್ನತೇಃ-ಶ್ರೀವಿಷ್ಣುವಿನ ಪ್ರಸಾದದ ಸಾಮರ್ಥ್ಯದ ಅತಿಶಯದಿಂದ
ವಿದುಷಾ-ಜ್ಞಾನಿಯಾದ, ಪೂರ್ಣಪ್ರಜ್ಞಾಭಿಧಾಯುಜಾ-ಪೂರ್ಣಪ್ರಜ್ಞರೆಂಬ ಹ
ರುಳ್ಳ, ಆನಂದತೀರ್ಥಮುನಿನಾ-ಆನಂದತೀರ್ಥರೆಂಬ ಯತಿವರೇಣ್ಯರಿಂದ ಸ
ಶಾಸ್ತ್ರಗಳ ನಿರ್ಣಯವು ಮಾಡಲ್ಪಟ್ಟಿದೆ.

ವಿಷ್ಣೋಃ-ಶ್ರೀಹರಿಯ, ಆನುಜ್ಞಾಂ-ಒಪ್ಪಿಗೆಯನ್ನು, ಪ್ರಾಪ್ಯ-ಹೊ
ಮಯಾ-ನನ್ನಿಂದ (ಶ್ರೀಮದಾಚಾರ್ಯರಿಂದ) ಸರ್ವೇಷಾಂ-ಎಲ್ಲಾ, ಶಾಸ್ತ್ರಾಣಾ
ಶಾಸ್ತ್ರಗಳ, ಉತ್ತಮಾಂ-ಅತ್ಯುತ್ಕೃಷ್ಟವಾದ, ತಾತ್ಪರ್ಯಂ-ತಾತ್ಪರ್ಯವು, ಪ್ರೋಕ್ತಂ-ಹ
ಲ್ಪಟ್ಟಿದೆ. ಏತತ್-ಇದನ್ನು, ಜ್ಞಾತ್ವೈವ-ತಿಳಿದು, ಅಸೌ-ಆತ ವಿಷ್ಣೋಃ-
ಹರಿಯು, ಆಪ್ತಃ-ಹೊಂದಲ್ಪಡುತ್ತಾನೆ.

ತಾತ್ಪರ್ಯ ಶ್ರೀಪೂರ್ಣಪ್ರಜ್ಞರೆಂದು ಅವರ ಸನ್ಯಾಸಾಶ್ರಮದ ಶುಭ ಹಾ
ಸಾಧಕವಾದ ನಾಮಧೇಯ. ವೇದಾಂತ ಸಾಮ್ರಾಜ್ಯದ ಪಟ್ಟಾಭಿಷೇಕ ಕಾಲ
ಅವರು ಪಡೆದ ಪವಿತ್ರ ಹೆಸರು "ಆನಂದ ತೀರ್ಥ "ಎಂದು. ಇಂತಹ ಜ
ಗಳಾದ ಶ್ರೀಮದಾಚಾರ್ಯರು "ತಾನು ಭಗವಂತನ ಆಜ್ಞೆಗೆ ಒಳಪಟ್ಟು ಈ ಗ್ರ
ರಚಿಸಿದ್ದೇನೆ. ಆತನ ಪ್ರಸಾದ ಅತಿಶಯ ಸಾಮರ್ಥ್ಯವೇ ಶಾಸ್ತ್ರ ನಿರ್ಣಯ
ಪರಮ ಮುಖ್ಯ ಕಾರಣ" ಎನ್ನುತ್ತಾ ಭಗವಂತನಲ್ಲಿ ತಮಗಿರುವ ನಿಷ್ಠೆ ಹಾ
ಭಕ್ತಿಯನ್ನು ತೋರಿಸಿದ್ದಾರೆ.

ತಾತ್ಪರ್ಯ ಶ್ರೀ ಹರಿಯ ಆಜ್ಞೆ ಹಾಗೂ ಅನುಮತಿಯಿಂದಲೇ ಈ ಸರ್ವಶ
ಗಳ ತಾತ್ಪರ್ಯವು ಸಂಗ್ರಹ ಮಾಡಲ್ಪಟ್ಟಿದೆ. ಇದನ್ನು ತಿಳಿದರೇನೇ ಶ್ರೀಹರಿ
ಅನುಗ್ರಹಿಸಿ ದರ್ಶನ ನೀಯುತ್ತಾನೆ

ಇತಿ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯವಿರಚಿತ ಶ್ರೀಮನ್ಮ
ಭಾರತತಾತ್ಪರ್ಯನಿರ್ಣಯಸ್ಯ ಶ್ರೀಮತ್ಪರಮಪೂಜ್ಯಫಲಿಮಾರು
ಭಂಡಾರಿಕೇರಿ ಉಭಯಮಠಾಧೀಶ ಶ್ರೀ೧೦೮ಶ್ರೀವಿದ್ಯಾಮಾನ್ಯತೀರ್ಥ
ಪಾದ ಕರ ಕಮಲ ಸಂಜಾತ (ಶ್ರೀ ಫಲಿಮಾರು ಮಠೀಯ) ಶ್ರೀ೧೦೮ಶ್ರೀವಿ
ಧೀಶ ತೀರ್ಥ ವಿರಚಿತಃ ಪ್ರತಿ ಪದಾರ್ಥ ಪ್ರಕಾಶನೇ ಪ್ರಥಮಾಧ್ಯಾಯಃ "
ಮದ್ವೇಶಾರ್ಪಣಮಸ್ತು"